ಸಂಪುಟ: 05 ಸಂಚಿಕೆ: 65 ಪುಟಗಳು: 08 ಸೋಮವಾರ 19 ಮೇ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

ಮುಂಜಾನೆ ಮಾತು

ಜ್ಞಾನವು ಆತ್ಮದ ಶಕ್ತಿಯಾಗಿದೆ. ಯಾವ ವ್ಯಕ್ತಿ ಜ್ಞಾನಿಯಾಗಿರುತ್ತಾನೋ ಅವನು ಆತ್ಮಾವಲೋಕವನ್ನು ಪಡೆದುಕೊಳ್ಳುತ್ತಾನೆ.

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ದೇವೇಗೌಡರಿಗೆ 92ನೇ ಜನ್ಮದಿನ ಮೋದಿ, ಸಿಎಂ ಶುಭಾಶಯ

• ಉದಯವಾಹಿನಿ, ಬೆಂಗಳೂರು

ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರು ಇಂದು 92ನೇ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿದ್ದಾರೆ. ಭಾನುವಾರ ಪ್ರಧಾನಿ ನರೇಂದ್ರ ಮೋದಿ ಸೇರಿ ಹಲವು ನಾಯಕರು ದೇವೇಗೌಡರಿಗೆ ಹುಟ್ಟುಹಬ್ಬದ ಶುಭಾಶಯಗಳನ್ನು ಕೋರಿದ್ದಾರೆ. ನಮ್ಮ ಮಾಜಿ ಪ್ರಧಾನಿ ಎಚ್ ಡಿ ದೇವೇಗೌಡ ಜಿ ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು. ಅವರಿಗೆ ದೀರ್ಘಾಯುಷ್ಯ ಮತ್ತು ಆರೋಗ್ಯಕರ ಜೀವನಕ್ಕಾಗಿ ಪ್ರಾರ್ಥಿಸಿತ್ತೇನೆ ಎಂದು ಮೋದಿ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ. ಗೌಡರು ತಮ್ಮ ಮುತ್ಸದ್ದಿ ಮನೋಭಾವ ಮತ್ತು ಸಾರ್ವಜನಿಕ ಸೇವೆಯ ಬಗೆಗಿನ ಉತ್ಸಾಹಕ್ಕಾಗಿ ವ್ಯಾಪಕವಾಗಿ ಗೌರವಿಸಲ್ಪಡುತ್ತಾರೆ ಎಂದು ಪ್ರಧಾನಿ ಹೇಳಿದ್ದಾರೆ. ಹಲವು ವಿಷಯಗಳ ಕುರಿತು ಅವರ ಬುದ್ಧಿವಂತಿಕೆ ಮತ್ತು ಒಳನೋಟಗಳು ಶಕ್ತಿಯ ಮೂಲವಾಗಿವೆ ಎಂದು ಅವರು ಹೇಳಿದ್ದಾರೆ.

ನಾಡಿನ ಹಿರಿಯ ರಾಜಕಾರಣಿ, ಮಾಜಿ ಪ್ರಧಾನಿಗಳಾದ ಎಚ್.ಡಿ. ದೇವೇಗೌಡ ಅವರಿಗೆ ಜನ್ಮದಿನದ ಶುಭಾಶಯಗಳು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಮತ್ತಷ್ಟು ಕಾಲ ತಮಗೆ ಉತ್ತಮ ಆರೋಗ್ಯ ಮತ್ತು ಆಯಸ್ಸನ್ನು ದೇವರು ಕರುಣಿಸಲೆಂದು ಹಾರೈಸುತ್ತೇನೆ ಎಂದಿದ್ದಾರೆ. ದೇವೇಗೌಡರ ಜೊತೆಗಿನ ಚಿತ್ರವನ್ನೂ ಅವರು ಹಂಚಿಕೊಂಡಿದ್ದಾರೆ. ಹಿರಿಯ ರಾಜಕೀಯ ಧುರೀಣ, ಮುತ್ಸದ್ದಿ ನೇತಾರ, ಮಾಜಿ ಪ್ರಧಾನಮಂತ್ರಿಗಳಾದ ಎಚ್.ಡಿ.ದೇವೇಗೌಡರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು. ದೇವರ ಆಶೀರ್ವಾದ ಸದಾ ತಮ್ಮ ಮೇಲಿರಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪೋಸ್ಟ್ ಹಂಚಿಕೊಂಡಿದ್ದಾರೆ. 1933ರ ಮೇ 18ರಂದು ಹಾಸನ ಜಿಲ್ಲೆಯ ಹರದನಹಳ್ಳಿಯಲ್ಲಿ ಜನಿಸಿದ ದೇವೇಗೌಡರು, 1996ರ ಜೂನ್ 1ರಿಂದ 1997ರ ಏಪ್ರಿಲ್ 21ರವರೆಗೆ 11ನೇ ಪ್ರಧಾನ ಮಂತ್ರಿಯಾಗಿ ಕೆಲಸ ಮಾಡಿದ್ದರು.

ಮೇ 21ರಂದು ಆಂಧ್ರಪ್ರದೇಶಕ್ಕೆ ಕರ್ನಾಟಕದ ಆನೆಗಳ ಹಸ್ತಾಂತರ!

• ಉದಯವಾಹಿನಿ, ಬೆಂಗಳೂರು

ನೆರೆಯ ಆಂಧ್ರಪ್ರದೇಶಕ್ಕೆ ಮೇ 21 ರಂದು ಕುಮ್ಕಿ ಆನೆಗಳನ್ನು ಹಸ್ತಾಂತರಿಸಲಾಗುತ್ತಿದ್ದು, ಇದು ನೆರೆ ರಾಜ್ಯದೊಂದಿಗಿನ ಸೌಹಾರ್ದ ಸಂಬಂಧ ಹೆಚ್ಚಿಸುವುದರ ಜೊತೆಗೆ, ಕರ್ನಾಟಕ ಗಡಿ ಮತ್ತು ಆಂಧ್ರದ ಆನೆ-ಮಾನವ ಸಂಘರ್ಷಕ್ಕೆ ಪರಿಹಾರ ಒದಗಿಸಲಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ತಿಳಿಸಿದ್ದಾರೆ. ವಿಧಾನಸೌಧದ ಮುಂಭಾಗದ ಮೆಟ್ಟಿಲುಗಳ ಮೇಲೆ ನಡೆಯಲಿರುವ ವಿಧ್ಯುಕ್ತ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಆಂಧ್ರಪ್ರದೇಶದ ಉಪ ಮುಖ್ಯಮಂತ್ರಿ ಹಾಗೂ ಅರಣ್ಯ ಸಚಿವ ಪವನ್ ಕಲ್ಯಾಣ್ ಅವರಿಗೆ ಪಳಗಿಸಿದ ಆನೆಗಳನ್ನು ಹಸ್ತಾಂತರ ಮಾಡುವರು ಎಂದು ಹೇಳಿದ್ದಾರೆ. ಕಳೆದ ಆಗಸ್ಟ್‌ನಲ್ಲಿ ಬೆಂಗಳೂರಿನಲ್ಲಿ ನಡೆದ ಆನೆ-ಮಾನವ ಸಂಘರ್ಷ ಕುರಿತ ಅಂತಾರಾಷ್ಟ್ರೀಯ ಸಮ್ಮೇಳನದ ವೇಳೆ ಕರ್ನಾಟಕ - ಆಂಧ್ರಪ್ರದೇಶ, ತೆಲಂಗಾಣ ಹಾಗೂ ಕೇರಳ ರಾಜ್ಯಗಳ ನಡುವೆ ಆಗಿರುವ ಉತ್ತಮ ರೂಢಿಗಳ ವಿನಿಮಯ ಒಪ್ಪಂದದ ಭಾಗವಾಗಿ ಈ ಆನೆಗಳನ್ನು ಆಂಧ್ರಪ್ರದೇಶಕ್ಕೆ ಹಸ್ತಾಂತರಿಸಲಾಗುತ್ತಿದೆ ಎಂದು ಖಂಡ್ರೆ ಮಾಹಿತಿ ನೀಡಿದ್ದಾರೆ.

ಪಾಕ್ ಉಗ್ರ ನೆಲೆ ಧ್ವಂಸದ ಮತ್ತೊಂದು ವಿಡಿಯೋ ವೈರಲ್

• ಉದಯವಾಹಿನಿ, ನವದೆಹಲಿ

ಪಾಕ್ ಉಗ್ರ ನೆಲೆ ಧ್ವಂಸಗೊಳಿಸಿದ್ದ ಆಪರೇಷನ್ ಸಿಂಧೂರದ ಮತ್ತೊಂದು ವಿಡಿಯೋ ವೈರಲ್ ಆಗಿದೆ. ವಿಡಿಯೋವನ್ನು ವೆಸ್ಟರ್ನ್ ಕಮಾಂಡ್ ಹರಿಬಿಟ್ಟಿದೆ. ಉಗ್ರರ ವಿರುದ್ಧದ ಕಾರ್ಯಾಚರಣೆಯ ಪ್ಲ್ಯಾನ್, ತರಬೇತಿ ಮತ್ತು ಕಾರ್ಯಾಚರಣೆ ಕುರಿತಾದ ವಿಡಿಯೋ ಇದಾಗಿದೆ. ವಿಡಿಯೋದಲ್ಲಿ ಪಹಲ್ಗಾಮ್ ದಾಳಿಗೆ ಇದು ಪ್ರತೀಕಾರವಲ್ಲ, ನ್ಯಾಯ ಎಂದು ಸೇನೆ ಹೇಳಿಕೊಂಡಿದೆ. ಇನ್ನೂ ಆಪರೇಷನ್ ಸಿಂಧೂರವನ್ನು ಹೇಗೆ ಯೋಜಿಸಲಾಯಿತು, ತರಬೇತಿ ನೀಡಲಾಯಿತು ಮತ್ತು ಕಾರ್ಯಗತಗೊಳಿಸಲಾಯಿತು ಎಂಬ ಶೀರ್ಷಿಕೆಯೊಂದಿಗೆ ಈ ವಿಡಿಯೋವನ್ನು ಸೇನೆಯ ವೆಸ್ಟರ್ನ್ ಕಮಾಂಡ್ ಎಕ್ಸ್ ಖಾತೆಯಲ್ಲಿ ಹಂಚಿಕೊಳ್ಳಲಾಗಿದೆ. ವಿಡಿಯೋದಲ್ಲಿ ಪಾಕ್ ಪ್ರದೇಶದ ಮೇಲೆ ಮಿಲಿಟರಿ ದಾಳಿ ನಡೆಸುವ ದೃಶ್ಯ ಇದೆ. ಅಲ್ಲದೇ ಒಬ್ಬ ಸೈನಿಕ, ಆಪರೇಷನ್ ಸಿಂಧೂರ ಪಹಲ್ಗಾಮ್ ದಾಳಿಯೊಂದಿಗೆ ಪ್ರಾರಂಭವಾಯಿತು. ಇದು ನಮ್ಮ ಕೋಪವಲ್ಲ, ಭವಿಷ್ಯದಲ್ಲಿ ನೆನಪಿನಲ್ಲಿ ಉಳಿಯುವ ಪಾಠವನ್ನು ಕಲಿಸುವ ಸಂಕಲ್ಪ. ಇದು ನ್ಯಾಯ, ಸೇಡಲ್ಲ ಎಂದು ವಿಡಿಯೋದಲ್ಲಿ ಹೇಳಿಕೊಂಡಿದ್ದಾರೆ. ಕಳೆದ ಏಪ್ರಿಲ್ 22ರಂದು ಕಾಶ್ಮೀರದ ಪೆಹಲ್ಗಾಮ್‌ನ ಬೈಸರನ್ ಕಣಿವೆ ಪ್ರದೇಶದಲ್ಲಿ ನಾಲ್ವರು ಉಗ್ರರು ಓರ್ವ ವಿದೇಶಿ ಪ್ರಜೆ ಸೇರಿದಂತೆ 26 ಪ್ರವಾಸಿಗರನ್ನ ಗುಂಡಿಕ್ಕಿ ಕೊಂದಿದ್ದರು. ಇದಕ್ಕೆ ಪ್ರತೀಕಾರ ತೀರಿಸಿಕೊಳ್ಳಲು ಪಣ ತೊಟ್ಟಿದ್ದ ಭಾರತ ಪಾಕ್ ಮತ್ತು ಪಾಕ್ ಆಕ್ರಮಿತ ಕಾಶ್ಮೀರದ ಉಗ್ರರ ನೆಲೆಗಳ ಮೇಲೆ ದಾಳಿ ನಡೆಸಿದೆ. ದಾಳಿಯಲ್ಲಿ ಪಾಕ್ ಸೇನೆಯಾಗಲಿ ಅಥವಾ ನಾಗರಿಕರ ಮೇಲಾಗಲಿ ದಾಳಿ ಮಾಡದೇ ಉಗ್ರರ ನೆಲೆಗಳನ್ನು ಮಾತ್ರವೇ ಗುರಿಯಾಗಿಸಿ ದಾಳಿ ನಡೆಸಿತ್ತು.

ಸಂಪುಟ ಪುನಾರಚನೆ ಕಸರತ್ತು

ಹಿರಿಯ ಸಚಿವರ ಸ್ಥಾನಕ್ಕೆ ಕುತ್ತು



ಕಾಂಗ್ರೆಸ್ ಸರ್ಕಾರಕ್ಕೆ 2 ವರ್ಷ ಸಾಧನಾ ಸಮಾವೇಶಕ್ಕೆ ಸಿದ್ಧತೆ

• ಉದಯವಾಹಿನಿ, ಬೆಂಗಳೂರು

ಮೇ 20 ಕ್ಕೆ ರಾಜ್ಯ ಕಾಂಗ್ರೇಸ್ ಸರ್ಕಾರಕ್ಕೆ ಎರಡು ವರ್ಷಗಳು ತುಂಬಲಿದ್ದು, ಇದರ ಬೆನ್ನಲ್ಲೇ ಸಾಧನಾ ಸಮಾವೇಶಕ್ಕೆ ಕೈಪಡೆ ಸಿದ್ಧತೆ ನಡೆಸುತ್ತಿರುವಂತೆಯೇ ಸಚಿವ ಸಂಪುಟ ಪುನಾರಚನೆ ವಿಚಾರ ಮತ್ತೆ ಮುನ್ನೆಲೆಗೆ ಬಂದಿದೆ. ರಾಜ್ಯ ಸರ್ಕಾರಕ್ಕೆ 2 ವರ್ಷ ತುಂಬುತ್ತಿದ್ದಂತೆ ಸಂಪುಟದಲ್ಲಿ ಕೆಲವೊಂದು ಬದಲಾವಣೆಗಳು ಮಾಡಬೇಕು ಎಂಬ ಬೇಡಿಕೆ ಹಿಂದಿನಿಂದಲೂ ಇದ್ದವು. ಆದರೆ, ಸಿದ್ದರಾಮಯ್ಯ ಇದಕ್ಕೆ ಮಣಿ ಹಾಕಿರಲಿಲ್ಲ. ಈ ನಡುವೆ ಡಿಸಿಎಂ ಡಿಕೆ ಶಿವಕುಮಾರ್ ಅವರು ಈ ಹಿಂದೆ ಕೆಪಿಸಿಸಿ ಕಚೇರಿಯಲ್ಲಿ ಮಾಡಿದ್ದ ಭಾಷಣದ ಸಂದರ್ಭದಲ್ಲಿ ಸಂಪುಟ ಪುನಾರಚನೆ ಸುಳಿವು ನೀಡಿದ್ದರು. ಅಲ್ಲದೆ, ಸಚಿವರಿಗೆ ತ್ಯಾಗದ ಸಲಹೆಯನ್ನೂ ನೀಡಿದ್ದರು. ಆದರೆ ಯಾವುದೇ ಬೆಳವಣಿಗೆಗಳು ನಡೆದಿರಲಿಲ್ಲ. ಇದೀಗ ರಾಜ್ಯ ಸರ್ಕಾರಕ್ಕೆ 2 ವರ್ಷ ತುಂಬುತ್ತಿದ್ದಂತೆ ಸಂಪುಟ ಪುನಾರಚನೆ ಚರ್ಚೆ ಮತ್ತೆ ಮುನ್ನಲೆಗೆ ಬಂದಿದೆ.

ಸಚಿವ ಸಂಪುಟಕ್ಕೆ ಸೇರ್ಪಡೆ ಆಗಬೇಕು ಎಂಬ ಆಕಾಂಕ್ಷಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಈಗಾಗಲೇ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆ ಶಿವಕುಮಾರ್ ಹಾಗೂ ಹೈಕಮಾಂಡ್ ನಾಯಕರ ಜೊತೆ ಲಾಬಿ ನಡೆಸುತ್ತಿದ್ದಾರೆ. ಎಸ್‌ಟಿ ಅಭಿವೃದ್ಧಿ ನಿಗಮ ಹಗರಣದಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪದ ಮೇಲೆ ಯುವಜನ ಸೇವೆ, ಕ್ರೀಡೆ ಮತ್ತು ಎಸ್‌ಟಿ ಕಲ್ಯಾಣ ಸಚಿವ ಸ್ಥಾನಕ್ಕೆ ನಾಗೇಂದ್ರ ರಾಜೀನಾಮೆ ನೀಡಿದ್ದರು. ಬಳಿಕ ನಾಗೇಂದ್ರ ಅವರನ್ನು ಮತ್ತೆ ಸಂಪುಟಕ್ಕೆ ಸೇರಿಸಿಕೊಳ್ಳುವಪ ಭರಸೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೀಡಿದ್ದರು.

ನಾಗೇಂದ್ರ ಅವರನ್ನು ಮತ್ತೆ ನೇಮಿಸಿಕೊಳ್ಳಲು ಹೈಕಮಾಂಡ್ ಮನವೊಲಿಸಲು ಸಿದ್ದರಾಮಯ್ಯ ಅವರು ಹಲವಾರು ಬಾರಿ ಪ್ರಯತ್ನಿಸಿದ್ದರು. ಆದರೆ ಅವರು ಯಶಸ್ವಿಯಾಗಲಿಲ್ಲ. ಈ ಬಾರಿಯೂ ಸಿದ್ದರಾಮಯ್ಯ ನಾಗೇಂದ್ರ ಅವರನ್ನು ಮತ್ತೆ ನೇಮಿಸಿದರೆ, ಅದು ತಪ್ಪು ಸಂದೇಶವನ್ನು ರವಾನಿ ಸುತ್ತದೆ. ಆದರೆ, ಆಗಸ್ಟ್‌ನಲ್ಲಿ ಸಂಪುಟ ಪುನರ್ರಚಿಸುವ ಸಾಧ್ಯತೆ ಹೆಚ್ಚಿದೆ ಎಂದು ಕಾಂಗ್ರೇಸ್ ನಾಯಕರೊಬ್ಬರು ತಿಳಿಸಿದ್ದಾರೆ. ಹೈಕಮಾಂಡ್ ಅನುಮೋದನೆ ಪಡೆದ ನಂತರ ಸಂಪುಟ ಪುನಾರಚನೆಯ ಸಮಯದಲ್ಲಿ ಕಾರ್ಯಕ್ಷಮತೆ ತೋರದ 12 ಸಚಿವರನ್ನು ಕೈ ಬಿಡುವ ಸಾಧ್ಯತೆಗಳಿವೆ ಎಂದು ಕಾಂಗ್ರೇಸ್ ನಾಯಕರೊಬ್ಬರು ಹೇಳಿದ್ದಾರೆ.

ಸರ್ಕಾರವು ಎರಡು ವರ್ಷಗಳನ್ನು ಪೂರೈಸುತ್ತಿರುವುದರಿಂದ, ಸಂಪುಟ ಪುನರ್ರಚನೆಯಾಗುವ ಸಾಧ್ಯತೆಯಿದೆ. 2023 ರಲ್ಲಿ ಕಾಂಗ್ರೇಸ್ ಸರ್ಕಾರ ಅಧಿಕಾರಕ್ಕೆ ಬಂದಾಗ ನಾನು ಸಂಪುಟಕ್ಕೆ ಸೇರಲು ಸಾಧ್ಯವಾಗಲಿಲ್ಲ, ಈ ಬಾರಿ ಸೇರ್ಪಡೆಗೊಳ್ಳುವ ವಿಶ್ವಾಸವಿದೆ. ಆದರೆ ಈ ಬಗ್ಗೆ ಅಂತಿಮ ನಿರ್ಧಾರ ಸಿಎಂ ಮತ್ತು ಹೈಕಮಾಂಡ್‌ಗೆ ಬಿಟ್ಟದ್ದು ಎಂದು ಕಾಂಗ್ರೇಸ್ ಎಂಎಲ್‌ಸಿ ಸಲೀಮ್ ಅಹ್ಮದ್ ಹೇಳಿದ್ದಾರೆ.

ಈ ಮಧ್ಯೆ, ಖಾಲಿ ಇರುವ ನಾಲ್ಕು ಎಂಎಲ್‌ಸಿ ಹುದ್ದೆಗಳಿಗೆ ಸಿಎಂ ಮತ್ತು ಡಿಸಿಎಂ ಡಿ ಕೆ ಶಿವಕುಮಾರ್ ಪ್ರಸ್ತಾಪಿಸಿದ ಹೆಸರುಗಳಿಗೆ ಹೈಕಮಾಂಡ್ ಇನ್ನೂ ಒಪ್ಪಿಗೆ ನೀಡಿಲ್ಲ ಹೀಗಾಗಿ, ಈ ಹುದ್ದೆಗಳಿಗೆ ಆಕಾಂಕ್ಷಿಗಳನ್ನು ಲಾಬಿ ಮುಂದುವರಿಸಿದ್ದಾರೆ. ಮೇ 20 ರ ರ್‍ಯಾಲಿಯ ಬಳಿಕ ಸಿಎಂ ಮತ್ತು ಡಿಸಿಎಂ ಈ ವಿಷಯದ ಬಗ್ಗೆ ಹೈಕಮಾಂಡ್ ನಾಯಕರ ಸಲಹೆಯನ್ನು ತೆಗೆದುಕೊಳ್ಳಲಿದ್ದು, ಒಂದು ವಾರದೊಳಗೆ ಖಾಲಿ ಇರುವ ಎಂಎಲ್‌ಸಿ ಹುದ್ದೆಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆಗಳಿವೆ ಎಂದು ಕಾಂಗ್ರೇಸ್ ಮೂಲಗಳು ಮಾಹಿತಿ ನೀಡಿವೆ.

ಕಾರ್ಯಕ್ಷಮತೆ ತೋರದ 12 ಸಚಿವರನ್ನು ಕೈಬಿಡುವ ಸಾಧ್ಯತೆ

ಕೆಲಸ ಮಾಡದ ಸಚಿವರುಗಳು ಔಟ್

ಹಿರಿಯ ಸಚಿವರುಗಳಿಗೆ, ಆರೋಪ ಹೊತ್ತ ಮಂತ್ರಿಗಳಿಗೆ ಢವ ಢವ ಶುರುವಾಗಿದೆ. ಹೌದು.. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಸೇರಿ ಕೆಲವು ಸಚಿವರು ಆಕ್ಟೀವ್ ಹೊರತುಪಡಿಸಿದರೆ, ಕೆಲವರು ತಮ್ಮ ಇತಿಮಿತಿಯಲ್ಲಿ ಕೆಲಸ ಮಾಡ್ತಿದ್ದಾರೆ. 10ಕ್ಕಿಂತ ಹೆಚ್ಚು ಮಂದಿ ಸಚಿವರು ಕೆಲಸ ಇಲ್ಲದ ಆರೋಪ ಹೊತ್ತಿದ್ದಾರೆ. ಕ್ಷೇತ್ರಕ್ಕೆ ಸೀಮಿತವಾಗಿದ್ದಾರೆ. ಹೀಗಿರುವಾಗ ಅನುಭವಿಗಳು ಹಾಗೂ ಹೊಸಬರನ್ನು ಸಂಪುಟಕ್ಕೆ ಸೇರಿಸಿಕೊಂಡರೆ ಸರ್ಕಾರದಲ್ಲಿ ಹೊಸ ಹುಮ್ಮಸ್ಸು ಮೂಡಲಿದೆ ಎಂಬ ಅಭಿಪ್ರಾಯ ಪಕ್ಷದಲ್ಲೇ ಇದೆ. ಪಕ್ಷದ ವೇದಿಕೆಗಳಲ್ಲೂ ಚರ್ಚೆಯಾಗಿದೆ.

ಮುಖ್ಯಮಂತ್ರಿಗೆ ಹೊಸ ಟೆನ್ಷನ್

ಸಂಪುಟಕ್ಕೆ ನವಚೈತನ್ಯದ ಅವಶ್ಯಕತೆ ಇದೆ ಎಂಬ ಕೂಗು ಕಾಂಗ್ರೇಸ್‌ನಲ್ಲಿ ಜೋರಾಗುತ್ತಿದೆ, 2 ವರ್ಷದಿಂದ ಸಚಿವರುಗಳು ಅಧಿಕಾರ ಅನುಭವಿಸಿದ್ದಾರೆ.. ಹಿರಿಯ ಸಚಿವರುಗಳಿಗೆ ಗೇಟ್‌ಪಾಸ್ ಕೊಡಿ, ಕೆಲಸ ಮಾಡದ ಸಚಿವರುಳನ್ನು ಸಂಪುಟದಿಂದ ಕೈ ಬಿಡಿ, ನಮಗೂ ಒಂದು ಚಾನ್ಸ್ ಕೊಡಿ ಎಂದು ಶಾಸಕರು ದುಂಬಾಲು ಬಿದ್ದಿದ್ದಾರೆ. ಇದು ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಹೊಸ ಟೆನ್ಷನ್ ತಂದಿದೆ. ಸರ್ಕಾರಕ್ಕೆ 2 ವರ್ಷ ತುಂಬಿದ ಖುಷಿ ಒಂದು ಕಡೆ ಆದ್ರೆ.. ಆಕಾಂಕ್ಷಿಗಳನ್ನು ಸುಧಾರಿಸುವುದು ಮತ್ತೊಂದು ತಲೆನೋವು..

ಸಂಪುಟ ಪುನಾರಚನೆ ವಿಚಾರ ಮತ್ತೆ ಮುನ್ನೆಲೆಗೆ..!

1. ಸಿಎಂ ಮತ್ತು ಡಿಸಿಎಂ ಪ್ರಸ್ತಾಪಿಸಿದ ಹೆಸರುಗಳಿಗೆ ಹೈಕಮಾಂಡ್ ಇನ್ನೂ ಒಪ್ಪಿಗೆ ನೀಡಿಲ್ಲ
2. ಸಂಪುಟಕ್ಕೆ ನವಚೈತನ್ಯದ ಅವಶ್ಯಕತೆ ಇದೆ ಎಂಬ ಕೂಗು
3. ಮುಂದಿನ ಮೂರು ವರ್ಷವೂ ಯಥಾಸ್ಥಿತಿ ಗ್ಯಾರಂಟಿ ಮುಂದುವರಿಯುತ್ತವೆ
4. ಸಾಧನಾ ಸಮಾವೇಶ ಮುಗಿದ ಬಳಿಕ ಸರ್ಕಾರ ಉಳಿಯುವುದು ಅನುಮಾನ

ನಮ್ಮ ಸಾಧನೆಗಳನ್ನು ಹೇಳಿದರೆ, ಅವರಿಗೇನು ಸಮಸ್ಯೆ

'ನಾವು ಬಿಜೆಪಿಯವರ ಸಾಧನೆ ಬಗ್ಗೆ ಹೇಳುತ್ತಿಲ್ಲ. ಎರಡು ವರ್ಷಗಳಲ್ಲಿ ನಮ್ಮ ಸರ್ಕಾರ ಮಾಡಿದ ಸಾಧನೆ ತಿಳಿಸುತ್ತಿದ್ದೇವೆ. ನಮ್ಮ ಸಾಧನೆಗಳನ್ನು ಹೇಳಿದರೆ, ಅವರಿಗೇನು ಸಮಸ್ಯೆ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಪ್ರಶ್ನಿಸಿದರು. 'ಬಿಜೆಪಿಯವರು ತಮ್ಮ ಸಾಧನೆ ಬಗ್ಗೆ ಹೇಳಲು ಬೇಡ ಎಂದವರು ಯಾರು ದೇಶದಲ್ಲಿ ಅಧಿಕಾರದಲ್ಲಿ ಇರುವ ಬಿಜೆಪಿ ಸರ್ಕಾರ 11 ವರ್ಷಗಳಲ್ಲಿ ಮಾಡಿರುವ ಸಾಧನೆ ಬಗ್ಗೆ ತಿಳಿಸಲಿ' ಎಂದು ತಿರುಗೇಟು ಕೊಟ್ಟರು. 'ನಾವು ಅಧಿಕಾರ ಹಿಡಿದ ಮೊದಲ ದಿನದಿಂದಲೇ ಗ್ಯಾರಂಟಿ ಯೋಜನೆ ಬಂದ್ ಆಗುತ್ತವೆ ಎಂದು ಹೇಳುತ್ತಿದ್ದಾರೆ. ಆದರೆ, ಎರಡು ವರ್ಷಗಳಿಂದ ಅವು ಜಾರಿಯಲ್ಲಿವೆ. ಮುಂದಿನ ಮೂರು ವರ್ಷವೂ ಯಥಾಸ್ಥಿತಿ ಮುಂದುವರಿಯುತ್ತವೆ' ಎಂದು ಹೇಳಿದರು.

ರೈತರು, ಬಾಣಂತಿಯರು ಮತ್ತು ಪ್ರಾಮಾಣಿಕ ಅಧಿಕಾರಿಗಳ ಸಮಾಧಿಗಳ ಮೇಲೆ ರಾಜ್ಯ ಸರ್ಕಾರ ಸಾಧನಾ ಸಮಾವೇಶ

ಸಮಾಧಿಗಳ ಮೇಲೆ ರಾಜ್ಯ ಸರ್ಕಾರ ಸಾಧನಾ ಸಮಾವೇಶ

ಸಮಾವೇಶ ನಡೆಸಲು ಹೊರಟಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಕ್ರೋಶ ವ್ಯಕ್ತಪಡಿಸಿದರು. ಮೂರನೇ ಬಾರಿಗೆ ಬಿಯರ್ ದರ ಹೆಚ್ಚಾಗಿದೆ. ಖಜಾನೆ ಖಾಲಿಯಾಗಿದ್ದು, ನೌಕರರಿಗೆ ಸಂಬಳ ಕೊಡಲಾಗುತ್ತಿಲ್ಲ. ಮದ್ಯದ ದರ ಹೆಚ್ಚಳ ಆಗಿರುವುದರಿಂದ ಕಳ್ಳತನ ಹೆಚ್ಚಾಗಲಿದೆ. ಜನೌಷಧಿ ಯೋಜನೆಗೆ ಎಳ್ಳು ನೀರು ಹಾಕಿದೆ. ಎರಡು ವರ್ಷ ತುಂಬುತ್ತಿರುವ ಬೇಜವಬ್ದಾರಿ ಸರ್ಕಾರ ಇದು. ಎರಡು ವರ್ಷಗಳ ಸರ್ಕಾರದ ಸಾಧನೆ ಏನು, ಯಾವುದಾದರೂ ಅಣೆಕಟ್ಟೆ ಕಟ್ಟಿದ್ದಾರಾ, ಕಟ್ಟಿರುವ ಅಣೆಕಟ್ಟೆಯ ಎತ್ತರ ಜಾಸ್ತಿ ಮಾಡಿದ್ದಾರಾ, ಗೇಟ್ ರಿಪೇರಿ ಸಾಧ್ಯವಾಗಿಲ್ಲ. ಯಾವ ಪುರುಷಾರ್ಥಕ್ಕೆ ಸಾಧನಾ ಸಮಾವೇಶ' ಎಂದು ಪ್ರಶ್ನಿಸಿದರು. ಗುತ್ತಿಗೆದಾರರಿಗೆ ಬಿಲ್ ಪಾವತಿಯಗಿಲ್ಲ. ಕಮಿಷನ್ ಮೊತ್ತ ಶೇ 60ಕ್ಕೆ ಏರಿಕೆಯಾಗಿದೆ ಎಂದು ಗುತ್ತಿಗೆದಾರರು ಹೇಳುತ್ತಿದ್ದಾರೆ. ಮುಡಾ ಹಗರಣ, ವಾಲ್ಮೀಕಿ ನಿಗಮದ 187 ಕೋಟಿ ಲೂಟಿ ಮಾಡಿದರು. ಪ್ರಾಮಾಣಿಕ ಅಧಿಕಾರಿಗಳು ಬಲಿಯಾದರು, 2 ಸಾವಿರ ರೈತರ ಆತ್ಮಹತ್ಯೆಯಾಗಿದೆ. ಎಲ್ಲಾರ ಸಮಾಧಿ ಮೇಲೆ ಸಾಧನಾ ಸಮಾವೇಶ ನಡೆಸಲು ಹೊರಟಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಗ್ರೇಟರ್ ಬೆಂಗಳೂರು ಅಲ್ಲ, ಲೂಟರ್‌ಗಳ ಬೆಂಗಳೂರು

• ಉದಯವಾಹಿನಿ, ಬೆಂಗಳೂರು

ಮಳೆಯಿಂದ ಬೆಂಗಳೂರು ನಗರದಲ್ಲಿ ಉಂಟಾದ ಹಾನಿ ಕುರಿತು ರಾಜ್ಯ ಕಾಂಗ್ರೇಸ್ ಸರ್ಕಾರದ ಮೇಲೆ ತೀವ್ರ ವಾಗ್ದಾಳಿ ನಡೆಸಿರುವ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಸಂಗ್ರಹ ಆಗುತ್ತಿರುವ ಆದಾಯ, ತೆರಿಗೆ ಹಣ ಎಲ್ಲಿ ಹೋಗುತ್ತಿದೆ ಎಂದು ಪ್ರಶ್ನಿಸಿದ್ದಾರೆ.



ಈ ಬಗ್ಗೆ ಎಕ್ಸ್‌ನಲ್ಲಿ ಪ್ರತಿಕ್ರಿಯಿಸಿರುವ ಅವರು, 'ಗ್ರೇಟರ್ ಬೆಂಗಳೂರು ಹೆಚ

ಎಫ್‌ಎಸ್‌ಎಲ್ ವರದಿಯಲ್ಲಿ ಸ್ಫೋಟಕ ಅಂಶ ಬಯಲು!

• ಉದಯವಾಹಿನಿ ಬೆಂಗಳೂರು

ಬಿಡದಿ ಹೋಬಳಿ ಭದ್ರಾಪುರ ಗ್ರಾಮದಲ್ಲಿ ನಡೆದಿದ್ದ ಅಪ್ರಾಪ್ತ ವಯಸ್ಸಿನ ಬಾಲಕಿ ಸಾವಿನ ಪ್ರಕರಣ ಮಹತ್ವದ ತಿರುವು ಪಡೆದುಕೊಂಡಿದೆ. ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ ಲಭ್ಯವಾಗಿದ್ದು ಅತ್ಯಾಚಾರ ನಡೆದಿಲ್ಲವೆಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಬಿಡದಿ ಪೊಲೀಸ್ ಠಾಣೆಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸಗೌಡ ಅವರು ಈ ಕುರಿತು ಮಾಹಿತಿ ನೀಡಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಮೃತದೇಹದ 32 ವಿವಿಧ ಮಾದರಿಗಳನ್ನು ಎಫ್‌ಎಸ್‌ಎಲ್‌ಗೆ ರವಾನಿಸಲಾಗಿತ್ತು. ಕೂಲಂಕುಶವಾಗಿ ಪರೀಕ್ಷೆ ನಡೆಸಿರುವ ತಜ್ಞರು, ಅತ್ಯಾಚಾರ ನಡೆದಿರುವ ಬಗ್ಗೆ ಯಾವುದೇ ಕುರುಹು ಸಿಕ್ಕಿಲ್ಲ ಎಂದು ವರದಿಯಲ್ಲಿ ನಮೂದಿಸಿದ್ದಾರೆ. 10 ಮಂದಿ ಶಂಕಿತರಿದ್ದಾರೆ. ಆದರೆ, ಅವರ ಪಾತ್ರ ಸಾಬೀತಿಗೆ ಸಾಕ್ಷ್ಯಾಧಾರ ಸಿಕ್ಕಿಲ್ಲ. ಬಾಲಕಿಯ ತಲೆ ಹಾಗೂ ದೇಹದ ಇತರೆ ಭಾಗಗಳಲ್ಲಿ ಗಾಯದ ಗುರುತುಗಳು ಪತ್ತೆಯಾಗಿವೆ. ಆದರೆ, ಸಾವಿಗೆ ನಿಖರ ಕಾರಣ ತಿಳಿಯಲು ಮರಣೋತ್ತರ ಪರೀಕ್ಷೆಗಾಗಿ ಕಾಯಬೇಕಿದೆ ಎಂದು ಹೇಳಿದ್ದಾರೆ.

ಹಗಲು ಸೆಕ್ಯೂರಿಟಿ ಗಾರ್ಡ್ ಕೆಲಸ, ರಾತ್ರಿ ಕಳ್ಳತನ

• ಉದಯವಾಹಿನಿ ಬೆಂಗಳೂರು

ಭದ್ರತಾ ಸಿಬ್ಬಂದಿಯಾಗಿ (ಸೆಕ್ಯೂರಿಟಿ ಗಾರ್ಡ್) ಹಗಲಿನಲ್ಲಿ ಕೆಲಸ ಮಾಡುತ್ತಾ. ರಾತ್ರಿ ವೇಳೆ ಮನೆಗಳ್ಳತನ ಮಾಡುತ್ತಿದ್ದ ಇಬ್ಬರನ್ನು ಬಾಣಸವಾಡಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ನೇಪಾಳದ ಪದಂ ಲಕ್ಷ್ಮಿಶಾಯಿ, ಮುಕುಂದ್ ಶಾಯಿ ಬಂಧಿತರು. ಬಂಧಿತರಿಂದ ರೂ.10 ಲಕ್ಷ ಮೌಲ್ಯದ 117 ಗ್ರಾಂ ಚಿನ್ನಾಭರಣ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು. ಹಗಲು ಹೊತ್ತು ಬೀಗ ಹಾಕಿರುವ ಮನೆಗಳನ್ನು ಗುರುತಿಸಿ, ರಾತ್ರಿ ವೇಳೆ ಕಬ್ಬಿಣದ ಸಲಾಕೆಯಿಂದ ಬಾಗಿಲು ಮೀಟಿ ಕಳವು ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು. ಠಾಣಾ ವ್ಯಾಪ್ತಿಯ ಕಲ್ಯಾಣನಗರದ ಮೂರನೇ ಬ್ಲಾಕ್‌ನಲ್ಲಿ ಕಳವು ಮಾಡಿದ್ದರು. ಮನೆಯ ಮಾಲೀಕರು ಬಾಣಸವಾಡಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ದೂರು ಆಧರಿಸಿ, ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಜಿಬಿಎ ವಿರುದ್ಧ ಕೋರ್ಟ್‌ಗೆ: ಕಾತ್ಯಾಯಿನಿ ಚಾಮರಾಜ್

• ಉದಯವಾಹಿನಿ ಬೆಂಗಳೂರು

ಗ್ರೇಟರ್ ಬೆಂಗಳೂರು ಹೆಸರಲ್ಲಿ ಸ್ಥಳೀಯ ಆಡಳಿತದ ಅಧಿಕಾರವನ್ನು ಕಸಿಯಲು ರಾಜ್ಯ ಸರ್ಕಾರ ಹೊರಟಿದೆ. ಇದು, ಅಧಿಕಾರ ವಿಕೇಂದ್ರೀಕರಣ ನಿಯಮಕ್ಕೆ ವಿರುದ್ಧವಾಗಿದೆ. ಇದನ್ನು ವಿರೋಧಿಸಿ 'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯನ್ನು ಕೋರ್ಟ್‌ನಲ್ಲಿ ಪ್ರಶ್ನಿಸಲಾಗುವುದು ಎಂದು ಸಿವಿಕ್ ಬೆಂಗಳೂರು ಸಂಸ್ಥೆ ಕಾರ್ಯನಿರ್ವಾಹಕ ಟ್ರಸ್ಟಿ ಕಾತ್ಯಾಯಿನಿ ಚಾಮರಾಜ್ ತಿಳಿಸಿದ್ದಾರೆ ಸಿವಿಕ್ ಬೆಂಗಳೂರು ಸಂಸ್ಥೆ ಶನಿವಾರ ಹಮ್ಮಿಕೊಂಡಿದ್ದ 'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ' ಕುರಿತ ಸಂವಾದ ಕಾರ್ಯಕ್ರಮದ ಬಳಿಕ ಅವರು ಮಾಹಿತಿ ನೀಡಿದರು. ಸಂವಿಧಾನದ 74ನೇ ತಿದ್ದುಪಡಿಯು ನಗರ ಸ್ಥಳೀಯ ಸಂಸ್ಥೆಗಳನ್ನು ಸಾಂವಿಧಾನಿಕಗೊಳಿಸಿತ್ತು. ಅಧಿಕಾರ ವಿಕೇಂದ್ರೀಕರಣದ ಚೌಕಟ್ಟು ಒದಗಿಸಿತ್ತು. ಗ್ರೇಟರ್ ಬೆಂಗಳೂರು ಕಾಯ್ದೆ ಈ ತಿದ್ದುಪಡಿಯನ್ನು ಉಲ್ಲಂಘಿಸುತ್ತದೆ ಎಂದು ಸಂವಾದದಲ್ಲಿ ತಜ್ಞರು ಅಭಿಪ್ರಾಯಪಟ್ಟರು. ರಾಜ್ಯ ಸರ್ಕಾರ ಸ್ಥಳೀಯ ಆಡಳಿತ ವಿಚಾರದಲ್ಲಿ ಮಧ್ಯಪ್ರವೇಶಿಸಬಾರದು. ಮುಖ್ಯಮಂತ್ರಿಯವರು ರಾಜ್ಯದ ಆಡಳಿತ ಮಾಡಬೇಕೇ ಹೊರತು ನಗರದ ಆಡಳಿತದಲ್ಲಿ ಹಸ್ತಕ್ಷೇಪ ಮಾಡಬಾರದು. ಮೂರನೇ ಹಂತದ ಸರ್ಕಾರಕ್ಕೆ ಅಧಿಕಾರ ಹಸ್ತಾಂತರಿಸಬೇಕು ಎಂದು ಕಾಯ್ದೆಗಳು ಹೇಳಿದರೆ, ಸರ್ಕಾರವು ಅದಕ್ಕೆ ವಿರುದ್ಧವಾಗಿ ಸ್ಥಳೀಯಾಡಳಿತಗಳ ಅಧಿಕಾರವನ್ನು ಹಿಂಪಡೆಯುತ್ತಿದೆ ಎಂದು ಆರೋಪಿಸಿದರು.

ಅಪಘಾತ: ಪುತ್ರಿ ಸಾವು, ತಾಯಿಗೆ ಗಾಯ

• ಉದಯವಾಹಿನಿ ಬೆಂಗಳೂರು

ಯಲಹಂಕ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಮೇಲೇತುವೆಯಲ್ಲಿ ಕ್ಯಾಂಟರ್ ವಾಹನ ಹಾಗೂ ಆಟೋ ನಡುವೆ ಸಂಭವಿಸಿದ ಅಪಘಾತದಲ್ಲಿ ಪುತ್ರಿ ಮೃತಪಟ್ಟು, ತಾಯಿ ಗಾಯಗೊಂಡಿದ್ದಾರೆ.ಯಲಹಂಕ ನ್ಯೂಟೌನ್ ನಿವಾಸಿ ಪ್ರಿಯಾ (26) ಮೃತರು. ಇವರ ತಾಯಿ ಮಾಲತಿ ಹಾಗೂ ಆಟೋ ಚಾಲಕನಿಗೆ ಗಾಯವಾಗಿದೆ. ರಾತ್ರಿ ಸುಮಾರು 10 ಗಂಟೆ ಸುಮಾರಿಗೆ ಬಳ್ಳಾರಿ ರಸ್ತೆಯ ಅಟೈಡ್ ಹೋಟೆಲ್ ಎದುರಿನ ಮೇಲೇತುವೆಯಲ್ಲಿ ದುರ್ಘಟನೆ ನಡೆದಿದೆ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು. ಪ್ರಿಯಾ ಮತ್ತು ಅವರ ತಾಯಿ ಮಾಲತಿ ರಾತ್ರಿ ಕಮರ್ಷಿಯಲ್ ಸ್ಟ್ರೀಟ್‌ನಿಂದ ಆಟೋದಲ್ಲಿ ಮನೆಗೆ ಹೊರಟ್ಟಿದ್ದರು. ರಾತ್ರಿ ಸಮಾರು 10 ಗಂಟೆ ಸುಮಾರಿಗೆ ಬಳ್ಳಾರಿ ಮುಖ್ಯರಸ್ತೆಯ ಮೇಲ್ವೇತುವೆಯಲ್ಲಿ ಸೇತುವೆಯಲ್ಲಿ ಹೋಗುತ್ತಿದ್ದರು. ಈ ವೇಳೆ ರಸ್ತೆಯ ಬದಿ ಪಾರ್ಕಿಂಗ್ ಸಿಗ್ನಲ್ ಹಾಕದೆ ನಿಲುಗಡೆ ಮಾಡಿದ್ದ ಕ್ಯಾಂಟರ್ ವಾಹನಕ್ಕೆ ಆಟೋ ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ ಆಟೋ ರಸ್ತೆಗೆ ಉರುಳಿ ಬಿದ್ದ ಪರಿಣಾಮ ಪ್ರಿಯಾ ಅವರ ತಲೆ ಹಾಗೂ ಕುತ್ತಿಗೆಯ ಭಾಗಕ್ಕೆ ಗಂಭೀರ ಗಾಯವಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮಾಲತಿ ಹಾಗೂ ಆಟೊ ಚಾಲಕ ಗಾಯಗೊಂಡಿದ್ದು, ಸ್ಥಳೀಯರು ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಬೆಂಗಳೂರು ಬಂದ್‌ಗೆ ಸಜ್ಜಾದ ವಾಟಾಳ್ ನಾಗರಾಜ್!

ಗ್ರೇಟರ್ ಬೆಂಗಳೂರು ಕಾಯ್ದೆ ಹಿಂದಕ್ಕೆ ಪಡೆಯುವಂತೆ ಕನ್ನಡಪರ ಚಳುವಳಿಕಾರ ವಾಟಾಳ್ ನಾಗರಾಜ್ ಹೇಳಿಕೆ

• ಉದಯವಾಹಿನಿ ಬೆಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ವಿಸರ್ಜಿಸಿ ಗ್ರೇಟರ್ ಬೆಂಗಳೂರು ಪ್ರದೇಶ ಮಾಡಲು ಹೊರಡಿಸಿರುವ ಅಧಿಸೂಚನೆ ಹಿಂಪಡೆಯಬೇಕು. ಇಲ್ಲದಿದ್ದರೆ, ಬೃಹತ್ ಸಾರ್ವಜನಿಕ ಚಳವಳಿ ರೂಪಿಸಿ, ಬೆಂಗಳೂರು ಬಂದ್‌ಗೆ ಕರೆ ನೀಡಲಾಗುವುದು,'' ಎಂದು ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ರಾಜ್ಯ ಸರಕಾರಕ್ಕೆ ಎಚ್ಚರಿಕೆ ನೀಡಿದರು.

ಉದಯವಾಹಿನಿ ಚಿತ್ರ

ಬಿಬಿಎಂಪಿ ವಿಭಜನೆಯನ್ನು ಒಪ್ಪಲು ಸಾಧ್ಯವಿಲ್ಲ. ಹೊಸದಾಗಿ ಗ್ರೇಟರ್ ಬೆಂಗಳೂರು ನಿರ್ಮಾಣ ಮಾಡುವುದರಿಂದ ನಗರದ ನಾಗರಿಕರು ಪರದಾಡಬೇಕಾದ ಸ್ಥಿತಿ ನಿರ್ಮಾಣವಾಗುತ್ತದೆ. ಇದೊಂದು ಕೆಟ್ಟ ಸಂಸ್ಕೃತಿಗೆ ನಾಂದಿಯಾಗಲಿದೆ. ಆದ್ದರಿಂದ ಕೆಂಪೇಗೌಡರು ಕಟ್ಟಿದ ಬೆಂಗಳೂರನ್ನು ವಿಭಜಿಸದೆ ಹಾಗೆಯೇ ಉಳಿಸಿಕೊಂಡು ಆದಷ್ಟು ಶೀಘ್ರವಾಗಿ ಚುನಾವಣೆ ನಡೆಸಬೇಕು ಎಂದು ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

ಚುನಾವಣೆ ಮುಂದೂಡುವ ಉದ್ದೇಶದಿಂದ ಗ್ರೇಟರ್ ಬೆಂಗಳೂರು ಪ್ರದೇಶ ಮಾಡಲು ಮುಂದಾಗಿರುವುದು ಅಕ್ಷಮ್ಯ. ಸರಕಾರ ಇದನ್ನೆಲ್ಲ ಮಾಡುವ ಬದಲು ಬೆಂಗಳೂರಿನ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚುವ ಕೆಲಸ ಮಾಡಬೇಕು, ಎಂದು ಒತ್ತಾಯಿಸಿದರು. ಸರಕಾರ ನಗರದ ಆಡಳಿತದಲ್ಲಿ ಮಧ್ಯಪ್ರವೇಶ ಮಾಡುವುದು ಸಂವಿಧಾನಕ್ಕೆ ಮಾಡುವ ಅಪಮಾನ. ಬಿಬಿಎಂಪಿಯಲ್ಲಿ ಬೆಂಗಳೂರಿನ ಜನತೆ ಆಯ್ಕೆ ಮಾಡಿದ ಮೇಯರ್ ಇರುತ್ತಿದ್ದರು. ಆದರೆ, ಜಿಬಿಎ ಅನುಷ್ಠಾನದಿಂದ ನಗರದ ಜನತೆಯಿಂದ ಆಯ್ಕೆಯಾಗದ ಮುಖ್ಯಮಂತ್ರಿ, ಸಚಿವರು ಅಧಿಕಾರ ಚುಕ್ಕಾಣಿ ಹಿಡಿಯಲಿದ್ದಾರೆ.

> ನಗರ ತಜ್ಞ ಆರ್ .ಟಿ.ರಘುನಂದನ್ ಮಾತನಾಡಿ, ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕವು ಕೆಲವರ ಕೈಗಷ್ಟೇ ಅಧಿಕಾರದ ಚುಕ್ಕಾಣಿ ನೀಡುವ ಕುತಂತ್ರವಾಗಿದೆ. ಇದೇ ಕಾರಣದಿಂದ ಸರಕಾರ ಪಾಲಿಕೆಯ ಚುನಾವಣೆ ನಡೆಸದೆ ನಾನಾ ನೆಪಗಳೊಂದಿಗೆ ಚುನಾವಣೆಯನ್ನು ಮುಂದೂಡುತ್ತಾ ಬರುತ್ತಿದೆ,ಎಂದು ಕಿಡಿಕಾರಿದರು.

ಉಪ ಮುಖ್ಯಮಂತ್ರಿಯು ಕನಕಪುರ ಕ್ಷೇತ್ರದ ಜನರಿಂದ ಆಯ್ಕೆಯಾಗಿದ್ದಾರೆಯೇ ಹೊರತು ಬೆಂಗಳೂರಿನ ಜನತೆಯಿಂದಲ್ಲ. ಬಿಬಿಎಂಪಿ ಅಧಿಕಾರವು ಬೆಂಗಳೂರಿನ ಜನರು ಆಯ್ಕೆ ಮಾಡಿದ ಮೇಯರ್ ಕೈಯಲ್ಲಿಯೇ ಇರಬೇಕ ಎಂದು ಆಗ್ರಹಿಸಿದರು. ಸರಕಾರ ಅಧಿಕಾರದ ಕೇಂದ್ರೀಕರಣಕ್ಕೆ ಕೈ ಹಾಕುವ ಮೂಲಕ ಸಂವಿಧಾನದ 74ನೇ ತಿದ್ದುಪಡಿಕಾಯ್ದೆದೆಯ ಆಶಯವನ್ನು ಬುಡಮೇಲು ಮಾಡಿದೆ. ಕಾಯ್ದೆಯಲ್ಲಿ ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಮಹಿಳೆಯರ ಪ್ರಾತಿನಿಧ್ಯದ ಪ್ರಸ್ತಾವವಿಲ್ಲ, ಎಂದು ಟೀಕಿಸಿದರು. ಸಾಮಾಜಿಕ ಕಾರ್ಯಕರ್ತ ಸತ್ಯ ಆರಿಕುತೇರಾಮ್, ಸಂದೀಪ್ ಅನಿರುದ್ಧನ್ ಸೇರಿದಂತೆ ಹಲವರು ಸಂವಾದದಲ್ಲಿ ಪಾಲ್ಗೊಂಡಿದ್ದರು.

ಗ್ರೇಟರ್ ಬೆಂಗಳೂರು ವಿರುದ್ಧ ಕಾನೂನು ಹೋರಾಟ

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ-2024ರ ಅನುಷ್ಠಾನ ವಿರುದ್ಧ ಕಾನೂನು ಹೋರಾಟ ಕೈಗೊಳ್ಳಲು ಸಿವಿಕ್ ಬೆಂಗಳೂರು ಸಂಸ್ಥೆ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ನಿರ್ಣಯಿಸಲಾಯಿತು. ಸಿವಿಕ್ ಬೆಂಗಳೂರು ಸಂಸ್ಥೆಯು ನಗರದಲ್ಲಿ ಶನಿವಾರ ಆಯೋಜಿಸಿದ್ದ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಕಾಯಿದೆ ವಿರುದ್ಧ ಹೋರಾಡುವ ಬಗ್ಗೆ ಒಕ್ಕೊರಲಿನ ನಿರ್ಧಾರ ಕೈಗೊಳ್ಳಲಾಯಿತು. ಸಂಸ್ಥೆಯ ಕಾರ್ಯ ನಿರ್ವಾಹಕ ಟ್ರಸ್ಟಿ ಕಾತ್ಯಾಯಿನಿ ಚಾಮರಾಜ್ ಮಾತನಾಡಿ, ಸಂವಿಧಾನದ 74ನೇ ತಿದ್ದುಪಡಿಯಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ನೀಡುವ ಮೂಲಕ ಅಧಿಕಾರ ವಿಕೇಂದ್ರೀಕರಣವನ್ನು ಪ್ರಸ್ತಾಪಿಸಿದೆ. ಇದರಿಂದ ಸಾರ್ವಜನಿಕರಿಗೆ ಆಡಳಿತ ವ್ಯವಸ್ಥೆಯಲ್ಲಿ ಪಾಲ್ಗೊಳ್ಳಲು ಮುಕ್ತ ಅವಕಾಶವಿದೆ. ಆದರೆ, ರಾಜ್ಯ ಸರಕಾರ ಸಂವಿಧಾನದ ಆಶಯಗಳನ್ನು ಗಾಳಿಗೆ ತೂರಿ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯನ್ನು ಜಾರಿಗೆ ತಂದು ಅಧಿಕಾರ ಕೇಂದ್ರೀಕರಣಕ್ಕೆ ಮುಂದಾಗಿದೆ, ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಮಲಿಂಗಾರೆಡ್ಡಿಗೆ ಬೈಕ್ ಟ್ಯಾಕ್ಸಿ ಅಸೋಸಿಯೇಷನ್ ಮನವಿ

• ಉದಯವಾಹಿನಿ ಬೆಂಗಳೂರು

ಕರ್ನಾಟಕದಾದ್ಯಂತ 100 ಕ್ಕೂ ಹೆಚ್ಚು ಬೈಕ್ ಟ್ಯಾಕ್ಸಿ ಚಾಲಕರು ಮತ್ತು ಬೈಕ್ ಟ್ಯಾಕ್ಸಿ ಅಸೋಸಿಯೇಷನ್ (ಬಿಟಿಎ) ಶನಿವಾರ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರ ಕಚೇರಿಯಲ್ಲಿ ಶಾಂತಿಯುತವಾಗಿ ಒಟ್ಟುಗೂಡಿದರು, ರಾಜ್ಯದಲ್ಲಿ ಬೈಕ್ ಟ್ಯಾಕ್ಸಿ ಕಾರ್ಯಾಚರಣೆಗಳಿಗೆ ನಿಯಂತ್ರಕ ಚೌಕಟ್ಟನ್ನು ರೂಪಿಸುವಂತೆ ಕೋರಿ ಮನವಿ ಸಲ್ಲಿಸಿದರು.

ಪ್ರಸ್ತುತ ನೀತಿ ನಿಯಮಗಳು ಜೀವನೋಪಾಯದ ಮೇಲೆ ತೀವ್ರ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ ಎಂದು ಚಾಲಕರು ಒತ್ತಿ ಹೇಳಿದರು, 6 ಲಕ್ಷಕ್ಕೂ ಹೆಚ್ಚು ಸ್ಥಳೀಯ ಸವಾರರು ಆದಾಯಕ್ಕಾಗಿ ಬೈಕ್ ಟ್ಯಾಕ್ಸಿ ಸೇವೆಗಳನ್ನು ಅವಲಂಬಿಸಿದ್ದಾರೆ.

ಶೇಕಡಾ 75 ಕ್ಕೂ ಹೆಚ್ಚು ಜನರು ಅದನ್ನು ತಮ್ಮ ಜೀವನೋಪಾಯದ ಪ್ರಾಥಮಿಕ ಮೂಲವಾಗಿ ಅವಲಂಬಿಸಿದ್ದಾರೆ ಎಂದು ಗಮನ ಸೆಳೆದರು.

ಕರ್ನಾಟಕದ ಸಾರಿಗೆ ಪರಿಸರ ವ್ಯವಸ್ಥೆಯಲ್ಲಿ ಬೈಕ್ ಟ್ಯಾಕ್ಸಿಗಳಿಗೆ ನ್ಯಾಯಯುತ, ಅಂತರ್ಗತ ಮತ್ತು ಸುಸ್ಥಿರ ನೀತಿಗೆ ರೂಪಿಸುವಂತೆ ಜ್ಞಾಪನ ಪತ್ರದಲ್ಲಿ ಮನವಿ ಮಾಡಲಾಗಿದೆ, ಪುರುಷರು ಮತ್ತು ಮಹಿಳೆಯರು ಇಬ್ಬರೂ ಸೇರಿ 6 ಲಕ್ಷಕ್ಕೂ ಹೆಚ್ಚು ಸವಾರರು ಈ ವೃತ್ತಿಯನ್ನು ತಮ್ಮ ಪ್ರಾಥಮಿಕ ಆದಾಯದ ಮೂಲವಾಗಿ ಅವಲಂಬಿಸಿದ್ದಾರೆ.

ಉದಯವಾಹಿನಿ ಚಿತ್ರ

ನಮ್ಮಲ್ಲಿ ಹಲವರು ಹೆಮ್ಮೆಯ ಕನ್ನಡಿಗರು, ಗೌರವಯುತ ಜೀವನ ಸಾಗಿಸಲು ಪ್ರತಿದಿನ ಶ್ರಮಿಸುತ್ತಿದ್ದಾರೆ. ಬೈಕ್ ಟ್ಯಾಕ್ಸಿ ಸೇವೆಗಳು ನಮ್ಮ ಕುಟುಂಬಗಳನ್ನು ಬೆಂಬಲಿಸಲು ಮತ್ತು ಹೆಚ್ಚು ಸುಸ್ಥಿರ ಸಾರಿಗೆ ವ್ಯವಸ್ಥೆಗೆ ಕೊಡುಗೆ ನೀಡಲು ನಮಗೆ ಅಗತ್ಯವಿರುವ ನಮ್ಯತೆಯನ್ನು ಒದಗಿಸುತ್ತವೆ.

ಸರ್ಕಾರವು ನಮ್ಮ ಕೆಲಸ ಮಾಡುವ ಹಕ್ಕನ್ನು ಗುರುತಿಸಬೇಕು ಮತ್ತು ಎಲ್ಲರನ್ನೂ ಒಳಗೊಂಡ ನೀತಿಯನ್ನು ರೂಪಿಸುವ ಮೂಲಕ ಕರ್ನಾಟಕದ ಬೆಳವಣಿಗೆಯಲ್ಲಿ ನಮ್ಮನ್ನು ಸೇರಿಸಿಕೊಳ್ಳಬೇಕು ಎಂದು ನಾವು ಒತ್ತಾಯಿಸುತ್ತೇವೆ ಎಂದು ಬಿಟಿಎ ಅಧ್ಯಕ್ಷ ಆದಿ ನಾರಾಯಣನ್ ಸಾರಿಗೆ ಸಚಿವರಿಗೆ ಜ್ಞಾಪಕ ಪತ್ರ ಹಸ್ತಾಂತರಿಸಿದ ನಂತರ ಹೇಳಿದರು.

> ಬೈಕ್ ಟ್ಯಾಕ್ಸಿ ಸವಾರರಲ್ಲಿ ಶೇಕಡಾ 80 ಕ್ಕೂ ಹೆಚ್ಚು ಜನರು ಸ್ಥಳೀಯ ಕನ್ನಡಿಗರು, ಅನೇಕ ಮಹಿಳೆಯರು ಸೇರಿದಂತೆ, ಕಳೆದ ಆರು ವರ್ಷಗಳಿಂದ ಘನತೆಯಿಂದ ಕೆಲಸ ಮಾಡುತ್ತಿದ್ದಾರೆ. ತಮ್ಮ ಸೇವೆಗಳನ್ನು ಕಾನೂನುಬದ್ಧವಾಗಿ ಮುಂದುವರಿಸಲು ಅಗತ್ಯವಿರುವ ಯಾವುದೇ ಪರವಾನಗಿ ಶುಲ್ಕ ಅಥವಾ ತೆರಿಗೆಗಳನ್ನು ಪಾವತಿಸಲು ಅವರು ಸಿದ್ಧರಿದ್ದಾರೆ ಎಂದು ವ್ಯಕ್ತಪಡಿಸಿದರು

ಬೈಕ್ ಟ್ಯಾಕ್ಸಿಗಳು ಮತ್ತು ದ್ವಿಚಕ್ರ ವಾಹನಗಳು 1988 ರ ಮೋಟಾರು ವಾಹನ ಕಾಯ್ದೆಯ ಸೆಕ್ಷನ್ 66 ರ ಅಡೇ ಕಾನೂನು ನಿಬಂಧನೆಗಳ ಅಡಿಯಲ್ಲಿ ಬರುತ್ತವೆ ಎಂದು ಅವರು ಪ್ರತಿಪಾದಿಸಿದರು. ಸ್ಪಷ್ಟ ಕಾರ್ಯಾಚರಣೆಯ ಮಾರ್ಗಸೂಚಿಗಳನ್ನು ಹೊರಡಿಸುವಂತೆ ಅವರು ಸರ್ಕಾರವನ್ನು ಒತ್ತಾಯಿಸಿದರು, ಬೆಂಗಳೂರಿನಲ್ಲಿ ಮಾತ್ರ ಪ್ರತಿ ತಿಂಗಳು 50 ಲಕ್ಷಕ್ಕೂ ಹೆಚ್ಚು ಸಂಚಾರ ನಡೆಸಲಾಗುತ್ತದೆ, 20 ಲಕ್ಷಕ್ಕೂ ಹೆಚ್ಚು ಪ್ರಯಾಣಿಕರಿಗೆ ಸೇವೆ ಸಲ್ಲಿಸಲಾಗುತ್ತದೆ ಎಂದು ಗಮನ ಸೆಳೆದರು.

ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿರುವ ಜನೌಷಧಿ ಕೇಂದ್ರ ಬಂದ್‌ಗೆ ರಾಜ್ಯ ಸರ್ಕಾರ ಆದೇಶ

• ಉದಯವಾಹಿನಿ ಬೆಂಗಳೂರು

ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿರುವ ಜನೌಷಧಿ ಕೇಂದ್ರಗಳನ್ನು ಬಂದ್ ಮಾಡುವಂತೆ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಈ ಬಗ್ಗೆ ಆರೋಗ್ಯ, ಕುಟುಂಬ ಕಲ್ಯಾಣ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಶ್ರೀಪತಿ ಪಿ.ಕೆ. ಅವರು ಆದೇಶ ಹೊರಡಿಸಿದ್ದಾರೆ. ಸರಕಾರಿ ಆಸ್ಪತ್ರೆಗಳ ಹೊರಗೆ ಜನೌಷಧಿ ಕೇಂದ್ರಗಳ ಸ್ಥಾಪನೆಯು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಬಾರದ ಕಾರಣ ಅವು ಮುಂದುವರೆಯ ಬಹುದಾಗಿದೆ.

ಆರೋಗ್ಯ ಇಲಾಖೆಯ ಸರಕಾರಿ ಆಸ್ಪತ್ರೆಗಳಲ್ಲಿ ಅಸ್ತಿತ್ವದಲ್ಲಿರುವ ಜನೌಷಧಿ ಕೇಂದ್ರಗಳನ್ನು ಅವರೊಂದಿಗೆ ಮಾಡಿಕೊಂಡಿರುವ ಒಪ್ಪಂದ ನಿಯಮಗಳ ಪ್ರಕಾರ ಸ್ಥಗಿತಗೊಳಿಸಲು ಅಗತ್ಯ ಕ್ರಮ ವಹಿಸುವಂತೆ ಆದೇಶದಲ್ಲಿ ತಿಳಿಸಲಾಗಿದೆ. ಹಾಗೆಯೇ, ಜೆನೆರಿಕ್ ಔಷಧಿಗಳ ಖರೀದಿಗೆ ಬಿಪಿಪಿಐಯೊಂದಿಗೆ ಕೆಎಸ್‌ಎಂಎಸ್‌ಸಿ ಎಲ್ ರವರು ವಿಶೇಷ ದರಗಳನ್ನು ರೂಪಿಸಲು ಸೂಚಿಸಿದೆ.

ಪರ್ಯಾಯವಾಗಿ ಆಸ್ಪತ್ರೆಗಳು ಬಿಪಿಪಿಐ

ಉದಯವಾಹಿನಿ ಚಿತ್ರ

ಯಿಂದ ಔಷಧಿಗಳನ್ನು ಖರೀದಿಸಿ ರೋಗಿಗಳಿಗೆ ಉಚಿತವಾಗಿ ವಿತರಿಸಲು ಕ್ರಮ ವಹಿಸುವಂತೆ ತಿಳಿಸಿದ್ದಾರೆ.

ಸರಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ರೋಗಿಗಳಿಗೆ ಯಾವುದೇ ಔಷಧಿಗಳನ್ನು ಹೊರಗಿನಿಂದ ಖರೀದಿಸಲ

ಎಂಡಿಎ ರಚನೆಗೆ ಮಿಶ್ರ ಪ್ರತಿಕ್ರಿಯೆ; ಹೆಸರು ಬದಲಾದರೆ ಸಾಲದು, ಅಧಿಕಾರಿಗಳ ಮನಸ್ಥಿತಿ ಬದಲಾಗಲಿ ಎಂಬ ಕೂಗು

ಜನ ಸಾಮಾನ್ಯರಿಗೆ ಶಾಶ್ವತ ಸೂರು ಕಲ್ಪಿಸಬೇಕಿದೆ

ಹೆಸರು ಬದಲಾದರೆ ಸಾಲದು

ಮುಡಾ ಹೆಸರು ಬದಲಾಗುವುದರಿಂದ ಎಲ್ಲವೂ ಸರಿ ಹೋಗುವುದಿಲ್ಲ. ಮುಡಾ ಉದ್ದೇಶವೇ ಜನರಿಗೆ ನಿವೇಶನ ಹಂಚುವುದು. ಆದರೆ, ಇದೀಗ ಈ ಉದ್ದೇಶವೇ ಮರೀಚಿಕೆಯಾಗಿದೆ. ಇಂದಿಗೂ ಮುಡಾದಲ್ಲಿ ಕಾಯಂ ಸಿಬ್ಬಂದಿ ಕೊರತೆ ನೀಗಿಲ್ಲ. ವಿವಿಧ ವಿಭಾಗಗಳಲ್ಲಿ ಮೇಲೆ ಬಂದವರೇ ಹೆಚ್ಚಿದ್ದಾರೆ. ಸಿಬ್ಬಂದಿಗೆ ಪುನಶ್ಚೇತನ ಕಾರ್ಯಾಗಾರಗಳೇ ನಡೆದಿಲ್ಲ. ಹೀಗಿರುವಾಗ ಎಂಡಿಎದಿಂದ ಏನನ್ನು ತಾನೆ ನಿರೀಕ್ಷಿಸಬಹುದು?

-ಎ.ಪಿ.ನಾಗೇಶ್
ಮೈಸೂರು ವಲಯದ ನರೆಗ್ಗೋ ಖಚಾಂಚಿ

ಉದಯವಾಹಿನಿ ಚಿತ್ರ

ಹೆಸರು ಬದಲಾದರೆ ಸುಧಾರಣೆ ಸಾಧ್ಯವಿಲ್ಲ

ಸಿಬ್ಬಂದಿಯ ಮೇಲೆ ವಿಶ್ವಾಸವೇ ಇಲ್ಲ

ಅಧಿಕಾರಿಗಳ ಮನಸ್ಥಿತಿ ಬದಲಾಗಬೇಕು ಆರಂಭದಲ್ಲಿ ಸಿಐಟಿಬಿ ಬಗ್ಗೆ ಜನರಲ್ಲಿ ನಂಬಿಕೆ, ವಿಶ್ವಾಸ ಇತ್ತು. ಮಂಡಳಿಯಿಂದ ಬಳಿಕ ಪ್ರಾಧಿಕಾರವಾದ ಮೇಲೆ ವಿಶ್ವಸ್ಥ ಮಾಯವಾಯಿತು. ಅಂದರೆ ಜನರಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಯ ಮೇಲೆ ವಿಶ್ವಾಸವೇ ಇಲ್ಲದಂತೆ ಆಯಿತು. ಇಲ್ಲಿ ಕೆಲಸ ಮಾಡುವ ಅಧಿಕಾರಿಗಳು ಮತ್ತು ಸಿಬ್ಬಂದಿಯ ಮನಸ್ಥಿತಿ ಬದಲಾಗದಿದ್ದರೆ ಜನರಿಗೂ ಒಳ್ಳೆಯದಾಗುವುದಿಲ್ಲ. ಸರಕಾರಕ್ಕೂ ಸಹ ಕಳಂಕ ಮುಂದುವರಿಯಲಿದೆ. ಈ ನಿಟ್ಟಿನಲ್ಲಿ ಬದಲಾವಣೆ ಅಗತ್ಯವಾಗಿದೆ

-ಡಿ.ಮಾದೇಗೌಡ, ವಿಧಾನ ಪರಿಷತ್‌ನ ಮಾಜಿ ಸದಸ್ಯ

ಭ್ರಷ್ಟಾಚಾರಕ್ಕೆ ಕಡಿವಾಣ ಬೀಳಬೇಕು

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ದೂರದೃಷ್ಟಿಯಿಂದ ನಗರ ಅಭಿವೃದ್ಧಿ ವಿಶ್ವಸ್ಥ ಮಂಡಳಿ ಸ್ಥಾಪನೆ ಮಾಡಿದರು. ಆದರೆ ಇದು ಇದೀಗ ಭ್ರಷ್ಟಾಚಾರದ ಕೂಪದಿಂದ ನರಳುತ್ತಿದೆ. ಹೆಸರು ಬದಲಾವಣೆಯಿಂದ ಸುಧಾರಣೆ ಸಾಧ್ಯವಿಲ್ಲ. ಇದು ಜನರ ಕಣ್ಣೀರು ವರೆಸುವ ತಂತ್ರ. ಮೊದಲು ಮುಡಾ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕು. ಸಾಕಷ್ಟು ವರ್ಷದಿಂದ ಕಾಯುತ್ತಿರುವ ಅರ್ಹ ಫಲಾನುಭವಿಗಳಿಗೆ ನಿವೇಶನ ಸಿಗುವಂತೆ ಸರಕಾರ ದೃಢ ಹೆಜ್ಜೆ ಇಡಬೇಕು

- ಡಾ.ಈ.ಸಿ.ನಿಂಗರಾಜ್

• ಉದಯವಾಹಿನಿ, ಮೈಸೂರು

ಮುಡಾಗೆ ಮೇಜರ್ ಸರ್ಜರಿ ಮಾಡುವ ಉದ್ದೇಶದಿಂದ ಸರಕಾರ ಮೈಸೂರು ಅಭಿವೃದ್ಧಿ ಪ್ರಾಧಿಕಾರವನ್ನು ಜಾರಿಗೆ ತಂದಿದೆ. ಆದರೆ, ಸರಕಾರದ ಈ ನಿರ್ಧಾರಕ್ಕೆ ಸಾರ್ವಜನಿಕ ವಲಯದಲ್ಲಿ ಪರ-ವಿರೋಧ ಅಭಿಪ್ರಾಯಗಳು ಕೇಳಿ ಬಂದಿವೆ. ಸಿಎಂ ಸಿದ್ದರಾಮಯ್ಯ ಅವರ ಕುಟುಂಬದ ನಿವೇಶನ ಹಗರಣದಿಂದಾಗಿ ತೀವ್ರ ವಿವಾದಕ್ಕೆ ಒಳಗಾಗಿರುವ ಮುಡಾಗೆ ಚುನಾಯಿತ ಪ್ರತಿನಿಧಿಗಳ ನಾಮನಿರ್ದೇಶನವನ್ನು ತಗ್ಗಿಸುವ ಜತೆಗೆ ಸಾಂಸ್ಥಿಕವಾಗಿ ಕೆಲವೊಂದು ಮಹತ್ವದ ಬದಲಾವಣೆ ಉದ್ದೇಶದೊಂದಿಗೆ ಮೈಸೂರು ಅಭಿವೃದ್ಧಿ ಪ್ರಾಧಿಕಾರ ಅಸ್ತಿತ್ವಕ್ಕೆ ಬಂದಿದೆ. ಮುಡಾ ನಿವೇಶನ ಹಗರಣ ವಿವಾದ ಸೃಷ್ಟಿಯಾದ ನಂತರ ಹೊಸ ವಿಧೇಯಕ ರೂಪಿಸುವುದು ಸಾರ್ವಜನಿಕ ವಲಯದಲ್ಲಿ ನಾನಾ ಪ್ರಶ್ನೆಗಳು ಉದ್ಭವಿಸುವಂತೆ ಮಾಡಿದೆ. ಮುಡಾ ಅಭಿವೃದ್ಧಿ ಪ್ರಾಧಿಕಾರ ರಚನೆಯಾಗಿರುವುದರಿಂದ ಇನ್ಮುಂದೆ ನಿವೇಶನ ಹಂಚಿಕೆ ವಿಚಾರದಲ್ಲಿ ರಾಜಕಾರಣಿಗಳ ಪ್ರಭಾವ ಕಡಿಮೆಯಾಗಬಹುದು ಎಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಆದರೆ, ಇನ್ನೂ ಹಲವರು ಕೇವಲ ಹೆಸರು ಬದಲಾದ ಮಾತ್ರಕ್ಕೆ ಜನಪರ ಕೆಲಸವಾಗುತ್ತದೆ ಎನ್ನಲಾಗದು. ಸುಧಾರಣೆ ಎಂಬುದು ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಮನಸ್ಥಿತಿಯನ್ನು ಅವಲಂಬಿಸಿರುತ್ತದೆ, ಎಂದು ತಿಳಿಸಿದ್ದಾರೆ.

ರಾಜಕೀಯ ಪ್ರಭಾವ ನಿಲ್ಲುವ ಭರವಸೆ

ಮುಡಾ ಹೆಸರು ಬದಲಾದರೆ ಸಾಲದು ಅಧಿಕಾರಿಗಳ ಮನಸ್ಥಿತಿ ಬದಲಾಗಬೇಕು: ಮುಡಾ ಹೆಸರು ಬದಲಾದರೆ ಸಾಲದು ಅಧಿಕಾರಿಗಳ ಮನಸ್ಥಿತಿ ಬದಲಾಗಬೇಕು, ಎಂದು ಸಿಐಟಿಬಿ ಮಾಜಿ ಅಧ್ಯಕ್ಷರೂ, ವಿಧಾನ ಪರಿಷತ್ ಮಾಜಿ ಸದಸ್ಯರಾದ ಡಿ.ಮಾದೇಗೌಡ ಹೇಳಿದ್ದಾರೆ. ಕೇವಲ ಹೆಸರು ಬದಲಾದ ಮಾತ್ರಕ್ಕೆ ಜನಪರ ಕೆಲಸವಾಗುತ್ತದೆ ಎನ್ನಲಾಗದು. ಪ್ರಾಧಿಕಾರದಲ್ಲಿ ಕೆಲಸ ಮಾಡುವವರ ಮನಸ್ಥಿತಿ ಬದಲಾದರೆ ಮಾತ್ರ ಅಲ್ಲಿ ವ್ಯವಸ್ಥೆ ಸುಧಾರಣೆ ಸಾಧ್ಯ, ಎಂದು ತಿಳಿಸಿದ್ದಾರೆ. ಎಲ್ಲಾ ಭಾಗ್ಯಗಳನ್ನು ಕೊಟ್ಟಿರುವ ಸಿಎಂ ಸಿದ್ದರಾಮಯ್ಯ ಅವರು ವಸತಿ ಭಾಗ್ಯವನ್ನು ಸಹ ನಿವೇಶನ ವಂಚಿತರಿಗೆ ನೀಡುವ ಮೂಲಕ ಜನ ಸಾಮಾನ್ಯರಿಗೆ ಶಾಶ್ವತ ಸೂರು ಕಲ್ಪಿಸಬೇಕಿದೆ, ಎಂದಿದ್ದಾರೆ.

ಅಧಿಕಾರಿ ವಿರುದ್ಧ ದಲಿತ ದೌರ್ಜನ್ಯ ಪ್ರಕರಣ ದಾಖಲು

ಉದಯವಾಹಿನಿ ಚಿತ್ರ

ಪಿರಿಯಾಪಟ್ಟಣ: ಸೋಲಿಗ ಸಮುದಾಯದ ವ್ಯಕ್ತಿಗೆ ಅವಾಚ್ಯ ಶಬ್ದಗಳಿಂದ ನಿಂಧಿಸಿ ಜಾತಿ ನಿಂದನೆ ಮಾಡಿದ್ದಾರೆ ಎಂಬ ದೂರಿನ ಮೇರೆಗೆ ಪಿರಿಯಾಪಟ್ಟಣ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಚಂದ್ರಶೇಖರ್ ವಿರುದ್ಧ ದಲಿತ ದೌರ್ಜನ್ಯ ಪ್ರಕರಣ ದಾಖಲಾಗಿದೆ. ಈ ಸಂಬಂಧ ಪತ್ರಕರ್ತರ ಸಂಘದ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ದೂರುದಾರ ಶಾಂತ ರಾಜ್ ಆದಿವಾಸಿ ಸೋಲಿಗ ಸಮುದಾಯದ ವ್ಯಕ್ತಿಯಾದ ನನಗೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಅವಾಚ್ಯ ಶಬ್ದಗಳಿಂದ ನಿಂಧಿಸಿ ಜಾತಿ ನಿಂದನೆ ಮಾಡಿದ್ದಾರೆ.

ನಾನು ರಾಣಿಗೇಟ್ ಗ್ರಾಮದಲ್ಲಿ ಸೋಲಿಗ ಜನಾಂಗದ ಗಿರಿಜನ ಸಮಗ್ರ ಅಭಿವೃದ್ಧಿ ಯೋಜನೆಯಡಿಯಲ್ಲಿ ಕೆಲವು ವರ್ಷಗಳ ಹಿಂದೆ ಕೋಳಿ ಸಾಕಾಣಿಕೆ ಶೆಡ್ ನಿರ್ಮಾಣ ಮಾಡಿಕೊಡಲು ಇಲಾಖೆ ವತಿಯಿಂದ ಅನುದಾನ ಮಂಜೂರು ಆಗಿದ್ದು ಇದನ್ನು ನಾನು ನಿರ್ಮಾಣ ಮಾಡಿ ಕೊಂಡಿರುತ್ತೇನೆ. ಸದರಿ ಶೆಡ್ ನಿರ್ಮಾಣದ ಪರಿವೀಕ್ಷಣೆಗಾಗಿ ಪಿರಿಯಾಪಟ್ಟಣದ ಸಮಾಜ ಕಲ್ಯಾಣ ಅಧಿಕಾರಿ ಚಂದ್ರಶೇಖರ್ ರವರು ನನ್ನ ಮನೆ ಹತ್ತಿರ ಬಂದು ನನ್ನ ಜೊತೆಗೆ ಶೆಡ್ ಮುಂದೆ ನಿಂತು ಫೋಟೋ ತೆಗೆಸಿಕೊಂಡು ನಂತರ ಇದ್ದಕ್ಕಿದ್ದ ಹಾಗೆ ನನ್ನನ್ನು ನೀನು ಕೊಡಗು ಜಿಲ್ಲೆ ಬಸವನಹಳ್ಳಿ ತಮ್ಮಯ್ಯ ಪರಿಚಯ ಇದೆಯಾ ಎಂದು ಪ್ರಶ್ನೆ ಮಾಡಿದರು. ನನಗೆ ಯಾರು ಗೊತ್ತಿಲ್ಲ ಎಂದು ಹೇಳಿದೆ ನಂತರ ನೀನು ಸೋಲಿಗ ಜನಾಂಗದವನ್ನು ಸೋಲಿಗರು ಮತ್ತು ಜೇನು ಕುರುಬರು ನನ್ನನು ಏನು ಮಾಡಲು ಸಾಧ್ಯವಿಲ್ಲ ಎಂದು ಅವಾಚ್ಯ ಶಬ್ದಗಳಿಂದ ನಿಂಧಿಸಿ ಜಾತಿ ನಿಂದನೆ ಮಾಡಿದ್ದಾರೆ. ಇದರಿಂದಾಗಿ ನನ್ನ ಮನಸ್ಸಿಗೆ ನೋವುಂಟಾಗಿರುವುದಲ್ಲದೆ ಅಪಮಾನವಾಗಿದೆ ಎಂದು ಬೈಲುಕುಪ್ಪೆ ಪೊಲೀಸ್ ಠಾಣೆಯಲ್ಲಿ ದಲಿತ ದೌರ್ಜನ್ಯ ಪ್ರಕರಣ ದಾಖಲಿಸಿದ್ದೇನೆ ಮತ್ತು ಇಲಾಖೆಯ ವತಿಯಿಂದ ಗಿರಿಜನ ಸಮುದಾಯಕ್ಕೆ ನೀಡುವ ಪಡಿತರ ಪದಾರ್ಥಗಳಲ್ಲೂ ಅವ್ಯವಹಾರ ನಡೆಸಿದ್ದಾರೆ.

ಮೃತಪಟ್ಟ ವ್ಯಕ್ತಿಗಳ ಹೆಸರಿನಲ್ಲಿ ಗುತ್ತಿಗೆದಾರ ರೊಂದಿಗೆ ಶಾಮಿಲಾಗಿ ಪಡಿತರ ಪದಾರ್ಥಗಳನ್ನು ದುರುಪಯೋಗ ಪಡಿಸಕೊಳ್ಳುತ್ತಿದ್ದಾರೆ. ಈ ಬಗ್ಗೆ ಇಲಾಖೆ ತನಿಖೆ ನಡೆಸಬೇಕು ಎಂದು ದೂರಿದರು.

ದಲಿತ ದೌರ್ಜನ್ಯ ಪ್ರಕರಣ ವಿಚಾರವಾಗಿ ಪೊಲೀಸ್ ಇಲಾಖೆಯು ಪ್ರಕರಣ ದಾಖಲಿಸಿಕ್ಕೊಂಡು ವಿಚಾರಣೆ ನಡೆಸಿದ್ದು ಈತನನ್ನು ಕೂಡಲೆ ಬಂಧಿಸಬೇಕು, ಸ್ಥಳೀಯ ಸಚಿವರು, ಇಲಾಖೆಯ ಮೇಲಧಿಕಾರಿಗಳು ಈತನನ್ನು ಕೆಲಸದಿಂದ ವಜಾಗೊಳಿಸುವುದರೊಂದಿಗೆ ನೊಂದ ನನಗೆ ನ್ಯಾಯ ಕೊಡಿಸಿಕೊಡಬೇಕು ಎಂದು ಒತ್ತಾಯಿಸಿದರು.

ಸಂದೀಪ್ ರೆಡ್ಡಿಗೆ ಕಾಂಗ್ರೇಸ್ ಗಾಳ?

• ಉದಯವಾಹಿನಿ, ಚಿಕ್ಕಬಳ್ಳಾಪುರ

ಚಿಕ್ಕಬಳ್ಳಾಪುರ ಜಿಲ್ಲಾ ಬಿಜೆಪಿ ಅಧ್ಯಕ್ಷ ಸಂದೀಪ್ ರೆಡ್ಡಿ ಅವರ ಆಯ್ಕೆಯನ್ನು ವರಿಷ್ಠರು ತಡೆ ಹಿಡಿದಿ ದ್ದಾರೆ. ಇಂದಿಗೂ ಬಿಜೆಪಿ ಜಿಲ್ಲಾ ಅಧ್ಯಕ್ಷರ ಆಯ್ಕೆ ವಿಚಾರವು ಕಗ್ಗಂಟಾಗಿದೆ. ಈ ನಡುವೆಯೇ ಬಿಜೆಪಿಯ ಈ ಯುವ ಮುಖಂಡ ಕಾಂಗ್ರೇಸ್ ಸೇರು ತ್ತಾರೆಯೇ ಎನ್ನುವ ಚರ್ಚೆಗಳು ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಆರಂಭವಾಗಿವೆ. ವಿಶೇಷವಾಗಿ ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಶಾಸಕ ಪ್ರದೀಪ್ ಈಶ್ವರ್ ವಿರುದ್ಧದ ಗುಂಪಿನಲ್ಲಿರುವ ಕೆಲವು ಮುಖಂಡರು ಸಂದೀಪ್ ರೆಡ್ಡಿ ಅವರನ್ನು ಕಾಂಗ್ರೇಸ್‌ಗೆ ಕರೆ ತರುವ ಬಗ್ಗೆ ಉತ್ಸಾಹದಲ್ಲಿ ಇದ್ದಾರೆ ಎನ್ನುತ್ತವೆ ಕಾಂಗ್ರೇಸ್ ಪಕ್ಷದ ಮೂಲಗಳು. ಈ ಹಿಂದೆ ಸಂದೀಪ್ ರೆಡ್ಡಿ ಅವರ ತಾಯಿ ಕಾಂಗ್ರೇಸ್‌ನಿಂದ ಮಂಡಿಕಲ್ಲು ಜಿಲ್ಲಾ ಪಂಚಾಯಿತಿ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಸಂದೀಪ್ ರೆಡ್ಡಿ ಅವರ ಕುಟುಂಬದ ರಾಜಕೀಯ ಆರಂಭವಾಗಿದ್ದು ಸಹ ಕಾಂಗ್ರೇಸ್ ಮೂಲದಿಂದಲೇ.

ಸಂದೀಪ್ ರೆಡ್ಡಿ ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಸಕ್ರಿಯವಾಗಿದ್ದಾರೆ. ಹಳ್ಳಿ ಹಳ್ಳಿಗಳಿಗೆ ಭೇಟಿ ನೀಡುತ್ತಿದ್ದಾರೆ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಅವರು ಕಣಕ್ಕೆ ಇಳಿಯಲಿದ್ದಾರೆ ಎನ್ನುವ ಮಾತುಗಳು ಈಗಲೇ ಕೇಳಿ ಬರುತ್ತಿವೆ. ಜ.29ರಂದು ಬಿಜೆಪಿ ಜಿಲ್ಲಾ ಅಧ್ಯಕ್ಷರಾಗಿ ಸಂದೀಪ್ ರೆಡ್ಡಿ ಅವರನ್ನು ಪಕ್ಷವು ನೇಮಿಸಿತ್ತು.

ಡಾ.ಕೆ.ಸುಧಾಕರ್, ಸಂದೀಪ್ ರೆಡ್ಡಿ ನೇಮಕಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿ, ವಿಜಯೇಂದ್ರ ವಿರುದ್ಧ ಬಹಿರಂಗವಾಗಿ ವಾಗ್ದಾಳಿ ನಡೆಸಿದ್ದರು. ಬಿಜೆಪಿ ಕೇಂದ್ರ ನಾಯಕರಿಗೆ ದೂರು ಸಹ ನೀಡಿದ್ದರು. ಇದಕ್ಕೆ ಪ್ರತಿಯಾಗಿ ವಿಜಯೇಂದ್ರ ಬಣದ ನಾಯಕರು ಸಹ ಸುಧಾಕರ್ ವಿರುದ್ಧ ಟೀಕಾ ಪ್ರಹಾರ ನಡೆಸಿದ್ದರು. ಫೆ.10ರಂದು ವರಿಷ್ಠರು ಜಿಲ್ಲಾ ಅಧ್ಯಕ್ಷರ ನೇಮಕಕ್ಕೆ ತಡೆ ನೀಡಿದ್ದರು. ನಂತರ ಅಲ್ಲಿಂದ ಇಲ್ಲಿಯವರೆಗೆ ಬಿಜೆಪಿ ಜಿಲ್ಲಾ ಅಧ್ಯಕ್ಷರ ಆಯ್ಕೆ ನಡೆದಿಲ್ಲ. ಸಂದೀಪ್ ರೆಡ್ಡಿ ಅವರೇ ಮುಂದುವರಿಯೊವರೊ, ಡಾ.ಕೆ.ಸುಧಾಕರ್ ಬೆಂಬಲಿಗರು ಅಧ್ಯಕ್ಷರಾಗುವರೊ, ತಟಸ್ಥನಾಯಕ ಜಿಲ್ಲಾ ಅಧ್ಯಕ್ಷ ಸ್ಥಾನದ ಸಾರಥ್ಯವಹಿಸುವರೊ ಎನ್ನುವ ಕುತೂಹಲ ಇಂದಿಗೂ ಇದೆ.

ಜಿಲ್ಲಾ ಅಧ್ಯಕ್ಷ ಸ್ಥಾನಕ್ಕೆ ಮುನ್ನ ಸಂದೀಪ್ ರೆಡ್ಡಿ ಅವರು ತಮ್ಮ ಭಗತ್ ಸಿಂಗ್ ಚಾರಿಟಬಲ್ ಟ್ರಸ್ಟ್ ಮೂಲಕ ಕ್ಷೇತ್ರದಲ್ಲಿ ಸೇವಾ ಚಟುವಟಿಕೆಗಳನ್ನು ನಡೆಸುತ್ತಿದ್ದರು. ಜಿಲ್ಲಾ ಅಧ್ಯಕ್ಷ ಆಯ್ಕೆಗೆ ತಡೆ ಬಿದ್ದ ನಂತರವೂ ಈ ಕಾರ್ಯಕ್ರವನ್ನು ಮುಂದುವರಿಸಿದ್ದಾರೆ. ತಮ್ಮದೇ ಆದ ಯುವ ಪಡೆಯನ್ನು ಕಟ್ಟುತ್ತಿದ್ದಾರೆ. ಹೀಗೆ ಗ್ರಾಮೀಣ ಭಾಗಗಳಲ್ಲಿ ತಮ್ಮದೇ ಆದ ಬೆಂಬಲಿಗರ ಪಡೆಯನ್ನು ಹೊಂದಿರುವ ಸಂದೀಪ್ ರೆಡ್ಡಿ ಅವರನ್ನು ಕಾಂಗ್ರೇಸ್‌ಗೆ ಕರೆ ತರಬೇಕು ಎನ್ನುವ ಚರ್ಚೆಗಳು ಸಹ ಜೋರಾಗಿದೆ.

ಅಲ್ಲದೆ ಸಂದೀಪ್ ರೆಡ್ಡಿ ಅವರು ನಗರದ ಸರ್ಕಾರಿ ಮಹಿಳಾ ಪದವಿ ಕಾಲೇಜಿನ ವಿದ್ಯಾರ್ಥಿನಿಯರಿಗೆ ನಿತ್ಯ ಮಧ್ಯಾಹ್ನದ ಊಟ ನೀಡಲು ಮುಂದಾಗಿದ್ದರು. ಇದಕ್ಕೆ ನಾನಾ ಕಾರಣಗಳನ್ನು ಮುಂದಿಟ್ಟು ತಡೆ ನೀಡಲಾಗಿತ್ತು. ಈ ವಿಚಾರವಾಗಿ ರಾಜಕೀಯವೂ ಪ್ರವಹಿಸಿತ್ತು. ಈ ನಡುವೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ಅವರ ಮುತುವರ್ಜಿ, ಸಹಕಾರದ ಪರಿಣಾಮ ಭಗತ್ ಸಿಂಗ್ ಟ್ರಸ್ಟ್ ಊಟ ನೀಡುವಂತೆ ಆಗಿದೆ. ಜಿಲ್ಲಾ ಅಧ್ಯಕ್ಷ ಸ್ಥಾನದ ಕಗ್ಗಂಟು ಬಿಜೆಪಿಯಲ್ಲಿ ಮುಂದುವರಿದಿದೆ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆಪ್ತರಾಗಿರುವ ಸಂದೀಪ್ ರೆಡ್ಡಿ ಒಂದು ವೇಳೆ ಬಿಜೆಪಿಯಲ್ಲಿಯೇ ಉಳಿದರೆ ಅವರಿಗೆ ಪಕ್ಷದಲ್ಲಿ ಯಾವ ಜವಾಬ್ದಾರಿ ನೀಡಲಾಗುತ್ತದೆ ಎನ್ನುವ ಕುತೂಹಲವೂ ಪಕ್ಷದ ಮುಖಂಡರು, ಕಾರ್ಯಕರ್ತರಲ್ಲಿ ಇದೆ.

ಜಾತಿ ಗಣತಿ: ಸಮೀಕ್ಷೆ ಅವಧಿ ತಿಂಗಳು ವಿಸ್ತರಿಸಿ

• ಉದಯವಾಹಿನಿ, ಚಾಮರಾಜನಗರ

ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿ ನೀಡುವ ಉದ್ದೇಶದಿಂದ ಸರ್ಕಾರ ನಡೆಸುತ್ತಿರುವ ದತ್ತಾಂಶ ಸಂಗ್ರಹ ಅವಧಿಯನ್ನು ಒಂದು ತಿಂಗಳು ವಿಸ್ತರಿಸಬೇಕು ಎಂದು ದಲಿತ ಮಹಾಸಭಾದ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ ಪಾಪು ಒತ್ತಾಯಿಸಿದರು. ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಭಾನುವಾರ ನಡೆದ ಸಮುದಾಯದ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಸಮೀಕ್ಷಾದಾರರು ಮನೆಮನೆಗಳಿಗೆ ಭೇಟಿನೀಡಿ ಜಾತಿಗಣತಿ ದತ್ತಾಂಶ ಸಂಗ್ರಹಿಸುತ್ತಿದ್ದು, ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವುದು ಸಾಧ್ಯವಿಲ್ಲ. ಸಮೀಕ್ಷೆ ನಡೆಸುವ ಅವಧಿಯನ್ನು ಮೇ 20ರವರೆಗೆ ಸರ್ಕಾರ ವಿಸ್ತರಿಸಿರುವುದು ಸ್ವಾಗತಾರ್ಹವಾದರೂ ಈ ಅವಧಿಯಲ್ಲೂ ಸಮೀಕ್ಷೆ ಪೂರ್ಣಗೊಳ್ಳುವುದು ಅನುಮಾನವಾಗಿರುವುದರಿಂದ ಹೆಚ್ಚುವರಿಯಾಗಿ ಒಂದು ತಿಂಗಳು ವಿಸ್ತರಿಸಬೇಕು ಎಂದು ಆಗ್ರಹಿಸಿದರು.

ಉದಯವಾಹಿನಿ ಚಿತ್ರ

> ಬೇಡ ಜಂಗಮ ಸಮುದಾಯ ಲಿಂಗಾಯತ ಸಮುದಾಯಕ್ಕೆ ಸೇರಿದ್ದು ಪರಿಶಿಷ್ಟ ಜಾತಿಯ ಪಟ್ಟಿಯಿಂದ ತೆಗೆದುಹಾಕಬೇಕು
> -ವೆಂಕಟರಮಣ ಸ್ವಾಮಿ ದಲಿತ ಮುಖಂಡ

ಸಹೋದರ ಸಮುದಾಯಗಳ ಮುಖಂಡರು, ರಾಜಕೀಯ ನಾಯಕರು, ಶಿಕ್ಷಕರು ಸಮೀಕ್ಷೆಯಲ್ಲಿ ಮೂಲ ಜಾತಿಯ ಹೆಸರು ನಮೂದಿಸುವ ಕೆಲಸ ಮಾಡುತ್ತಿದ್ದಾರೆ. ನಮ್ಮ ಸಮುದಾಯದ ಸಚಿವರಾದ ಎಚ್.ಸಿ.ಮಹದೇವಪ್ಪ, ಜಿ.ಪರಮೇಶ್ವರ್, ಪ್ರಿಯಾಂಕ್ ಖರ್ಗೆ ಬೀದಿಗಿಳಿದು ಸಮುದಾಯದವರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು ಎಂದರು.

ಸಮೀಕ್ಷೆಯಲ್ಲಿ ಹೊಲಯ ಎಂದು ಬರೆಸುವ ಮೂಲಕ ಸಮುದಾಯದ ನಿಖರ ಸಂಖ್ಯೆ ನಮೂದಿಸಬೇಕು ಸಂಖ್ಯಾ ಬಲ ತೋರಿಸಬೇಕು. ಸಮೀಕ್ಷೆಯಲ್ಲಿ ಸರಿಯಾಗಿ ಜಾತಿಯ ಹೆಸರು ನಮೂದಿಸದಿದ್ದರೆ ನ್ಯಾ.ನಾಗಮೋಹನ್ ದಾಸ್ ವರದಿ ಸಮುದಾಯದ ಪಾಲಿಗೆ ಮರಣ ಶಾಸನವಾಗಲಿದೆ ಎಂದು ಎಚ್ಚರಿಕೆ ನೀಡಿದರು. ಸಮುದಾಯದ ನೌಕರರು, ಶಿಕ್ಷಕರು, ರೈತರು ಸಮೀಕ್ಷೆಯಲ್ಲಿ ಜಾತಿಯ ಹೆಸರನ್ನು ಸರಿಯಾಗಿ ಬರೆಸಲು ಕ್ರಮ ಕೈಗೊಳ್ಳಬೇಕು ಎಂದು ವೆಂಕಟರಮಣ ಸ್ವಾಮಿ ಮನವಿ ಮಾಡಿದರು.

ಭೂಮಿ ಪೂಜೆ; ಜೆಡಿಎಸ್ ಕಾಂಗ್ರೇಸ್ ಹಗ್ಗ ಜಗ್ಗಾಟ

• ಉದಯವಾಹಿನಿ, ಹನೂರು

ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹಲವೆಡೆಗಳಲ್ಲಿ ಸೋಮ ವಾರ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ಕಾರ್ಯಕ್ರಮಗಳು ನಿಗದಿಯಾಗಿದ್ದು, ಜೆಡಿಎಸ್ ಹಾಗೂ ಕಾಂಗ್ರೇಸ್ ಕಾರ್ಯಕರ್ತರ ಮಧ್ಯೆ ಹಗ್ಗಜಗ್ಗಾಟ ಶುರುವಾಗಿದೆ.

ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸುವುದು ಯಾರು ಎಂಬ ಪ್ರಶ್ನೆ ಉಭಯ ಪಕ್ಷಗಳ ಕಾರ್ಯಕರ್ತರ ಮಧ್ಯೆ ಮೂಡಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಜೋರು ಚರ್ಚೆಗಳು ನಡೆಯುತ್ತಿವೆ. ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮೋಡಹಳ್ಳಿ ಸರ್ಕಲ್‌

ಅಂತರಾಳದಿಂದ... EDITORIAL

ನಿಯಂತ್ರಣಕ್ಕೆ ಬಂದ ಹಣದುಬ್ಬರ; ಪ್ರಗತಿಗೆ ಒತ್ತು ನೀಡಲು ಸಕಾಲ

ಸಗಟು ಮತ್ತು ಚಿಲ್ಲರೆ ಹಣದುಬ್ಬರ ದರ ಇಳಿಕೆಯ ಹಾದಿಯಲ್ಲಿರುವುದು ಸ್ವಾಗತಾರ್ಹ ಬೆಳವಣಿಗೆ. ಕೆಲವು ತಿಂಗಳಿಂದ ಇದ್ದ ಈ ಪ್ರವೃತ್ತಿ ಏಪ್ರಿಲ್ ತಿಂಗಳಲ್ಲಿಯೂ ಮುಂದುವರಿದಿದೆ. ಸಗಟು ದರ ಸೂಚ್ಯಂಕ ಆಧಾರದಲ್ಲಿ ಲೆಕ್ಕ ಹಾಕಲಾಗುವ ಸಗಟು ಹಣದುಬ್ಬರ ದರವು ಕಳೆದ ತಿಂಗಳು ಅತ್ಯಲ್ಪ ಅಂದರೆ, ಶೇಕಡ 0.9ರಷ್ಟು ಇತ್ತು. ಇದು, 14 ತಿಂಗಳಲ್ಲಿಯೇ ಅತ್ಯಂತ ಕಡಿಮೆ ದರ. ಸಗಟು ಹಣದುಬ್ಬರ ದರವು ಎರಡು ವರ್ಷಗಳಿಂದಲೂ ಕಡಿಮೆ ಪ್ರಮಾಣದಲ್ಲಿಯೇ ಇದೆ ಅಥವಾ ಕೆಲವೊಮ್ಮೆ ಋಣಾತ್ಮಕ ಮಟ್ಟಕ್ಕೆ ಹೋದದ್ದೂ ಉಂಟು. ಹಾಗಾಗಿ, ಕಳೆದ ತಿಂಗಳ ದರವು ಆಶ್ಚರ್ಯಕರವೇನೂ ಅಲ್ಲ. ಚಿಲ್ಲರೆ ಹಣದುಬ್ಬರವು ಗ್ರಾಹಕರು, ನೀತಿ ನಿರೂಪಕರಿಗೆ ಹೆಚ್ಚು ಮುಖ್ಯವಾದುದು. ಏಪ್ರಿಲ್‌ನಲ್ಲಿ ಈ ದರ ಶೇ 3.2ರಷ್ಟು ಇತ್ತು. ಆರು ವರ್ಷಗಳಲ್ಲಿ ಇದು ಅತ್ಯಂತ ಕಡಿಮೆ ದರ. ಈ ದರ ಮಾರ್ಚ್ ತಿಂಗಳಲ್ಲಿ ಶೇ 3.3ರಷ್ಟು ಇತ್ತು. ಕಳೆದ ಕೆಲವು ವಾರಗಳಲ್ಲಿ ತರಕಾರಿ ದರಗಳಲ್ಲಿ ಆಗಿರುವ ಕುಸಿತವು ಹಣದುಬ್ಬರ ದರ ಇಳಿಕೆಗೆ ಮುಖ್ಯ ಕಾರಣ. ತರಕಾರಿ ದರ ಶೇ 11ರಷ್ಟು ಕುಸಿದರೆ, ಧಾನ್ಯಗಳ ದರಗಳಲ್ಲಿ ಶೇ 5ರಷ್ಟು ಕುಸಿತವಾಗಿದೆ. ಈ ಎರಡಕ್ಕೂ ಆಹಾರ ಪದಾರ್ಥಗಳಲ್ಲಿ ಪ್ರಮುಖ ಸ್ಥಾನವಿದೆ. ಹವಾಮಾನ ಮತ್ತು ಇತರ ಅಂಶಗಳಿಂದಾಗಿ ತರಕಾರಿ ಮತ್ತು ಧಾನ್ಯಗಳ ಪೂರೈಕೆ ಸಮೃದ್ಧವಾಗಿತ್ತು. ಪೂರೈಕೆ ಉತ್ತಮವಾಗಿದ್ದ ಕಾರಣಕ್ಕೆ ದರಗಳು ಕುಸಿದು ಹಣದುಬ್ಬರ ಇಳಿಕೆಯಾಗಲು ನೆರವಾಗಿದೆ. ಸರ್ಕಾರ ಕೈಗೊಂಡ ಕೆಲವು ಕ್ರಮಗಳು ಕೂಡ ಹಣದುಬ್ಬರ ಇಳಿಕೆಗೆ ಸಹಾಯ ಮಾಡಿವೆ. ಸರ್ಕಾರವು ಮೀಸಲು ದಾಸ್ತಾನನ್ನು ಹೆಚ್ಚಿಸಿದೆ. ಮಾರುಕಟ್ಟೆಗೂ ಸರಕುಗಳನ್ನು ಪೂರೈಸಲಾಗಿದೆ. ಜೊತೆಗೆ. ಆಮದು ನಿರ್ಬಂಧಗಳನ್ನು ಸಡಿಲಿಸಲಾಗಿದೆ. ಕಳೆದ ವರ್ಷದ ಏಪ್ರಿಲ್‌ನಲ್ಲಿ ದರಗಳು ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದ್ದವು. ಹಾಗಾಗಿ, ದರ ಕುಸಿತದ ಪ್ರಮಾಣವು ಹೆಚ್ಚು ಇರುವಂತೆ ಕಾಣಿಸುತ್ತಿದೆ. ಕಳೆದ ಕೆಲವು ತಿಂಗಳಲ್ಲಿ ವ್ಯವಸ್ಥೆಯಲ್ಲಿ ನಗದು ಹರಿವು ಕಡಿಮೆ ಇತ್ತು. ಅದು ಕೂಡ ಹಣದುಬ್ಬರ ಕುಸಿತಕ್ಕೆ ಕಾರಣವಾಗಿರಬಹುದು. ಹಣದುಬ್ಬರವು ಇನ್ನಷ್ಟು ಇಳಿಕೆಯಾಗಿ ಈ ವರ್ಷದಲ್ಲಿ ಸರಾಸರಿ ಶೇ 3.5ರಷ್ಟು ದಾಖಲಾಗಬಹುದು ಎಂಬ ಅಂದಾಜು ಇದೆ. ಇತ್ತೀಚಿನ ಕೆಲವು ವರ್ಷಗಳಲ್ಲಿ ಸರಾಸರಿ ದರವು ಶೇ 6ರ ಆಸುಪಾಸಿನಲ್ಲಿಯೇ ಇತ್ತು. ಕಚ್ಚಾ ತೈಲ ದರವು ಇಳಿಕೆಯಾಗಬಹುದು ಮತ್ತು ವಾಡಿಕೆಗಿಂತ ಉತ್ತಮ ಮುಂಗಾರು ಮಳೆಯಾಗಿ ಕೃಷಿ ಉತ್ಪನ್ನಗಳ ಉತ್ಪಾದನೆ ಹೆಚ್ಚಬಹುದು ಎಂಬುದು ಈ ನಿರೀಕ್ಷೆಗೆ ಕಾರಣ. ಈ ವರ್ಷದ ಆರಂಭದಿಂದಲೇ ಹಣದುಬ್ಬರವು ಇಳಿಕೆಯ ಹಾದಿಯಲ್ಲಿ ಇತ್ತು. ಬೆಲೆ ಏರಿಕೆಯ ಬಿಸಿಗೆ ತತ್ತರಿಸಿದ್ದ ಗ್ರಾಹಕರನ್ನು ಇದು ತುಸು ನಿರಾಳಗೊಳಿಸಿತ್ತು. ಈಗಿನ ಹಣದುಬ್ಬರ ಇಳಿಕೆಯು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ನೀತಿಯ ಮೇಲೆ ಪರಿಣಾಮ ಬೀರಲಿದೆ. ಹಣದುಬ್ಬರವು ನಿಯಂತ್ರಣದಲ್ಲಿರುವಾಗ, ಪ್ರಗತಿಗೆ ವೇಗ ತುಂಬಲು ಆರ್ಥಿಕ ನೀತಿಯಲ್ಲಿ ಆರ್‌ಬಿಐ ಬದಲಾವಣೆಗಳನ್ನು ತರಬಹುದು. ರೆಪೊ ದರವನ್ನು ಶೇ 0.25ರಷ್ಟು ಕಡಿತ ಮಾಡಲು ಏಪ್ರಿಲ್‌ನಲ್ಲಿ ನಡೆದ ಸಭೆಯಲ್ಲಿ ಆರ್‌ಬಿಐ ನಿರ್ಧರಿಸಿದೆ. ಜೂನ್‌ನಲ್ಲಿ ನಡೆಯಲಿರುವ ಹಣಕಾಸು ನೀತಿ ಸಮಿತಿ ಸಭೆಯಲ್ಲಿ ರೆಪೊ ದರ ಇನ್ನಷ್ಟು ಕಡಿತವಾಗುವುದು ಈಗ ಬಹುತೇಕ ಖಚಿತ. ಮುಂದಿನ ತಿಂಗಳು ಮತ್ತು ಆಗಸ್ಟ್‌ನಲ್ಲಿ ನಡೆಯಲಿರುವ ನೀತಿ ಪರಾಮರ್ಶೆ ಸಭೆಯಲ್ಲಿ ರೆಪೊ ದರವನ್ನು ಶೇ 0.50ರಷ್ಟು ಇಳಿಸಬಹುದು ಎಂಬ ನಿರೀಕ್ಷೆ ಇದೆ.

ದೇಶದ ವಿದೇಶಾಂಗ ನೀತಿಯನ್ನ ಯಾರು ತೀರ್ಮಾನ ಮಾಡ್ತಾರೆ: ಪ್ರಿಯಾಂಕ್ ಖರ್ಗೆ

• ಉದಯವಾಹಿನಿ ಬೆಂಗಳೂರು

ದೇಶದ ವಿದೇಶಾಂಗ ನೀತಿಯನ್ನು ಯಾರು ತೀರ್ಮಾನ ಮಾಡ್ತಾರೆ. ಪ್ರಧಾನಿ ಮೋದಿಯವರಾ ಅಥವಾ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಾ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು. ಬೆಂಗಳೂರಿನಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಆಪರೇಷನ್ ಸಿಂಧೂರ ಬಗ್ಗೆ ಮಾತನಾಡಿದ ನಾಯಕರನ್ನ ಪಾಕಿಸ್ತಾನಕ್ಕೆ ಕಳಿಸಬೇಕೆಂದು ಬಿಜೆಪಿ ನಾಯಕರು ಹೇಳ್ತಾರೆ. ಬಹಳ ಸ್ಪಷ್ಟವಾಗಿ ಮೊದಲ ದಿನದಿಂದಲೂ ಯಾವುದೇ ನಿರ್ಧಾರ ಇದ್ದರೂ ಸರ್ಕಾರದ ಜೊತೆ ಇದ್ದೇವೆ ಎಂದು ಹೇಳಿದ್ದೇವೆ. ಕದನ ವಿರಾಮ ನಿಮ್ಮಿಂದ ಆಗಿದ್ರೆ ಬಹಳ ಸಂತೋಷ. ಅದನ್ನ ಡೊನಾಲ್ಡ್ ಟ್ರಂಪ್ ಯಾಕೆ ಘೋಷಣೆ ಮಾಡ್ತಾರೆ. ನಿಮ್ಮ ಹೇಳಿಕೆಗೆ, ಅಮೆರಿಕ ಅಧ್ಯಕ್ಷರ ಹೇಳಿಕೆಗೆ ವ್ಯತ್ಯಾಸ ಯಾಕಿದೆ ಎಂದರು. ನನ್ನಿಂದ ಕದನ ವಿರಾಮ ಆಗಿದೆ ಎಂದು ಏಳನೇ ಬಾರಿ ಟ್ರಂಪ್ ಹೇಳಿದ್ದಾರೆ.

ರಾಮಾಯಣ

ಸುಮಂತ್ರನು ಕೌಸಲ್ಯಾ ದೇವಿಗೆ ಹೇಳಿದ ಸಮಾಧಾನ

• ಹಿಂದಿನ ಸಂಚಿಕೆಯಿಂದ 78ನೆಯ ಅಧ್ಯಾಯ

ನಾನು ಆತನನ್ನು ಕಾಣದೆ ಜೀವಿಸಲಾರೆನು. ದಂಡಕಾರಣ್ಯದಲ್ಲಿ ಸೀತಾಲಕ್ಷ್ಮಣ ಸಮೇತನಾಗಿರುವ ಶ್ರೀರಾಮನ ಸಮೀಪಕ್ಕೆ ಹೋಗದಿದ್ದೆನಾದರೆ ಯಮನ ಮಂದಿರವನ್ನೆ ದುವೆನು ಎಂದು ನುಡಿದಳು. ಸುಮಂತ್ರನು ಸಂತವಿಡುತ್ತ ಆ ದೇವಿಯನ್ನು ಕುರಿತು ಈ ಪ್ರಕಾರ ನುಡಿದನು: ''ಕೌಸಲ್ಯಾದೇವಿ, ದುಃಖದಿಂದುಂಟಾದ ಆಜ್ಞಾನದ ಭ್ರಮೆಯನ್ನು ಬಿಡು. ಶ್ರೀರಾಮನು ಮನಸ್ಸಿನಲ್ಲಿ ವ್ಯಥೆಯಿಲ್ಲದೆ ವನವಾಸಮಾಡಿಕೊಂಡು ಸುಖದಿಂದಿದ್ದಾನೆ. ಧರ್ಮರಹಸ್ಯವನ್ನು ಬಲ್ಲ ಲಕ್ಷ್ಮಣನು ಆತನ ಪಾದಸೇವೆಯನ್ನು ಮಾಡುತ್ತಿದ್ದಾನೆ. ಸೀತಾದೇವಿಯು ನಿರ್ಜನವಾದ ವನದಲ್ಲಿ ಶ್ರೀರಾಮನ ಸಮೀಪದಲ್ಲಿ ತನ್ನ ಅರಮನೆಯಲ್ಲಿರುವಂತೆ ಸುಖವಾಗಿದ್ದಾಳೆ. ಆ ದೇವಿಯಲ್ಲಿ ಸ್ವಲ್ಪವಾದರೂ ದುಃಖವನ್ನು ಕಾಣಲಿಲ್ಲ. ವನದಲ್ಲಿ ಸಂಚರಿಸುವ ಅಭ್ಯಾಸವುಳ್ಳವಳ ಗೀತಿಯಲ್ಲಿದ್ದಾಳೆ. ಆ ದೇವಿಯ ಮನಸ್ಸು ಶ್ರೀರಾಮನಲ್ಲಿಯೇ ಐಕ್ಯವಾಗಿದೆ. ಆಕೆಯ ಜೀವವು ಶ್ರೀರಾಮನಲ್ಲಿಯೇ ಅಡಕವಾಗಿದೆ. ಆ ದೇವಿಗೆ ಆತನಿಲ್ಲದ ಅಯೋಧ್ಯಾ ಪಟ್ಟಣವು ಅರಣ್ಯದಂತೆ ತೋರುವುದು. ಆಕೆಯು ದಾರಿಯಲ್ಲಿ ಸಂಚರಿಸುವಾಗ ಮಾರ್ಗದಲ್ಲಿರುವ ಪಟ್ಟಣಗಳು ಗ್ರಾಮಗಳು ವನಗಳು ನದಿಗಳು ಸರೋವರಗಳು ವೃಕ್ಷಗಳು ಮೊದಲಾದವುಗಳ ಹೆಸರುಗಳನ್ನು ಶ್ರೀರಾಮನನ್ನಾದರೂ ಲಕ್ಷ್ಮಣನನ್ನಾದರೂ ಕೇಳಿ ತಿಳಿಯುತ್ತ ಅಯೋಧ್ಯಾ ಪಟ್ಟಣಕ್ಕೆ ಕೂಗಳತೆಯಲ್ಲಿರುವ ಉದ್ಯಾನವನದಲ್ಲಿರುವಂತೆ ಇದ್ದಾಳಲ್ಲದೆ ಮನಸ್ಸಿನಲ್ಲಿ ವಿಷಾದಿಸುತ್ತಿಲ್ಲ. ಕೈಕೇಯಿ ದೇವಿಯ ಪ್ರಸಂಗವನ್ನು ಒಂದುಸಾರಿಯಾದರೂ ನುಡಿಯುವುದಿಲ್ಲ. ಆ ಪ್ರಸಂಗ ಬಂದರೂ ಅದನ್ನು ಮನಸ್ಸಿಗೆ ತೆಗೆದುಕೊಳ್ಳದೆ ಸಂತೋಷವುಳ್ಳವಳಾಗಿಯೇ ಇದ್ದಾಳೆ. ಮಾರ್ಗದಲ್ಲಿ ಸುಳಿಗಾಳಿ ಬೀಸಿದರೂ ಅತ್ಯಂತ ಬಿಸಿಲುಕಾದರೂ ಚಂದ್ರನ ಹಾಗೆ ಕಾಂತಿಯುಳ್ಳ ಸೀತಾದೇವಿಯ ಮುಖವು ಸ್ವಲ್ಪವಾದರೂ ಕಾಂತಿಗುಂದುವುದಿಲ್ಲ. ಕಮಲದಂತೆಯೂ ಪೂರ್ಣಚಂದ್ರನಂತೆಯೂ ಇರುವ ಆ ದೇವಿಯ ಮುಖದಲ್ಲಿ ಸ್ವಲ್ಪವಾದರೂ ಕಳಂಕವನ್ನು ಕಾಣುವಂತಿಲ್ಲ. ಕಮಲದ ಮೊಗ್ಗುಗಳಂತಿರುವ ಆ ದೇವಿಯ ಪಾದಗಳು ಅರಗಿನ ರಸದಿಂದ ಕೂಡಿರದಿದ್ದರೂ ಅರಗಿನಿಂದ ಅಲಂಕರಿಸಲ್ಪಟ್ಟ ಹಾಗೆಯೇ ನಡೆಯುವಾಗ ಮನೋಹರವಾಗಿವೆ. ಸಂಚರಿಸುವಾಗ ಭೂಷಣಗಳನ್ನು ತೊಟ್ಟಿದ್ದರೆ ಗಮನಕ್ಕೆ ಪ್ರತಿಬಂಧಕವೆಂಬ ಬುದ್ಧಿಯಿಂದ ಸಮಸ್ತ ಭೂಷಣಗಳನ್ನು ಬಿಚ್ಚಿದ್ದರೂ ಭೂಷಣಗಳನ್ನು ತೊಟ್ಟಂತೆ ಒಪ್ಪುತ್ತಿದ್ದಾಳೆ. ಮಾರ್ಗದಲ್ಲಿ ಆನೆ ಸಿಂಹ ವ್ಯಾಘ್ರಗಳನ್ನು ಕಂಡರೂ ಶ್ರೀರಾಮನ ತೋಳನ್ನು ಹಿಡಿದುಕೊಂಡು ಹೆದರದೆ ಇದ್ದಾಳೆ. ಅಂಥ ಸೀತಾಲಕ್ಷ್ಮಣಸಮೇತನಾದ ಶ್ರೀರಾಮನನ್ನು ಕುರಿತು ದುಃಖಪಡಬಾರದು. ಹೇಗಿದ್ದಾನೋ ಎಂದು ವ್ಯಥೆಯು ಸಲ್ಲದು. ಆತನು ತನ್ನ ತಂದೆಯಾದ ದಶರಥರಾಯನ ಮಾತನ್ನು ಮೀರದೆ ವನದಲ್ಲಿ ಕಂದ ಮೂಲ ಫಲಾಹಾರಗಳನ್ನು ಮಾಡಿಕೊಂಡು ಹದಿನಾಲ್ಕು ವರುಷ ಪರ್ಯಂತ ಸೀತಾಲಕ್ಷ್ಮಣಸಮೇತನಾಗಿ ಸುಖವಾಗಿರುತ್ತಾನೆ ಎಂದು ಹೇಳಿದನು. ಈ ಪ್ರಕಾರವಾಗಿ ನುಡಿದ ಸುಮಂತ್ರನ ಮಾತನ್ನು ಕೇಳಿದರೂ ಕೌಸಲ್ಯಾದೇವಿಯು ಪುತ್ರಸ್ನೇಹದಿಂದ ಅತ್ಯಂತ ದುಃಖಿತೆಯಾಗಿ ''ಹಾ ರಾಮಾ ! ಹಾ ರಾಘವಾ ! ಹಾ ಸೀತೇ ! ಹಾ ಲಕ್ಷ್ಮಣಾ ! ಎಂದು ಹಂಬಲಿಸುತ್ತಿದ್ದಳು.

ಮುಂದುವರಿಯುವುದು...

ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ, ವಿಮರ್ಶಕರು

ಡಾ: ಗಿರೀಶ್ ಕಾರ್ನಾಡ್ ರವರ 87ನೇ ವರ್ಷದ ಜನ್ಮಜಯಂತಿ

ಗುಬ್ಬಿ ವೀರಣ್ಣ ರಾಜ್ಯೋತ್ಸವ

ಡಾಕ್ಟರ್: ಗಿರೀಶ್ ಕಾರ್ನಾಡ್ ಅವರು 1938 ಮೇ 19 ರಂದು ಮಹಾರಾಷ್ಟ್ರದ ಮತೇರನ್ ಎಂಬಲ್ಲಿ ಜನಿಸಿದರು. ತಂದೆ ರಘು ನಾಥ್ ಕಾರ್ನಾಡ್ ತಾಯಿ ಕೃಷ್ಣಾಬಾಯಿ. ಧಾರವಾಡದಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಪಡೆದು ಕರ್ನಾಟಕ ವಿಶ್ವವಿದ್ಯಾಲಯ ವಿದ್ಯಾರ್ಥಿಯಾಗಿ ಪದವೀಧರರಾದರು. ಆ ಬಳಿಕ ಮುಂಬೈ ವಿಶ್ವವಿದ್ಯಾಲಯದಲ್ಲಿ ಸಂಖ್ಯಾಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದು ನಂತರ ಇಂಗ್ಲೆಂಡಿನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ನಡೆಸಲು ಪ್ರತಿಷ್ಠಿತ ರೋಡ್ಸ್ ವಿದ್ಯಾರ್ಥಿ ವೇತನ ದೊರೆಯಿತು. ಆಕ್ಸ್‌ಫರ್ಡ್‌ನಲ್ಲಿ ತತ್ವಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರದಲ್ಲಿ ಎಂ ಎ ಪದವಿ ಪಡೆದರು. ನಂತರ ಆಕ್ಸ್‌ಫರ್ಡ್ ಯೂನಿಯನ್ ಸೊಸೈಟಿ ಅಧ್ಯಕ್ಷರಾದರು.

ಭಾರತಕ್ಕೆ ಹಿಂತಿರುಗಿದ ನಂತರ ಮದ್ರಾಸಿನಲ್ಲಿದ್ದ ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್ನಲ್ಲಿ ಕೆಲಕಾಲ ಮೆನೇಜರ್ ಆಗಿ ಕೆಲಸ ಮಾಡಿ ಇದೇ ವೇಳೆಯಲ್ಲಿ ಮದ್ರಾಸಿನ ಹವ್ಯಾಸಿ ರಂಗಭೂಮಿಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಹೆಚ್ಚಿನ ಅನುಭವಗಳಿಸಿದರು. ಇಟಲಿ ರಷ್ಯಾ ಹಾಗೂ ಅಮೆರಿಕ ದೇಶಗಳ ಪ್ರಸಿದ್ಧ ನಾಟಕಕಾರರ ನಾಟಕಗಳನ್ನು ನಿರ್ದೇಶಿಸಿದ್ದರು. ಕಾರ್ನಾಡರು ಮೊದಲು ಬರೆದ ನಾಟಕ ಮಾನಿಷಾದ ರೇಡಿಯೋ ನಾಟಕವಾಗಿ ಪ್ರಸಾರವಾಯಿತು. ಆ ಬಳಿಕ ಇವರು ಕ್ರಮವಾಗಿ ಯಯಾತಿ, ತುಘಲಕ್, ಹಯವದನ, ಅಂಜುಮಲ್ಲಿಗೆ, ಹಿಟ್ಟಿನಹುಂಜ, ನಾಗಮಂಡಲ, ತಲೆದಂಡ, ಅಗ್ನಿ ಮತ್ತು ಮಳೆ ಹಾಗೂ ಟಿಪ್ಪು ಸುಲ್ತಾನ್ ಕಂಡ ಕನಸು ಎಂಬ ನಾಟಕಗಳನ್ನು ರಚಿಸಿದರು. ಕಾರ್ನಾಡ್ ರವರು ಪ್ರತಿಭಾವಂತ ನಾಟಕಕಾರ, ಕಲಾವಿದ, ನಿರ್ದೇಶಕರಾಗಿ ಹಲವಾರು ಪ್ರಶಸ್ತಿ ಪುರಸ್ಕಾರಗಳು ದೊರೆತಿವೆ. ಜನಪದ ರಂಗಭೂಮಿಯ ತಂತ್ರಗಳಲ್ಲಿ ಸೃಜನಾತ್ಮಕ ವೈವಿಧ್ಯಗಳನ್ನು ತಂದ ಇವರಿಗೆ ಹೋಮಿ ಬಾಬಾ ಫೆಲೋಷಿಪ್ ದೊರಕಿದೆ. ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿ ನೀಡಿದೆ. ಭಾರತ ಸರ್ಕಾರ ಪದ್ಮಶ್ರೀ ಹಾಗೂ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ. ಸಂಗೀತ ನಾಟಕ ಅಕಾಡೆಮಿಯ ಫೆಲೋ ಎಂಬ ಗೌರವ ಇವರಿಗೆ ಸಂದಿದೆ.

ಕರ್ನಾಟಕ ಸರ್ಕಾರ ಗುಬ್ಬಿ ವೀರಣ್ಣ, ರಾಜ್ಯೋತ್ಸವ ಪ್ರಶಸ್ತಿ ನೀಡಿದೆ. ಮಧ್ಯಪ್ರದೇಶ ಸರ್ಕಾರ ಕಾಳಿದಾಸ ಸಮ್ಮಾನ್ ಪ್ರಶಸ್ತಿ ನೀಡಿ ಗೌರವಿಸಿದೆ. ಕಾರ್ನಾಡರ ತಲೆದಂಡ ನಾಟಕಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ದೊರೆತಿವೆ. 1998 ರಲ್ಲಿ ಭಾರತದ ಅತ್ಯುನ್ನತ ಸಾಹಿತ್ಯ ಪ್ರಶಸ್ತಿಯಾದ ಭಾರತೀಯ ಜ್ಞಾನಪೀಠ ಪ್ರಶಸ್ತಿ ದೊರಕಿದೆ. ಕನ್ನಡದ ನಾಟಕ ಸಾಹಿತ್ಯ ಪ್ರಕಾರಕ್ಕೆ ಅಮೂಲ್ಯ ಕೊಡುಗೆ ನೀಡಿ, ರಂಗಭೂಮಿ, ಚಲನಚಿತ್ರ ಕ್ಷೇತ್ರಗಳಲ್ಲಿ ಅನನ್ಯ ಸಾಧನೆ ಮಾಡಿ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಕೀರ್ತಿಗಳಿಸಿದ ಗಿರೀಶ್ ಕಾರ್ನಾಡರವರು ಕನ್ನಡಿಗರ ಹೆಮ್ಮೆ ಎನಿಸಿದ್ದಾರೆ. ಗಿರೀಶ್ ಕಾರ್ನಾಡ್ ರವರು ವೈಚಾರಿಕ, ವೈಜ್ಞಾನಿಕ ಮತ್ತು ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ಜೀವನವನ್ನು ರೂಪಿಸಿಕೊಂಡು, ಸಕಾರಾತ್ಮಕ ಚಿಂತನೆಯೊಂದಿಗೆ, ಸಾಧಕ-ಬಾದಕಗಳನ್ನು ಅರ್ಥ ಮಾಡಿಕೊಂಡು ಬದ್ಧತೆಯಲ್ಲಿ ಬದುಕಿದ ಜೀವ. ಅವರಿಗೆ ಆಡಂಬರಗಳ ಬಗ್ಗೆ ಆಸ್ಥೆ ಇರಲಿಲ್ಲ, ಸನಾತನ ಸಂಪ್ರದಾಯಗಳ ಕುರಿತು ಭ್ರಮೆಗಳಿರಲಿಲ್ಲ, ಸಾವಿನ ನಂತರದ ಸ್ವರ್ಗ-ನರಕಗಳ ಕಲ್ಪನೆಗಳ ಕುರಿತು ನಂಬಿಕೆಗಳಿರಲಿಲ್ಲ, ಇರುವವರೆಗೆ ಎಲ್ಲಾ, ಸತ್ತ ಮೇಲೆ ಏನೂ ಇಲ್ಲಾ ಎಂದು ಅರಿತಿದ್ದರು.

ಹಾಗಾಗಿ ಸಾವಿಗೆ ಮುನ್ನವೇ, ಸತ್ತ ನಂತರ ಯಾವುದೇ ಧಾರ್ಮಿಕ ವಿಧಿವಿಧಾನಗಳನ್ನು ಮಾಡಕೂಡದು, ಸತ್ತ ಶವದ ಮೆರವಣಿಗೆ, ವೈಭವೀಕರಣಗಳು ಆಗಕೂಡದು, ಸರ್ಕಾರಿ ಗೌರವಾದರಗಳು ನಡೆಯಕೂಡದು, ಎಂದು ತಮ್ಮ ಮಗನಿಗೆ ಕಟ್ಟಾಜ್ಞೆ ಮಾಡಿ ತಮ್ಮ ಪಾಡಿಗೆ ಅವರು ಜಗದ ಯಾತ್ರೆಯನ್ನು ದಿನಾಂಕ: 10-06-2019 ರಂದು ಮುಗಿಸಿ ಮತ್ತೆ ಮರಳಿ ಬಾರದ ಶೂನ್ಯದತ್ತ ಹೊರಟರು.

ಒಬ್ಬ ಮನುಷ್ಯ ಕಲೆಯಾಗಿ ಅರಳಿ, ಸಂಸ್ಕೃತಿಯಾಗಿ ರೂಪತೋರಿ, ಕಡೆಗೆ ಸಾಹಿತ್ಯಕವಾಗಿ ಮುಡಿಪಿರಬೇಕು. ಅಂತಹ ಉತ್ತಮ, ಅತ್ಯುತ್ತಮವಾದ ವ್ಯಕ್ತಿತ್ವವನ್ನು ಗಳಿಸಿಕೊಂಡವರ ಪೈಕಿ ಒಬ್ಬರಾಗಿರುತ್ತಾರೆ. ಸನ್ಮಾನ್ಯರ ಇಂದು 87 ನೇ ವರ್ಷದ ಜನ್ಮ ಜಯಂತಿಯನ್ನು ಶ್ರದ್ಧಾಭಕ್ತಿಯಿಂದ ಆಚರಿಸಿ ಅವರನ್ನು ಸ್ಮರಿಸಿ ನೆನೆಯುತ್ತಾ ಅವರು ಬಿಟ್ಟು ಹೋಗಿರುವ ವೈಚಾರಿಕ, ವೈಜ್ಞಾನಿಕ ಹಾಗೂ ಆದರ್ಶ ಮನೋಭಾವಗಳನ್ನ ಕನ್ನಡ ಮನಸ್ಸುಗಳಾದ ನಾವುಗಳು ನಮ್ಮ ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವ ಸಂಕಲ್ಪ ಮಾಡೋಣ.

ಸಾಮಾಜಿಕ ಕಳಕಳಿ

ಹೆಚ್.ಎಸ್.ಪ್ರತಿಮಾ ಹಾಸನ್
ಸಾಹಿತಿ, ಶಿಕ್ಷಕಿ, ಸಾಮಾಜಿಕ ಚಿಂತಕಿ. ಹಾಸನ

ಅತ್ಯಾಚಾರ

ಬಲು ದೊಡ್ಡ ಕಾಣಿಕೆ ನೀಡಿಹರು
ಕೆಲ ನೀಚ ಕುಡುಕ ಗಂಡಸರು
ನರ ಸತ್ತ ನಾಮರ್ದ ಕೀಚಕರು
ಮಗಳಂತ ಮಗುವ ಬಿಡದ ಕಾಮುಕರು.....
ಏನು ಅರಿಯದ ಕಿವುಡ ಮಗುವದು
ಮಾತು ಬರದಂತಹ ಮುಗ್ಧ ಮನವದು
ಭಗವಂತ ಕಣ್ಣು ಮುಚ್ಚಿಕೊಂಡಿಹನೇನು?
ಮಾನದ ಉಳಿವಿಗೆ ಹೋರಾಟದಿ ಜೀವ ಅಂತ್ಯವಾಗಿದೆ ? ....
ಹೇಗೆ ಹೇಳುವುದು ಸಾಂತ್ವನವ ಅದಕ್ಕೆ
ಉಳಿಯಲಿಲ್ಲ ಪ್ರಾಣ ಹಾರಿ ಹೋಗಿದೆ
ಮರೆಯಲಾಗದ ಕೃತ್ಯಗಳ ನಡೆಯುತ
ಸಾಲು ಸಾಲು ಸರದಿ ಬುತ್ತಿ ಕಟ್ಟಿ ಸಾಗುತ್ತಿದೆ.....
ಎತ್ತ ಹೊರಟಿದೆ ನಮ್ಮ ಸಮಾಜ
ಹೆಣ್ಣಾಗಿ ಹುಟ್ಟಿದ್ದೇ ತಪ್ಪೇನು ಹೇಳಿ?
ಕ್ರೂರ ಮೃಗಗಳ ಕೈತಪ್ಪಿಸಿಕೊಳ್ಳದಂತೆ
ಹೆಣ್ಣು ಮಕ್ಕಳು ಬಲಿಯಾಗುವಂತಾಗುತ್ತಿದೆ....
ಅತ್ಯಾಚಾರ ಎಂಬುದಕೆ ಕೊನೆ ಯಾವಾಗ?
ಹೆಣ್ಣಿಗೆ ರಕ್ಷಣೆ ಸಿಗುವುದೆ ಎಂಬ ಭಯದಲ್ಲಿ
ಬದುಕು, ಜೀವನ ಭಾರವಾಗಿ ಸಾಗುತಿದೆ
ಬಾಳಲು ಆಸೆ ಮೂಡಿಸುವಂತಾಗಬೇಕಿದೆ .....
ಪ್ರತಿ ಮನೆಯಲ್ಲೂ ಮೂಡಲಿ ಜಾಗೃತಿ
ಅರಿಯಲಿ ಹೆಣ್ಣಿನ ನೋವನು ಬದುಕಲಿ
ಪುರುಷರೇ ರಕ್ಷಿಸಲಿ ಸೋದರಿ

27 ಎಕರೆ ಅರಣ್ಯ ಭೂಮಿ ಒತ್ತುವರಿ ತೆರವು

• ಉದಯವಾಹಿನಿ ಹಾಸನ

ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚನೆಯಂತೆ, ಭಾನುವಾರ ಬೆಳಿಗ್ಗೆ ಅರಣ್ಯಾಧಿಕಾರಿಗಳು ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಬಾಗೂರು ಹೋಬಳಿಯ ಮಡಬ ಗ್ರಾಮದಲ್ಲಿ 27 ಎಕರೆ ಅರಣ್ಯ ಒತ್ತುವರಿ ತೆರವು ಮಾಡಿದ್ದಾರೆ.

ಮಡಬ ಗ್ರಾಮದ ಸರ್ವೆ ನಂ. 27ರಲ್ಲಿ ಸುಮಾರು 10 ಕೋಟಿಯಿಂದ 15 ಕೋಟಿ ಮೌಲ್ಯದ 26 ಎಕರೆ 33 ಗುಂಟೆ ಅರಣ್ಯ ಜಮೀನನ್ನು ಕೆಲವರು ಒತ್ತುವರಿ ಮಾಡಿ, ಅಲ್ಲಿದ್ದ ಮರಗಳನ್ನು ಕಡಿದು ತೋಟ ಮಾಡಿದ್ದರು. ಈ ಬಗ್ಗೆ ಅರಣ್ಯ ಇಲಾಖೆ ಕಚೇರಿಗೆ ದೂರು ಬಂದಿತ್ತು. ಅದನ್ನು ಆಧರಿಸಿ ಕಾನೂನು ರೀತ್ಯ ಕ್ರಮ ಜರುಗಿಸುವಂತೆ ಅ.23ರಂದು ಸಚಿವ ಈಶ್ವರ ಖಂಡ್ರೆ ಸೂಚನೆ ನೀಡಿದ್ದರು. ಈ ಜಮೀನು ಮೀಸಲು ಅರಣ್ಯವಾಗಿದ್ದು, ಅರಣ್ಯ ಒತ್ತುವರಿ ಮಾಡಿ ಮರ, ಗಿಡ ನಾಶ ಮಾಡಿ, ತೋಟ ಮಾಡಿದವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಅರಣ್ಯ ಇಲಾಖೆ ಅಧಿಕಾರಿಗಳು, ಭಾನುವಾರ ಬೆಳಿಗ್ಗೆ ಜೆಸಿಬಿಯೊಂದಿಗೆ ಸ್ಥಳಕ್ಕೆ ತೆರಳಿ, ಅರಣ್ಯ ಭೂಮಿ ತೆರವು ಮಾಡಿದ್ದಾರೆ. ಸ್ಥಳೀಯ ಪ್ರಭೇದದ ಸಸಿಗಳನ್ನು ನೆಟ್ಟು ಇಲಾಖೆಯ ಫಲಕ ಹಾಕಿದ್ದಾರೆ.

'ಕೆಲವು ವರ್ಷಗಳಿಂದ ಜಿಲ್ಲೆಯಲ್ಲಿ ಶುಂಠಿ ಬೆಳೆಯುವ ಹೆಸರಲ್ಲಿ ಕೆಲವರು ನಕಲಿ ದಾಖಲೆ ಸೃಷ್ಟಿಸಿಕೊಂಡು, ಅರಣ್ಯ ಭೂಮಿ ಕಬಳಿಸುತ್ತಿದ್ದು, ಬೆಲೆ ಬಾಳುವ ಮರ ಕಡಿದು ನಂತರ ತೋಟ ಮಾಡುತ್ತಿದ್ದಾರೆ.

ಅರಣ್ಯ ಸಚಿವರ ಸೂಚನೆಯಂತೆ ಇಂತಹ ಅಕ್ರಮಗಳಿಗೆ ಕಡಿವಾಣ ಹಾಕಲಾಗುತ್ತಿದೆ' ಎಂದು ಅರಣ್ಯ ಅಧಿಕಾರಿಗಳು ತಿಳಿಸಿದ್ದಾರೆ. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಏಡುಕೊಂಡಲ, ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಭ್ ಕುಮಾರ್ ಹಾಗೂ ಅರಣ್ಯ ಅಧಿಕಾರಿಗಳು ಕಾರ್ಯಾಚರಣೆ ನೇತೃತ್ವವಹಿಸಿದ್ದರು.

ಉದಯವಾಹಿನಿ ಚಿತ್ರ

ಈಶ್ವರ ಖಂಡ್ರೆ ಸೂಚನೆ

ಅರಣ್ಯ ಭೂಮಿಯನ್ನು ಮನಸೋ ಇಚ್ಛೆ ಒತ್ತುವರಿ ಮಾಡಿ ತೆಂಗು ಕಾಫಿ ಮತ್ತು ಅಡಿಕೆ ತೋಟ ಮಾಡುತ್ತಿದ್ದವರಿಗೆ ಮಡಬ ಅರಣ್ಯ ತೆರವು ಕಾರ್ಯಾಚರಣೆಯು ಎಚ್ಚರಿಕೆಯ ಗಂಟೆಯಾಗಿದೆ -ಈಶ್ವರ್ ಖಂಡ್ರೆ, ಅರಣ್ಯ ಸಚಿವ

4 ದಿನಕ್ಕೊಮ್ಮೆ ನೀರು: ಪರದಾಟ

• ಉದಯವಾಹಿನಿ ಜಮಖಂಡಿ

ಸಮೀಪದ ಕೃಷ್ಣಾನದಿಯ ಹಿಪ್ಪರಗಿ ಜಲಾಶಯದಲ್ಲಿ ನೀರಿದ್ದರೂ, ನಗರಸಭೆ ಅಧಿಕಾರಿಗಳು ಜಮಖಂಡಿ ನಗರಕ್ಕೆ ನಾಲ್ಕು ದಿನಕ್ಕೆ ಒಮ್ಮೆ ಮಾತ್ರ ನೀರು ಬಿಡುತ್ತಿದ್ದಾರೆ. ಇದರಿಂದ ನಗರದಲ್ಲಿ ನೀರಿನ ತೊಂದರೆಯಾಗುತ್ತಿದೆ. ನಗರಕ್ಕೆ ಹೊಂದಿಕೊಂಡಿರುವ ಆಲಗೂರ, ಕಂಕಣವಾಡಿ ಆರ್.ಸಿಗಳಿಗೆ ನಿತ್ಯ ನೀರಿನ ತೊಂದರೆಯಾಗುತ್ತಿದೆ, ನದಿಯಿಂದ ಯಾವುದೇ ನೀರಿನ ಪೈಪ್‌ಲೈನ್‌ಗಳು ಇಲ್ಲ, ಇನ್ನೂ ಅಲ್ಲಿನ ಜನ ಕೊಳವೆಬಾವಿ ಅವಲಂಬಿಸಿದ್ದಾರೆ. ಬೇಸಿಗೆ ಇರುವುದರಿಂದ ಕೊಳವೆ ಬಾವಿಗೆ ನೀರು ಕಡಿಮೆಯಾಗಿ ಆರ್.ಸಿ ಕೇಂದ್ರಗಳಲ್ಲಿ ನೀರಿನ ಹಾಹಾಕಾರ ಪ್ರಾರಂಭವಾಗಿದೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ನಗರಕ್ಕೆ 2013 ರಲ್ಲಿ 24★7 ಕಾಮಗಾರಿ ಆರಂಭಿಸಲಾಗಿದ್ದು, ಇನ್ನೂ ಪೂರ್ಣವಾಗಿಲ್ಲ. 2 ಹಂತದ ಯೋಜನೆಗಳು ಪೂರ್ಣವಾದರು ಕೆಲ ಕಡೆಗಳಲ್ಲಿ ಅಪೂರ್ಣವಾದ ಪೈಪ್‌ಲೈನ್ ಮಾಡಿದ್ದು, ಕೆಲ ಕಡೆಗಳಲ್ಲಿ ಮಾಡಿರುವ ಪೈಪ್‌ಲೈನ್ ಕಿತ್ತು ಹೋಗಿವೆ, ಇದರಿಂದ ನಗರದ ಜನರಿಗೆ ನೀರು ಪೂರೈಕೆಯಲ್ಲಿ ವ್ಯತ್ಯಾಸವಾಗುತ್ತಿದೆ ಎಂಬುದು ನಗರದ ಜನರ ಆರೋಪವಾಗಿದೆ. ಲಕ್ಕನಕೆರೆ ಹಾಗೂ ಕಟ್ಟಿಕೆರೆಯಲ್ಲಿ ನೀರು ಇರುವುದರಿಂದ ನಗರದಲ್ಲಿ ನೀರಿನ ತೊಂದರೆ ಉಂಟಾಗಿಲ್ಲ.

ಕೆರೆಗಳಲ್ಲಿ ನೀರು ಇರುವುದರಿಂದ ಹಲವಾರು ಕೊಳವೆ ಬಾವಿಗಳಿಗೆ ಇನ್ನೂ ನೀರು ಕಡಿಮೆಯಾಗಿಲ್ಲ ಎನ್ನುತ್ತಾರೆ ನಗರದ ನಿವಾಸಿಗಳು. ತಾಲ್ಲೂಕಿನ ಚಿಕ್ಕಪಡಸಲಗಿ ಶ್ರಮಬಿಂದು ಸಾಗರದಲ್ಲಿ ನೀರು ಖಾಲಿಯಾಗಿದ್ದು ನದಿ ಪಾತ್ರದ ಕಂಕಣವಾಡಿ, ಕಡಕೋಳ, ಮುತ್ತೂರ, ಮೈಗೂರ, ಶೂರ್ಪಾಲಿ, ತುಬಚಿ ಗ್ರಾಮಗಳಿಗೆ ನೀರಿನ ತೊಂದರೆಯಾಗುತ್ತಿದೆ.

• ಕಾರ್ಯಕ್ರಮದಲ್ಲಿ ಮೊಳಗಿತು ಜೈ ಭೀಮ್ ಜೈ ಭೀಮ್ ಭೀಮವಾದ ಬಂಧುಗಳ ಅರ್ಥಪೂರ್ಣ ಆಚರಣೆ

ಬಾಬಾ ಸಾಹೇಬ್ ಅಂಬೇಡ್ಕರ್ ಹಾಗೂ ಜಗಜೀವನ್ ರಾಮ್ ರವರ ಭೀಮೋತ್ಸವ

• ಉದಯವಾಹಿನಿ ಕಾರಟಗಿ

ಕರ್ನಾಟಕ ದಲಿತ ಸಂಘರ್ಷ ಸಮಿತಿ(ಭೀಮಾವಾದ) ಸಂಘಟನೆ ವತಿಯಿಂದ ಕಾರಟಗಿ ಪಟ್ಟಣದ ಪದ್ಮ ಶ್ರೀ ಫಂಕ್ಷನ್ ಹಾಲಿನಲ್ಲಿ ಸಂವಿಧಾನ ಶಿಲ್ಪಿ ಬಿ ಆರ್ ಡಾಕ್ಟರ್ ರವರ 134 ನೆ ಜಯಂತಿ ಮತ್ತು ಡಾ.ಬಾಬು ಜಗಜೀವನ ರಾಮ್ ರವರ 118 ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಪಟ್ಟಣದ ಕೆಪಿಎಸ್ ಶಾಲೆಯ ಹತ್ತಿರ ಬಿ ಆರ್ ಅಂಬೇಡ್ಕರ್ ಮತ್ತು ಬಾಬು ಜಗಜೀವನ ರಾಮ್ ಇವರ ಭಾವಚಿತ್ರಗಳಿಗೆ ಪೂಜೆ ಸಲ್ಲಿಸಿ ಪ್ರಾರಂಭವಾದ ಮೆರವಣಿಗೆ ನೂತನ ಬಸ್ ನಿಲ್ದಾಣ ಕನಕದಾಸ ವೃತ್ತದ ಮೂಲಕ ಸಾಗಿತು, ಬಿ ಆರ್ ಅಂಬೇಡ್ಕರ್ ಮತ್ತು ಬಾಬು ಜಗಜೀವನ ರಾಮ್ ಇವರ ಭವ್ಯ ಭಾವಚಿತ್ರಗಳನ್ನು ಅಲಂಕಾರ ಮಾಡಿದ ಟ್ರಾಕ್ಟರ್ ನಲ್ಲಿ ಇರಿಸಿ ನೂರಾರು ಭೀಮವಾದ ಸಂಗಾತಿಗಳ ಜೈ ಭೀಮ್ ಘೋಷಣೆಗಳ ಮೂಲಕ ರಸ್ತೆ ಯುದ್ಧಕ್ಕೂ ನೀಲಿ ತೋರಣಗಳ ಸ್ವಾಗತ ಮಾಲಿಕೆಗಳ ಮೂಲಕ ಭೀಮ ಘರ್ಜನೆಯ ಎತ್ತಿದ ಕೈಯ ಮುಷ್ಟಿಯಲಿ ಬಿಗಿದಿಟ್ಟ ಸ್ವಾಭಿಮಾನದ ಪ್ರತೀಕವಾದ ನೀಲಿ ಬಾವುಟಗಳ ಝೇಂಕಾರಗಳೊಂದಿಗೆ ಪದ್ಮಶ್ರೀ ಫಂಕ್ಷನ್ ಹಾಲ್ ವರೆಗೆ ಮೆರವಣಿಗೆ ನಡೆಯಿತು.

ಉದಯವಾಹಿನಿ ಚಿತ್ರ

ನೀಲಿ ಬಾವುಟಗಳ ಝೇಂಕಾರ

ದಿ.ತಿಪ್ಪಣ್ಣ ಆರತಿ ವೇದಿಕೆಯಲ್ಲಿ ಕಾರ್ಯಕ್ರಮವನ್ನು ತುಂಬಾ ಅರ್ಥ ಪೂರ್ಣವಾಗಿ ನಡೆಸಲಾಯಿತು.

ವೇದಿಕೆಯ ಬಲಭಾಗದ ಮುಂಭಾಗದಲ್ಲಿ ಬಿ ಆರ್ ಅಂಬೇಡ್ಕರ್ ಅವರ ಮತ್ತು ಡಾ.ಬಾಬು ಜಗಜೀವನ ಜಗಜೀವನ ರಾಮ್ ಅವರ ಭಾವಚಿತ್ರಗಳಿಗೆ ಕಾರ್ಯಕ್ರಮಕ್ಕೆ ಆಗಮಿಸಿದ ಪ್ರಗತಿಪರ ಚಿಂತಕರು, ಸಮಾಜದ ಮುಖಂಡರುಗಳು, ಜ್ಞಾನಿಗಳು, ವಾಗ್ಮಿಗಳು, ಭಾಷಣಕಾರರುಗಳು ಸಂಘಟನಾಕಾರರು ಹೂವಿನ ಮಳೆಗರೆದು ಧನ್ಯತಾ ಭಾವನೆ ಪಡೆದರು ನಂತರ ದೀನ ದಲಿತ ಬಡವರ ಬಾಳಲ್ಲಿ ಅಜ್ಞಾನ ತೊಲಗಿಸಿ ಸುಜ್ಞಾನದ ಬೆಳಕು ಪಸರಿಸಿದ ಮಹಾತ್ಮರ ನೆನೆದು ದೀಪ ಬೆಳಗಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ನಂತರ ಭೀಮೋತ್ಸವ ಕಾರ್ಯಕ್ರಮ ಕುರಿತು ವೀರೇಶ ವಕೀಲರು ಈಳಿಗನೂರು (ಸದಸ್ಯರು, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ದೌರ್ಜನ್ಯ ನಿಯಂತ್ರಣ ಹಾಗೂ ಮೇಲುಸ್ತುವಾರಿ ಉಪ ವಿಭಾಗ ಮಟ್ಟದ ಸಮಿತಿ, ಕೊಪ್ಪಳ ಜಿಲ್ಲೆ) ಇವರು ಮಾತನಾಡಿ

ಸಂವಿಧಾನದ ಮೂಲಕ ಮೀಸಲಾತಿಯನ್ನು ಪಡೆದು ಶಿಕ್ಷಣ ಪಡೆದಂತಹ ಪ್ರತಿಯೊಬ್ಬ ಯುವಕರು ಸಮಾಜದಲ್ಲಿ ಆಗುತ್ತಿರುವ ದೌರ್ಜನ್ಯದ ಬಳಕೆಗಳ ವಿರುದ್ಧ ಅಸ್ಪೃಶ್ಯತೆ ಮತ್ತು ಮೂಡನಂಬಿಕೆಗಳನ್ನು ವಿರುದ್ಧ ಜಾಗೃತಿ ಮೂಡಿಸದೆ ಇದ್ದರೆ ಅಂತಹ ವ್ಯಕ್ತಿ ಇದ್ದರೂ ಸತ್ತಂತೆ ಎಂದು ಬಿ.ಆರ್ ಅಂಬೇಡ್ಕರ್ ಅವರ ಮಾತುಗಳ ವಿವರಣೆ ನೀಡಿ ಮಾತನಾಡಿದ ಅವರು ಸಂವಿಧಾನದ ಮೀಸಲಾತಿಯಲ್ಲಿ ವಿದ್ಯೆ ಕಲಿತು, ನೌಕರಿ ಪಡೆದು, ಮತ್ತು ಗುತ್ತಿಗೆದಾರನಾಗಿ ಹಣಗಳಿಸಿ ಶ್ರೀಮಂತನಾದರೆ ಅದು ನಿಮ್ಮ ಮತ್ತು ನಿಮ್ಮ ಕುಟುಂಬಕ್ಕೆ ಸೀಮಿತವಾದರೆ ದಲಿತ ಸಮಾಜ ಅಭಿವೃದ್ಧಿಯತ್ತಾ ಸಾಗುವುದಿಲ್ಲ ಆದರೆ ಕಲಿತ ವಿದ್ಯೆ ಮತ್ತು ಜ್ಞಾನವನ್ನು ದಲಿತ ಸಮಾಜಕ್ಕೆ ಧಾರೆ ಎರೆದು ನಿಮ್ಮ ಜೊತೆ ಸಮಾಜವನ್ನು ಅಭಿವೃದ್ಧಿಪಡಿಸಿದಾಗ ಮಾತ್ರ ಅಂಬೇಡ್ಕರರ ಕನಸು ನನಸಾಗುತ್ತದೆ ಎಂದರು .

ನಾವು ದೇವಸ್ಥಾನ ಮುಂದೆ ಕ್ಯೂ ನಿಲ್ಲುವ ಬದಲು ಗ್ರಂಥಾಲಯದ ಮುಂದೆ ನಿಂತರೆ ದೇಶ ಅಭಿವೃದ್ಧಿಯಾಗುತ್ತೆ ಎನ್ನುವ ಬಾಬಾಸಾಹೇಬರ ಮಾತಿನಂತೆ ದಲಿತ ಜನಗಳಾದ ನಾವು ನಮ್ಮ ಮಕ್ಕಳನ್ನು ಕೂಲಿ ಕೆಲಸಕ್ಕೆ ಕಳುಹಿಸುವುದನ್ನು ನಿಲ್ಲಿಸಬೇಕು,ವಿದ್ಯಾವಂತರನ್ನಾಗಿ ಮಾಡಬೇಕು ಉತ್ತಮ ನಡತೆ ಕಲಿಸಿ ಸುಸಂಸ್ಕೃತರನ್ನಾಗಿ ಮಾಡಬೇಕೆಂದರು. ಇದೇ ಸಂದರ್ಭದಲ್ಲಿ ಏಕಲವ್ಯ ಗುರುಕುಲದ ಹಿರೇಮಠ ರವರ ಸೇವೆಯನ್ನು ಸ್ಮರಿಸಿ ಪ್ರತಿ ವರ್ಷ ಬಡ ಮಕ್ಕಳಿಗೆ ಉಚಿತ ಶಿಕ್ಷಣ ಮತ್ತು ವಸತಿ ನೀಡುತ್ತಿದ್ದಾರೆ. ತಮ್ಮ ಶಾಲೆಯ ಅಭಿವೃದ್ಧಿಯ ಜೊತೆಗೆ ಬಡ ಮಕ್ಕಳ ವಿದ್ಯಾಭ್ಯಾಸ ನೀಡುತ್ತಿರುವುದು ಪ್ರಶಂಸೆ ನಿಯ ಎಂದು ಅಭಿನಂದನೆ ಸಲ್ಲಿಸಿದರು -ವೀರೇಶ, ವಕೀಲರು ಈಳಿಗನೂರು

ಕಾರ್ಯಕ್ರಮದಲ್ಲಿ ವಿಶ್ವಜ್ಞಾನಿ, ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ 134ನೇ ಜಯಂತಿ ಹಾಗೂ ಡಾ. ಬಾಬು ಜಗಜೀವನ್ ರಾಮ್ ಅವರ 118ನೇ ಜಯಂತಿಯ ಅಂಗವಾಗಿ ಸಂವಿಧಾನ ಜಾಗೃತಿ ಮತ್ತು ಬಾಬಾ ಸಾಹೇಬರ ಚಿಂತನೆಗಳನ್ನು ಎಲ್ಲಾ ಯುವ ಜನತೆ ಹಾಗೂ ಎಲ್ಲಾ ಮಹಿಳೆಯರು ಅರ್ಥ ಮಾಡಿಕೊಂಡು ಬಾಬಾ ಸಾಹೇಬರು ತೋರಿಸಿದ ದಾರಿಯಲ್ಲಿ ನಡೆಯಬೇಕು -ಮರಿಸ್ವಾಮಿ
ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಜಿಲ್ಲಾಧ್ಯಕ್ಷ

ತಿರಂಗಾ ಯಾತ್ರೆಯಲ್ಲಿ ಪಕ್ಷಾತೀತ, ಜಾತ್ಯಾತೀತ, ಧರ್ಮಾತೀತವಾಗಿ ಭಾಗವಹಿಸಿ

• ಉದಯವಾಹಿನಿ ಮುದ್ದೇಬಿಹಾಳ

ಆಪರೇಷನ್ ಸಿಂಧೂರ ಕಾರ್ಯಾಚರಣೆ ಸ್ಮರಣೀಯವಾಗಿಸಲು, ದೇಶದ ಸೈನಿಕರ ಮನೋಬಲ ಹೆಚ್ಚಿಸಲು ಮೇ 20ರಂದು ಮುದ್ದೇಬಿಹಾಳದಲ್ಲಿ ಸಮಸ್ತ ನಾಗರಿಕರು, ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ದೇಶಕ್ಕಾಗಿ ಒಂದು ಹೆಜ್ಜೆ-ತಿರಂಗಾ ಯಾತ್ರೆ, ದೇಶಸೇವೆಯಲ್ಲಿರುವ ಹಾಗೂ ಯುದ್ಧ, ಭಯೋತ್ಪಾದಕ ದಾಳಿಗಳಲ್ಲಿ ಹುತಾತ್ಮರಾಗಿರುವ ಸೈನಿಕರ ಕುಟುಂಬದ ಒಬ್ಬ ಸದಸ್ಯರಿಗೆ ಸ್ಮರಣಿಕೆ ಸಹಿತ ಸನ್ಮಾನಿಸಿ ಗೌರವಿಸುವ ವಿನೂತನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ರೈತ ಮೋರ್ಚಾ ರಾಜ್ಯಾಧ್ಯಕ್ಷ, ಮಾಜಿ ಶಾಸಕ ಎ.ಎಸ್.ಪಾಟೀಲ ನಡಹಳ್ಳಿ ಹೇಳಿದರು. ಇಲ್ಲಿನ ನಡಹಳ್ಳಿ ಆರ್ಗ್ಯಾನಿಕ್ ಡೇರಿ ಪ್ಯೂರ್ ಪ್ರೊಡಕ್ಟ್‌ಸನ ಕಾರ್ಯಾಲಯ ಆವರಣದಲ್ಲಿ ರವಿವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ದೇಶದ ಗಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಸೈನಿಕರ ಹತ್ತಿರ ಹೋಗಿ ಅಭಿನಂದಿಸಲು ಆಗುವುದಿಲ್ಲ. ಅದರ ಬದಲು ಅವರ ಪತ್ನಿ, ತಾಯಿ, ತಂದೆ ಅಥವಾ ಕುಟುಂಬದ ಒಬ್ಬರನ್ನು ಸನ್ಮಾನಿಸಲು ತೀರ್ಮಾನಿಸಲಾಗಿದೆ ಎಂದರು.

ಈಗಾಗಲೇ 25-30 ಮಾಜಿ ಸೈನಿಕರು ಸೇವೆಯಲ್ಲಿರುವ ಮತ್ತು ಹುತಾತ್ಮರಾದ ಸೈನಿಕರ ವಿವರ, ಕುಟುಂಬದ ಮಾಹಿತಿ ಸಂಗ್ರಹಿಸಿ ಅವರನ್ನು ಸಂಪರ್ಕಿಸಿ ಆಹ್ವಾನಿಸಿದ್ದಾರೆ. 250 ಜನರನ್ನು ಸನ್ಮಾನಿಸುವ ಗುರಿ ಇದೆ. ಯಾರಾದರೂ ಬಿಟ್ಟು ಹೋಗಿದ್ದಲ್ಲಿ ಅಂದು ನೇರವಾಗಿ ಕಾರ್ಯಕ್ರಮಕ್ಕೆ ಆಗಮಿಸಿ ಸನ್ಮಾನ ಸ್ವೀಕರಿಸಬೇಕು ಎಂದರು.

ಸನ್ಮಾನಕ್ಕೂ ಮುನ್ನ ಹಳೇ ತಹಶೀಲ್ದಾರ್ ಕಚೇರಿ ಆವರಣದಲ್ಲಿರುವ ಕಾರ್ಗಿಲ್ ಹುತಾತ್ಮ ಯೋಧರ ಸ್ಮಾರಕ ಇರುವ ಸೈನಿಕ ಮೈದಾನದಿಂದ ಬಸವೇಶ್ವರ ವೃತ್ತ ಮಾರ್ಗವಾಗಿ ಅಂಬೇಡ್ಕರ್ ವೃತ್ತದವರೆಗೆ ತಿರಂಗಾ ಯಾತ್ರೆ ನಡೆಸಲಾಗುತ್ತದೆ. ಪ್ರತಿಯೊಬ್ಬರ ಕೈಯಲ್ಲಿ ರಾಷ್ಟ್ರಧ್ವಜ ಹೊರತು ಬೇರೆ ಯಾವ ಧ್ವಜವೂ ಇರುವುದಿಲ್ಲ.

ಹಿಂದೂ,ಮುಸ್ಲಿಂ, ಕ್ರಿಶ್ಚಿಯನ್, ಬೌದ್ಧ, ಜೈನ್ ಸೇರಿ ಎಲ್ಲಾ ಧರ್ಮಗಳ, ಜಾತಿಗಳ ಜನರು ಮುಕ್ತವಾಗಿ, ಸ್ವಯಂಪ್ರೇರಣೆಯಿಂದ ಪಾಲ್ಗೊಳ್ಳಬಹುದಾಗಿದೆ. ವೇದಿಕೆ ಮೇಲೆ ಗಣ್ಯರಾರೂ ಇರುವುದಿಲ್ಲ. ಎಲ್ಲರೂ ಮುಂಭಾಗದಲ್ಲೇ ಕುಳಿತುಕೊಳ್ಳುತ್ತಾರೆ. ವಿವಿಧ ರಂಗದಲ್ಲಿ ಕೆಲಸ ಮಾಡುವಂಥವ ಒಬ್ಬೊಬ್ಬರಿಗೆ 5 ನಿಮಿಷದಂತೆ 45 ನಿಮಿಷಗಳ ಕಾಲ ಮಾತನಾಡಲು ಅವಕಾಶ ಕಲ್ಪಿಸಲಾಗುತ್ತದೆ ಎಂದರು.

ಮಾಜಿ ಸೈನಿಕ ಸಂಗಣ್ಣ ಕಟ್ಟಿ, ಡಾ.ಚಂದ್ರಶೇಖರ ಶಿವಯೋಗಿಮಠ, ರಾವುಸಾಬ ದೇಸಾಯಿ ಮಾತನಾಡಿ ಪೂರ್ವಸಿದ್ದತೆಗಳ ಮಾಹಿತಿ ನೀಡಿದರು.

ಮಂಡಲ ಅಧ್ಯಕ್ಷ ಜಗದೀಶ ಪಂಪಣ್ಣವರ್, ಪುರಸಭೆ ಸದಸ್ಯರಾದ ಚನ್ನಪ್ಪ ಕಂಠಿ, ಬಸವರಾಜ ಮುರಾಳ, ಬಸಪ್ಪ ತಟ್ಟಿ, ಜಿಪಂ ಮಾಜಿ ಉಪಾಧ್ಯಕ್ಷ ಕೆಂಚಪ್ಪ ಬಿರಾದಾರ, ಮುಖಂಡರಾದ ಗಿರೀಶಗೌಡ ಪಾಟೀಲ ಹಿರೇಮುರಾಳ, ಪ್ರಭು ಕಡಿ, ಸಿದ್ದರಾಜ ಹೊಳಿ, ಹಣಮಂತ ನಾಯ್ಕಮಕ್ಕಳ, ಲಕ್ಷ್ಮಣ ಬಿಜ್ಜೂರ, ಶಂಕರಗೌಡ ಶಿವಣಗಿ, ಸೋಮಶೇಖರ ಮೇಟಿ, ಡಾ.ರೇವಣಸಿದ್ದ ಮಸೂತಿ, ಡಾ.ವೀರೇಶ ಪಾಟೀಲ, ವಿಜಯಕುಮಾರ ಬಡಿಗೇರ, ಸೋಮನಗೌಡ ಬಿರಾದಾರ, ಎಂ.ಆರ್. ಪಾಟೀಲ ವಕೀಲರು, ರಾಜು ಬಳ್ಳೊಳ್ಳಿ, ಬಸವರಾಜ ಸರೂರ, ಶೇಖರ ಢವಳಗಿ, ಸಂಗಮೇಶ ಗುಂಡಕನಾಳ, ಪುನೀತ್ ಹಿಪ್ಪರಗಿ, ರಾಜಶೇಖರ ಮ್ಯಾಗೇರಿ, ಗೌರಮ್ಮ ಹುನಗುಂದ, ರೇಖಾ ಕೊಂಡಗೂಳಿ, ಕಾವೇರಿ ಕಂಬಾರ, ನಾಗೇಶ ಕವಡಿಮಟ್ಟಿ ಇತರರು ಇದ್ದರು.

ಉದಯವಾಹಿನಿ ಚಿತ್ರ

ಮೇ 20ರಂದು ತಿರಂಗಾ ಯಾತ್ರೆ

ಒಂದು ಗಂಟೆ ನಡೆಯುವ ತಿರಂಗಾ ಯಾತ್ರೆಯಲ್ಲಿ ಪಕ್ಷಾತೀತ, ಜಾತ್ಯಾತೀತ, ಧರ್ಮಾತೀತವಾಗಿ ಎಲ್ಲರೂ ಭಾಗವಹಿಸಿ ಒಗ್ಗಟ್ಟು ತೋರಿಸಿ ದೇಶದ ಪರ ನಾವಿದ್ದೇವೆ ಅನ್ನೋ ಸಂದೇಶವನ್ನು ರವಾನಿಸಬೇಕು.
-ಎ.ಎಸ್.ಪಾಟೀಲ ನಡಹಳ್ಳಿ, ರಾಜ್ಯಾಧ್ಯಕ್ಷರು, ಬಿಜೆಪಿ ರೈತ ಮೋರ್ಚಾ.

ಆಪರೇಷನ್ ಸಿಂಧೂರ ಬಗ್ಗೆ ಅಪಪ್ರಚಾರ ಸಲ್ಲದು: ಭಗವಂತ ಖೂಬಾ

• ಉದಯವಾಹಿನಿ ಬೀದರ

ಪಹೆಲ್ಗಾಮ್ ದಾಳಿಯ ಪ್ರತಿಕಾರವಾಗಿ ನಮ್ಮ ಸೈನಿಕರು ಪಾಕಿಸ್ಥಾನಕ್ಕೆ ಮುಟ್ಟಿನೋಡಿಕೊಳ್ಳುವಂತೆ ತಿರುಗೇಟು ನೀಡಿದೆ, ನಮ್ಮ ಸೈನಿಕರ ಶೌರ್ಯ, ಬುದ್ಧಿವಂತಿಕೆಗೆ ಇಡಿ ವಿಶ್ವವೇ ಅಭಿನಂದಿಸುತ್ತಿದೆ ಆದರೆ ರಾಜ್ಯದ ಕಾಂಗ್ರೇಸ್ ಪಕ್ಷದ ಸಚಿವರು, ಶಾಸಕರು, ಆಪರೇಷನ್ ಸಿಂಧೂರ ಕುರಿತಾಗಿ ಮನಸ್ಸಿಗೆ ಬಂದಂತೆ ಹೇಳಿಕೆ ನೀಡಿ, ಅಪಪ್ರಚಾರ ಮಾಡುವುದು, ದೇಶದ ಸೈನಿಕರಿಗೆ ಅವಮಾನಿಸುತ್ತಿರುವುದು ಸರಿಯಲ್ಲಾ, ಇದು ಕಾಂಗ್ರೇಸ್ ಪಕ್ಷದ ಆತಂಕವಾದಿಗಳ ಪರವಾದ ಮನಸ್ಥಿತಿ ತೋರಿಸುತ್ತಿದೆ ಎಂದು ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ ಆಕ್ರೋಷ ವ್ಯಕ್ತಪಡಿಸಿದ್ದಾರೆ.

2014ಕ್ಕಿಂತ ಮುಂಚೆ ಅಧಿಕಾರದಲ್ಲಿದ್ದ ಕಾಂಗ್ರೇಸ್ ಪಕ್ಷಕ್ಕೆ ಪಾಕಿಸ್ಥಾನದ ಮೇಲೆ , ಆತಂಕವಾದಿಗಳ ಮೇಲೆ ಪ್ರತಿಕಾರ ತಿರಿಸಿಕೊಳ್ಳಲು ಆಗ್ತಿರಲಿಲ್ಲಾ, ನಮ್ಮ ಸೈನ್ಯದ ಕೈ ಕಟ್ಟಿ ಹಾಕಿದ್ದರು.

ಇವರ ಅಧಿಕಾರದಲ್ಲಿ ಸಾವಿರಾರು ಸೈನಿಕರ, ಅಮಾಯಕರ ಜೀವಗಳು ಹೊಗಿವೆ, ಆದರೆ ಇವಾಗ ಪಾಕಿಸ್ಥಾನದ ಒಂದು ಗುಂಡಿಗೆ ನಮ್ಮಿಂದ ಹತ್ತು ಗುಂಡುಗಳು ಹಾರುತ್ತವೆ, ಇದು ಬದಲಾದ ಭಾರತವಾಗಿದೆ, ಇಡಿ ವಿಶ್ವಕ್ಕೆ ಭಾರತದ ಶಕ್ತಿಯ ಅರಿವಾಗಿದೆ ಆದರೆ ನಮ್ಮಲ್ಲಿಯ ಕಾಂಗ್ರೇಸ್ ಪಕ್ಷದವರಿಗೆ ಅರ್ಥವಾಗದಿರುವುದು ಬೇಸರದ ಸಂಗತಿಯಾಗಿದೆ ಎಂದಿದ್ದಾರೆ.

ಕಾಂಗ್ರೇಸ್ ಪಕ್ಷಕ್ಕೆ ಯಾವಾಗಲೂ ಪಾಕಿಸ್ಥಾನಿಯರ ಮೇಲೆ ಹೆಚ್ಚು ಪ್ರೀತಿ ಆದ್ದರಿಂದ ನಮ್ಮ ಸೈನ್ಯದ ಮ

ದಿನ ಭವಿಷ್ಯ

ರಾಹುಕಾಲ	ಬೆಳಿಗ್ಗೆ	07:30 ರಿಂದ 09:00
ಗುಳಿಕ ಕಾಲ	ಮಧ್ಯಾಹ್ನ	01:30 ರಿಂದ 03:00
ಯಮಗಂಡ ಕಾಲ	ಬೆಳಿಗ್ಗೆ	10:30 ರಿಂದ 12:00

ಮೇಷ ಡೈರಿ ಉದ್ಯಮಕ್ಕೆ ಸೇರಿರುವವರು ಇಂದು ಆರ್ಥಿಕ ಲಾಭವನ್ನು ಪಡೆಯುವ ಪ್ರಬಲ ಸಾಧ್ಯತೆ ಇದೆ. ಕುಟುಂಬದ ಸದಸ್ಯರೊಂದಿಗೆ ಒಂದು ಶಾಂತಿಯುತ ಮತ್ತು ಶಾಂತ ದಿನವನ್ನು ಆನಂದಿಸಿ.

ವೃಷಭ ಸೃಜನಶೀಲ ಆಸಕ್ತಿಗಳು ನಿಮ್ಮನ್ನು ಶಾಂತವಾಗಿರಿಸುತ್ತವೆ. ನೀವು ಇಂದು ಗಣನೀಯ ಪ್ರಮಾಣದ ಹಣವನ್ನು ಸಹ ಹೊಂದಿರುತ್ತೀರಿ ಮತ್ತು ಅದರೊಂದಿಗೆ ಮನಸ್ಸಿನ ಶಾಂತಿ ಇರುತ್ತದೆ.

ಮಿಥುನ ನೀವು ಕೆಲವು ಉನ್ನತ ವ್ಯಕ್ತಿಗಳನ್ನು ಭೇಟಿಯಾಗಬಹುದಾದ್ದರಿಂದ ಗಾಬರಿಯಾಗಬೇಡಿ ಮತ್ತು ವಿಶ್ವಾಸ ಕಳೆದುಕೊಳ್ಳದಿರಿ. ಇದು ವ್ಯಾಪಾರಕ್ಕೆ ಬಂಡವಾಳದಂತೆ ಉತ್ತಮ ಆರೋಗ್ಯಕ್ಕೆ ಅಗತ್ಯವಾಗಿದೆ.

ಕರ್ಕಾಟಕ ನಿಮ್ಮ ಕಚೇರಿಯನ್ನು ಬೇಗನೆ ಬಿಡಲು ಮತ್ತು ನೀವು ನಿಜವಾಗಿಯೂ ಆನಂದಿಸುವದನ್ನು ಮಾಡಲು ಪ್ರಯತ್ನಿಸಿ. ನೀವು ಒಳ್ಳೆಯ ಹಣ ಮಾಡುತ್ತೀರಿ – ಆದರೆ ಅದು ನಿಮ್ಮ ಕೈಯಿಂದ ಜಾರಿಹೋಗದಿರಲು ಪ್ರಯತ್ನಿಸಿ.

ಸಿಂಹ ಕೆಲಸದ ನಡುವೆ ವಿಶ್ರಾಂತಿ ಪಡೆಯಲು ಪ್ರಯತ್ನಿಸಿ ಮತ್ತು ತಡರಾತ್ರಿ ಕೆಲಸ ಮಾಡುವುದನ್ನು ತಪ್ಪಿಸಿ. ರಿಯಲ್ ಎಸ್ಟೇಟ್ ಮತ್ತು ಆರ್ಥಿಕ ವ್ಯವಹಾರಗಳಿಗೆ ಒಳ್ಳೆಯ ದಿನ.

ಕನ್ಯಾ ಇಂದು, ನಿಮ್ಮ ಆರೋಗ್ಯವು ಆರೋಗ್ಯಕರವಾಗಿರುತ್ತದೆ ಎಂದು ನಿರೀಕ್ಷಿಸಲಾಗಿದೆ. ಹಣದ ಚಲನೆ ದಿನವಿಡೀ ಮುಂದುವರಿಯುತ್ತದೆ ಮತ್ತು ದಿನದ ಅಂತ್ಯದ ನಂತರ ನೀವು ಉಳಿಸಲು ಸಾಧ್ಯವಾಗುತ್ತದೆ.

ತುಲಾ ಕೆಲಸದ ಒತ್ತಡ ಇಂದು ಸ್ವಲ್ಪ ಒತ್ತಡ ತರಬಹುದು. ಸಮಯ ಮತ್ತು ಹಣದ ಕಾತರ ನೀವು ಮಾಡಬೇಕು ಇಲ್ಲದಿದ್ದರೆ ಮುಂಬರುವ ಸಮಯ ತೊಂದರೆಗಳಿಂದ ತುಂಬಿರಬಹುದು.

ವೃಶ್ಚಿಕ ಪ್ರಕೃತಿಯು ನಿಮ್ಮಲ್ಲಿ ಗಮನಾರ್ಹ ವಿಶ್ವಾಸ ಮತ್ತು ಬುದ್ಧಿವಂತಿಕೆಯನ್ನಿರಿಸಿದೆ – ಅದನ್ನು ಸಾಧ್ಯವಾದಷ್ಟೂ ಬಳಸಿಕೊಳ್ಳಿ. ಇಂದು ಸಾಲಗಾರನು ನಿಮ್ಮ ಮನೆ ಬಾಗಿಲಿಗೆ ಬರಬಹುದು.

ಧನಸ್ಸು ಇಂದಿನ ದಿನ ಯಾರಿಗೂ ಸಾಲ ನೀಡಬೇಡಿ ಮತ್ತು ಕೊಡುವುದು ಅಗತ್ಯವಾಗಿದ್ದರೆ ಕೊಡುವವರಿಂದ ಅವರು ಯಾವಾಗ ಹಣವನ್ನು ಮರುಪಾವತಿ ಮಾಡುತ್ತಾರೆಂದು ಬರವಣಿಗೆಯಲ್ಲಿ ತೆಗೆದುಕೊಳ್ಳಿ.

ಮಕರ ಮನರಂಜನೆ ಮತ್ತು ಮೋಜಿನ ಒಂದು ದಿನ. ನಿಮ್ಮ ಸಮರ್ಪಣೆ ಮತ್ತು ಶ್ರಮವನ್ನು ಗಮನಿಸಲಾಗುತ್ತದೆ ಮತ್ತು ಇಂದು ನಿಮಗೆ ಸ್ವಲ್ಪ ಆರ್ಥಿಕ ಪ್ರತಿಫಲಗಳನ್ನು ತರುತ್ತದೆ.

ಕುಂಭ ಆರೋಗ್ಯ ದೃಷ್ಟಿಯಿಂದ ಉತ್ತಮವಾದ ದಿನ. ನಿಮ್ಮ ಹರ್ಷಚಿತ್ತದ ಮನಸ್ಸು ರಾಜ್ಯದ ನೀವು ಬಯಸಿದ ಟಾನಿಕ್ ನೀಡುತ್ತದೆ ಮತ್ತು ನಿಮಗೆ ಆತ್ಮವಿಶ್ವಾಸ ತರುತ್ತದೆ. ಇಂದು ಹಣಕಾಸಿನ ಭಾಗವು ಉತ್ತಮವಾಗಿರುತ್ತದೆ.

ಮೀನ ಸ್ನೇಹಿತರು ಇಂದು ರಾತ್ರಿ ರೋಮಾಂಚಕವಾದದ್ದನ್ನೇನಾದರೂ ಯೋಜಿಸಿ ನಿಮಗೆ ಆನಂದ ತರುತ್ತಾರೆ. ನಿಮ್ಮ ಸಂಗಾತಿಯ ಪ್ರೀತಿ ನಿಜವಾಗಿಯೂ ಭಾವಪೂರ್ಣವಾಗಿದೆ ಎಂದು ಇಂದು ನೀವು ತಿಳಿದುಕೊಳ್ಳುತ್ತೀರಿ.

ಹೆಚ್ಚಿನ ದರ ಮತ್ತು ನಕಲಿ ಬೀಜ ಮಾರಾಟ ಕಂಡು ಬಂದಲ್ಲಿ ಅಂಗಡಿ ಲೈಸೆನ್ಸ್ ರದ್ದು

• ಉದಯವಾಹಿನಿ ವಡಗೇರಾ

ಕೃಷಿ ಇಲಾಖೆಯಿಂದ ಅಧಿಕೃತವಾಗಿ ಪರವಾನಿಗೆ ಪಡೆದ ಮಾರಾಟಗಾರ ಹತ್ತಿರವೇ ಬಿತ್ತನೆ ಬೀಜ ರಸಗೊಬ್ಬರ ಸೇರಿದಂತೆ ಇತರೆ ವಸ್ತುಗಳನ್ನು ಖರೀದಿಸಬೇಕು ಎಂದು ರೈತರಿಗೆ ತಾಲ್ಲೂಕಿನ ಹೈಯ್ಯಾಳ ಬಿ. ಹೋಬಳಿ ಕೃಷಿ ಅಧಿಕಾರಿ ನಾಗರಾಜ ಹೇಳಿದರು. ತಾಲ್ಲೂಕಿನ ಹೈಯ್ಯಾಳ ಹೋಬಳಿಯ ಗುಂಡಗುರ್ತಿ ಮತ್ತು ಇತರೆ ಕೃಷಿ ಪರಿಕರ ಮತ್ತು ಬೀಜ ರಸಗೊಬ್ಬರ ಮಾರಾಟ ಮಳಿಗೆಗಳಿಗೆ ಭೇಟಿ ನೀಡಿ ದಾಸ್ತಾನು ಮತ್ತು ಇತರೆ ಮಾಹಿತಿ ಪರಿಶೀಲಿಸಿ ಮಾತನಾಡಿದ ಅವರು ರೈತರು ತಾವು ಖರೀದಿಸಿದ ಬೀಜ ಗೊಬ್ಬರ ಇತರೆ ವಸ್ತುಗಳ ರಶೀದಿಯನ್ನು ಕಡ್ಡಾಯವಾಗಿ ಪಡೆಯಬೇಕು ಕಳಪೆ ಬೀಜ ಬಿತ್ತನೆಗಳಿಂದ ರೈತರಿಗೆ ತುಂಬಾ ನಷ್ಟವಾಗುತ್ತಿದ್ದು ಆದ್ದರಿಂದ ಮಾರಾಟಗಾರರು ಯಾವುದೇ ಕಾರಣಕ್ಕೂ ನಕಲಿ ಬೀಜ ಗೊಬ್ಬರಗಳನ್ನು ಮಾರಾಟ ಮಾಡಬಾರದು ರೈತರು ಎಲ್ಲೆಂದರಲ್ಲಿ

ಉದಯವಾಹಿನಿ ಚಿತ್ರ

ಕಳಪೆ ಬೀಜ ಗೊಬ್ಬರಗಳನ್ನು ತೆಗೆದುಕೊಳ್ಳಬಾರದು ಅಂಗಡಿಯ ಮಾಲೀಕರು ಕೂಡಾ ಎಂಆರ್ ಪಿ ದರದಲ್ಲಿಯೇ ಮಾರಾಟ ಮಾಡಬೇಕು ಒಂದು ವೇಳೆ ಹೆಚ್ಚಿನ ದರಕ್ಕೆ ಮಾರಾಟ ಮಾಡಿದ್ದು ಗಮನಕ್ಕೆ ಬಂದಲ್ಲಿ ಅಂತ ಅಂಗಡಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಂಡು ಅಂಗಡಿ ಲೈಸೆನ್ಸ್ ರದ್ದುಪಡಿಸುವುದಾಗಿ ಹೋಬಳಿ ಕೃಷಿ ಅಧಿಕಾರಿ ನಾಗರಾಜ ತಿಳಿಸಿದ್ದಾರೆ

• ಕೊಳೆತ ಮೊಟ್ಟೆ, ಕಳಪೆ ಅಡುಗೆ ಎಣ್ಣೆ ವಿತರಣೆ– ದೂರು: ಜಿಲ್ಲಾ ಮಟ್ಟದಲ್ಲೇ ಟೆಂಡರ್ ನೀಡಲು ಆಗ್ರಹ

ಪೌಷ್ಟಿಕ ಆಹಾರ ವಿತರಣೆಯಲ್ಲೂ ಕೊರಗರ ನಿರ್ಲಕ್ಷ್ಯ

• ಉದಯವಾಹಿನಿ ಉಡುಪಿ

ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆಲಸಿರುವ ತೀರಾ ಹಿಂದುಳಿದ. ಆದಿವಾಸಿ ಕೊರಗ ಸಮುದಾಯದವರಿಗೆ ಪೌಷ್ಟಿಕ ಆಹಾರ ವಿತರಣೆಯಲ್ಲೂ ನಿರ್ಲಕ್ಷ್ಯ ತೋರಲಾಗಿದೆ ಎಂದು ಈ ಸಮುದಾಯದ ಕೆಲವರು ಅಳಲು ತೋಡಿಕೊಂಡಿದ್ದಾರೆ. ಈ ಸಮುದಾಯದ ಹಲವರು ರಕ್ತ ಹೀನತೆ, ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಇದನ್ನು ಮನಗಂಡ ಸರ್ಕಾರವು ಕೊರಗ ಕುಟುಂಬಗಳಿಗೆ ಪೌಷ್ಟಿಕ ಆಹಾರ ವಿತರಿಸುತ್ತಿದೆ. ಆರೋಗ್ಯ ಸುಧಾರಣೆಯ ಉದ್ದೇಶದಿಂದ ಅವರಿಗೆ ಮೊಟ್ಟೆ, ತುಪ್ಪ, ಎಣ್ಣೆ, ತೊಗರಿ ಬೇಳೆ, ಸಕ್ಕರೆ, ಬೆಲ್ಲ, ಹೆಸರು ಕಾಳು, ಅಕ್ಕಿ ಮೊದಲಾದ ಆಹಾರ ಪದಾರ್ಥಗಳನ್ನು ವಿತರಿಸಲಾಗುತ್ತಿದೆ. ಆದರೆ ಈಚೆಗೆ ಪೂರೈಸುತ್ತಿರುವ ಪೌಷ್ಟಿಕ ಆಹಾರವು ಅತ್ಯಂತ ಕಳಪೆ ಮಟ್ಟದ್ದಾಗಿದೆ ಎಂಬುದು ಆ ಸಮುದಾಯದವರ ಆರೋಪ.

ಕಳಪೆ ಮಟ್ಟದ ಆಹಾರ ಪದಾರ್ಥ ವಿತರಿಸಿದ ಬಗ್ಗೆ ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ ಎಂದು ಕೊರಗ ಸಮುದಾಯದ ಮುಖಂಡರು ದೂರಿದ್ದಾರೆ. 'ಆಹಾರ ಪದಾರ್ಥಗಳನ್ನು ಪ್ರತಿ ತಿಂಗಳು ವಿತರಿಸುತ್ತಿಲ್ಲ, ಎರಡು, ಮೂರು ತಿಂಗಳ ಆಹಾರವನ್ನು ಒಟ್ಟಿಗೆ ವಿತರಿಸಲಾಗುತ್ತದೆ. ಹಲವು ಕುಟುಂಬಗಳಿಗೆ ಈಚೆಗೆ ವಿತರಿಸಿದ ಮೊಟ್ಟೆಗಳು ಕೆಟ್ಟುಹೋಗಿದ್ದವು. ಸೂರ್ಯಕಾಂತಿ ಎಣ್ಣೆ ಕೂಡ ಕಳಪೆ ಮಟ್ಟದ್ದಾಗಿತ್ತು. ಕಡಲೆ ಕಾಳು ಬಿಳಿ ಬಣ್ಣಕ್ಕೆ ತಿರುಗಿತ್ತು' ಎಂದು ಕೊರಗ ಅಭಿವೃದ್ಧಿ ಸಂಘಗಳ ಒಕ್ಕೂಟ ಕರ್ನಾಟಕ ಕೇರಳದ ಸಂಯೋಜಕ ಕೆ.ಪುತ್ರನ್ ತಿಳಿಸಿದರು.

'ಕೊರಗ ಸಮುದಾಯದ ಹಲವರು ಈಗಲೂ ಹಲವು ರೋಗಗಳಿಂದ ಬಳಲುತ್ತಿದ್ದಾರೆ. ಹಿಂದೆ ನಾವು ನಡೆಸಿದ ಹೋರಾಟದ ಫಲವಾಗಿ ರಾಜ್ಯ ಸರ್ಕಾರವು ನಮಗೆ ಪೌಷ್ಟಿಕ ಆಹಾರ ನೀಡಲು ಆರಂಭಿಸಿತ್ತು. ಈಗ ಕಳಪೆ ಮಟ್ಟದ ಆಹಾರ ಪೂರೈಸುವ ಮೂಲಕ ನಮಗೆ ಮತ್ತೆ ಅನ್ಯಾಯ ಮಾಡಲಾಗುತ್ತಿದೆ' ಎಂದೂ ಅವರು ಹೇಳಿದರು. 'ಕಳಪೆ ಮಟ್ಟದ ಆಹಾರ ಪೂರೈಸಿದವರನ್ನು ಕಪ್ಪುಪಟ್ಟಿಗೆ ಸೇರಿಸಬೇಕು. ಮುಂದೆ ಈ ರೀತಿ ನಡೆಯದಂತೆ ಸರ್ಕಾರ ಎಚ್ಚರ ವಹಿಸಬೇಕು. ಹಿಂದೆ ನಮಗೆ ಆಹಾರದ ಕಿಟ್‌ನಲ್ಲಿ ಬೆಲ್ಲ ನೀಡಲಾಗುತ್ತಿತ್ತು. ಈಗ ಅದನ್ನು ನಿಲ್ಲಿಸಿ, ಸಕ್ಕರೆ ವಿತರಿಸಲಾಗುತ್ತಿದೆ. ನಮಗೆ ಸಕ್ಕರೆ ಬೇಡ, ಬೆಲ್ಲವನ್ನೇ ವಿತರಿಸಬೇಕು' ಎಂದೂ ಅವರು ಆಗ್ರಹಿಸಿದರು.

ಕೆ.ಪುತ್ರನ್ ಸಂಯೋಜಕ ಕೊರಗ ಅಭಿವೃದ್ಧಿ ಸಂಘಗಳ ಒಕ್ಕೂಟ ಕರ್ನಾಟಕ ಕೇರಳ.

ಉದಯವಾಹಿನಿ ಚಿತ್ರ

ಕೊರಗ ಸಮುದಾಯದವರಿಗೆ ಕಳಪೆ ಆಹಾರ ಪೂರೈಸಿರುವ ದೂರುಗಳು ಬಂದಿದ್ದು ಇದನ್ನು ಸರ್ಕಾರದ ಗಮನಕ್ಕೆ ತರಲಾಗಿದೆ. ಕಳಪೆ ಆಹಾರ ಪದಾರ್ಥ ಪೂರೈಸಿದವರಿಗೆ ನೋಟಿಸ್ ಜಾರಿ ಮಾಡಲಾಗಿದೆ
–ಕೆ.ವಿದ್ಯಾಕುಮಾರಿ, ಜಿಲ್ಲಾಧಿಕಾರಿ

ಕೊರಗ ಸಮುದಾಯದವರಿಗೆ ಪೌಷ್ಟಿಕ ಆಹಾರ ವಿತರಿಸಲು ರಾಜ್ಯಮಟ್ಟದಲ್ಲಿ ಟೆಂಡರ್ ನೀಡಿರುವುದನ್ನು ರದ್ದುಪಡಿಸಿ ಜಿಲ್ಲಾ ಮಟ್ಟದಲ್ಲಿ ಟೆಂಡರ್ ನೀಡಬೇಕು
–ಕೆ.ಪುತ್ರನ್, ಸಂಯೋಜಕ ಕೊರಗ ಅಭಿವೃದ್ಧಿ ಸಂಘಗಳ ಒಕ್ಕೂಟ ಕರ್ನಾಟಕ-ಕೇರಳ

ಶೇ 70ರಷ್ಟು ಮಂದಿಗೆ ಅಪೌಷ್ಟಿಕತೆ

'ಕೊರಗರು ರಾಜ್ಯದ ದಕ್ಷಿಣ ಕನ್ನಡ ಉಡುಪಿ ಜಿಲ್ಲೆಗಳಲ್ಲಿ ಹಾಗೂ ಕೇರಳದ ಕಾಸರಗೋಡು ಜಿಲ್ಲೆಯಲ್ಲಿ ನೆಲಸಿದ್ದಾರೆ. ಈ ಸಮುದಾಯದ ಜನಸಂಖ್ಯೆ ಅಂದಾಜು 16 ಸಾವಿರದಷ್ಟಿದೆ. ಇವರಲ್ಲಿ ಶೇ 70ರಷ್ಟು ಮಂದಿ ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಹಲವು ಕುಟುಂಬಗಳಿಗೆ ಸರ್ಕಾರದ ಸವಲತ್ತುಗಳು ಪೂರ್ಣ ಪ್ರಮಾಣದಲ್ಲಿ ತಲುಪಿಯೇ ಇಲ್ಲ' ಎಂದು ಕೆ.ಪುತ್ರನ್ ತಿಳಿಸಿದರು.

ರಾಜ್ಯ ಮಟ್ಟದಲ್ಲಿ ಟೆಂಡರ್ ಪಡೆದವರ ವಿಳಾಸವೇ ನಮಗೆ ಗೊತ್ತಿಲ್ಲ. ಆಹಾರ ಪದಾರ್ಥಗಳನ್ನು ಎಷ್ಟೋ ತಿಂಗಳು ಸಂಗ್ರಹಿಸಿಟ್ಟು ಕೆಟ್ಟುಹೋದ ಆಹಾರ ಪದಾರ್ಥಗಳನ್ನು ವಿತರಿಸಲಾಗುತ್ತಿದೆ
–ಸುಶೀಲಾ, ನಾಡ ಕೊರಗ ಅಭಿವೃದ್ಧಿ ಸಂಘಗಳ ಒಕ್ಕೂಟದ ಅಧ್ಯಕ್ಷೆ

ಹೆಚ್ ಡಿ ದೇವೇಗೌಡ ಜನ್ಮದಿನಾಚರಣೆ ಆಚರಣೆ

• ಉದಯವಾಹಿನಿ ಹುಣಸಗಿ

ಮಾಜಿ ಪ್ರಧಾನಮಂತ್ರಿ ಜೆಡಿಎಸ್ ವರಿಷ್ಠ, ಎಚ್. ಡಿ.ದೇವೇಗೌಡರ ಹುಟ್ಟುಹಬ್ಬವನ್ನು ಹುಣಸಗಿ ತಾಲ್ಲೂಕು ಜೆಡಿಎಸ್ ಪಕ್ಷದ ವತಿಯಿಂದ ಸರಳವಾಗಿ ಆಚರಣೆ ಮಾಡಲಾಯಿತು.

ರವಿವಾರ ಹುಣಸಗಿ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ರೋಗಿಗಳಿಗೆ ಜೆಡಿಎಸ್ ಮಹಿಳಾ ಘಟಕದ ತಾಲ್ಲೂಕು ಅಧ್ಯಕ್ಷೆ ಕು. ಶಶಿಕಲಾ ಎನ್ ಬಿರಾದಾರ ನೇತೃತ್ವದಲ್ಲಿ ಹಣ್ಣು ಹಂಪಲು, ಬ್ರೆಡ್ ವಿತರಿಸುವ ಮೂಲಕ ಮಾಜಿ ಪ್ರಧಾನಿ ಹೆಚ್ ಡಿ ದೇವೇಗೌಡ ಅವರ ಹುಟ್ಟುಹಬ್ಬವನ್ನು ಆಚರಿಸಲಾಯಿತು.

ತಾಲ್ಲೂಕು ಮಹಿಳಾ ಘಟಕದ ಅಧ್ಯಕ್ಷೇ ಕು ಶಶಿಕಲಾ ಎನ್ ಬಿರಾದಾರ ಮಾತನಾಡಿ, ಹೆಚ್ ಡಿ ದೇವೇಗೌಡರು ಭಾರತ ದೇಶದ ಮುತ್ಸದಿ ರಾಜಕಾರಣಿಗಳಲ್ಲಿ ಒಬ್ಬರು, ಪ್ರಧಾನಿ ಹುದ್ದೆಯನ್ನು ಅಲಂಕರಿಸಿದ ಮೊದಲ ಕನ್ನಡಿಗ, ರೈತರು, ಬಡವರ ಬದುಕು ಹಸನುಗೊಳಿಸಲು ಅವರು ನೀಡಿದ ಕೊಡುಗೆಗಳು ಅನನ್ಯವಾಗಿವೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ಕು ಶಶಿಕಲಾ ಎನ್ ಬಿರಾದಾರ. ಜೆಡಿಎಸ್ ರಾಜ್ಯ ಎಸ್ ಟಿ ವಿಭಾಗದ ಕಾರ್ಯದರ್ಶಿ, ದೇವೀಂದ್ರಪ್ಪ ಬಳಿಚಕ್ರ. ಜೆಡಿಎಸ್ ಯುವ ಮುಖಂಡ ಕುಮಾರಗೌಡ ಬಿರಾದಾರ. ಜೆಡಿಎಸ್ ರೈತ ಘಟಕದ ಅಧ್ಯಕ್ಷ ದೇವೀಂದ್ರಪ್ಪ ಕಾಮನಟಗಿ ಸೇರಿದಂತೆ ಆಸ್ಪತ್ರೆ ಸಿಬ್ಬಂದಿ ಪ್ರಮೋದ ಇದ್ದರು.


ಉದಯವಾಹಿನಿ ಚಿತ್ರ

ಸಮಯ ಮತ್ತು ಯೌವ್ವನ ಎಂದೂ ಮರಳಿ ಬರುವುದಿಲ್ಲ

• ಉದಯವಾಹಿನಿ ಜೇವರ್ಗಿ

ವಿದ್ಯಾರ್ಥಿಗಳು ನಿರಂತರ ಅಧ್ಯಯನದಲ್ಲಿ ನಿರತರಾಗಬೇಕು. ಓದು ಬರಹದ ಜೊತೆಗೆ ಪ್ರಶ್ನಿಸುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು. ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು. ಜೀವನದಲ್ಲಿ ಸಮಯ ಮತ್ತು ಯೌವ್ವನ ಎಂದೂ ಮರಳಿ ಬರುವುದಿಲ್ಲ. ಅವೆರಡಕ್ಕೂ ಮಹತ್ವ ನೀಡಬೇಕು ಎಂದು ಸೇಡಂ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಹಾಗೂ ಗುಲ್ಬರ್ಗ ವಿಶ್ವವಿದ್ಯಾಲಯದ ಪದವಿ ಕಾಲೇಜುಗಳ ಕನ್ನಡ ಅಧ್ಯಾಪಕರ ಸಂಘದ ಉಪಾಧ್ಯಕ್ಷ ಡಾ. ಪಂಡಿತ್ ಬಿ.ಕೆ ಅಭಿಪ್ರಾಯಪಟ್ಟರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 2024 – 25 ನೇ ಸಾಲಿನ ವಿವಿಧ ಸಮಿತಿಗಳ ಪಠ್ಯೇತರ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಅವರು, ಡಾ. ಬಿ.ಆರ್ ಅಂಬೇಡ್ಕರ್ ರವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಉದಯವಾಹಿನಿ ಚಿತ್ರ

, ವಿದ್ಯಾರ್ಥಿಗಳು ಕೇವಲ ಅಂಕವೀರರಾಗದೇ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕು. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಮತ್ತು ಪ್ರತಿಭೆಯ ಅನಾವರಣಕ್ಕೆ ಕಾಲೇಜಿನಲ್ಲಿರುವ ವಿವಿಧ ಸಮಿತಿಗಳು ಪೂರಕವಾಗಿ ಕಾರ್ಯನಿರ್ವಹಿಸುತ್ತವೆ. ವಿದ್ಯಾರ್ಥಿಗಳು ಬದುಕಿನಲ್ಲಿ ಉತ್ತಮ ಮೌಲ್ಯಗಳನ್ನು ರೂಢಿಸಿಕೊಳ್ಳಬೇಕೆಂದು
–ಡಾ. ಖಾಜಾವಲಿ ಈಚನಾಳ, ಸಾಂಸ್ಕೃತಿಕ ಸಮಿತಿ ಸಂಚಾಲಕ

ಮಾಜಿ ಪ್ರಧಾನಿ ಮಣ್ಣಿನ ಮಗ ಎಚ್ ಡಿ ದೇವೇಗೌಡರ ಅದ್ಧೂರಿ ಹುಟ್ಟುಹಬ್ಬ ಆಚರಣೆ

• ಉದಯವಾಹಿನಿ ಅರಸೀಕೆರೆ

ದೇಶ ಕಂಡ ಅಪ್ರತಿಮ ನಾಯಕ ಮಣ್ಣಿನ ಮಗ ಕರ್ನಾಟಕ ರಾಜ್ಯದ ಹೆಮ್ಮೆಯ ಸುಪುತ್ರರು ಹಾಸನ ಜಿಲ್ಲೆಯ ಮತ್ತು ರಾಜ್ಯದ ಕೀರ್ತಿಯನ್ನು ಕೆಂಪುಕೋಟೆಯಲ್ಲಿ ಮೇಳಯಿಸಿದ ಅಪ್ರತಿಮ ರಾಜಕೀಯ ನಾಯಕರು ಎಚ್ ಡಿ ದೇವೇಗೌಡರ 92 ವಸಂತಗಳನ್ನು ಪೂರೈಸಿ 93ನೇ ವರ್ಷಕ್ಕೆ ಕಾಲಿಡುತ್ತಿರುವ ಅಪ್ರತಿಮ ನಾಯಕರ ಹುಟ್ಟುಹಬ್ಬವನ್ನು ಆಚರಿಸುತ್ತಿರುವುದು ನಮ್ಮ ನಿಮ್ಮೆಲ್ಲರ ಸೌಭಾಗ್ಯ ಎಂದು ಅರಸೀಕೆರೆ ಕ್ಷೇತ್ರದ ಜಾತ್ಯತೀತ ಜನತಾದಳ ಪಕ್ಷದ ಮುಖಂಡರಾದ ಹೊಸೂರ್ ಗಂಗಾಧರ್ ಹೇಳಿದರು ಅರಸೀಕೆರೆ ನಗರದ ರೈಲ್ವೆ ನಿಲ್ದಾಣದ ರಸ್ತೆಯಲ್ಲಿರುವ ಶೀ ಗಣಪತಿ ದೇವಸ್ಥಾನದಲ್ಲಿ ಮಾಜಿ ಪ್ರಧಾನ ಮಂತ್ರಿಗಳಾದ ದೇವೇಗೌಡರ ಹೆಸರಿನಲ್ಲಿ ಪೂಜೆ ಸಲ್ಲಿಸಿ ದೇವಾಲಯದ ಮುಂದೆ ಕೇಕ್ ಕತ್ತರಿಸುವುದರ ಮುಖಾಂತರ ನೂರಾರು ಅಭಿಮಾನಿಗಳನ್ನು ಉದ್ದೇಶಿಸಿ ಹೊಸೂರ್ ಗಂಗಾಧರ್ ಮಾತನಾಡಿದರು ದೇಶದಲ್ಲಿ ಮತ್ತು ರಾಜ್ಯದಲ್ಲಿ ರೈತರ ಪರವಾಗಿ ಹೋರಾಟ ಮಾಡಿದ ರಾಜಕಾರಣಿಗಳಲ್ಲಿ ಮೊದಲನೇ ಸಾಲಿನಲ್ಲಿ ಇರುವ ನಾಯಕರೆಂದರೆ ಅದು ಸನ್ಮಾನ್ಯ ಶ್ರೀ ಎಚ್ ಡಿ ದೇವೇಗೌಡರು ಮಾತ್ರ.

ಇಂತಹ ನಾಯಕರು ನಮ್ಮ ಹಾಸನ ಜಿಲ್ಲೆಯಲ್ಲಿ ಸಾಮಾನ್ಯ ಕುಟುಂಬದಲ್ಲಿ ಹುಟ್ಟಿ ಮುಖ್ಯಮಂತ್ರಿಗಳು ಮತ್ತು ಪ್ರಧಾನ ಮಂತ್ರಿಗಳ ಹುದ್ದೆಗೆರಿ ರೈತರ ಪರವಾಗಿ ಹೋರಾಟ ನಡೆಸಿ ಇಡೀ ದೇಶದಲ್ಲಿಯೇ ರೈತರ ಮತ್ತು ಕೂಲಿ ಕಾರ್ಮಿಕರ ಅಚ್ಚುಮೆಚ್ಚಿನ ನಾಯಕರಾಗಿ ಹಲವಾರು ಸೇವೆ ಸಲ್ಲಿಸಿದ್ದಾರೆಂದು ಹೊಸೂರ್ ಗಂಗಾಧರ್ ತಿಳಿಸಿದರು.

ಜೆಡಿಎಸ್ ಮುಖಂಡರಾದ ಕೆಂಕೆರೆ ಕೇಶವ ಮೂರ್ತಿ. ಬಿ ಜಿ ನಿರಂಜನ್. ಲಾಳನ್ಕೆರೆ ಯೋಗೀಶ್. ರಾಂಪುರ ಶೇಖರಪ್ಪ . ಸೇರಿದಂತೆ ಹಲವಾರು ಪಕ್ಷದ ಮುಖಂಡರು ಉಪಸ್ಥಿತರಿದ್ದರು ಗಣಪತಿ ದೇವಾಲಯದಲ್ಲಿ ಪೂಜೆ ನಡೆಸಿ ನಂತರ ಅರಸೀಕೆರೆ ಸರ್ಕಾರಿ ಆಸ್ಪತ್ರೆಯ ರೋಗಿಗಳಿಗೆ ಹಾಲು ಹಣ್ಣು ವಿತರಿಸಿದರು.

ಉದಯವಾಹಿನಿ ಚಿತ್ರ

ಮಾಜಿ ಪ್ರಧಾನಿ ಎಚ್ ಡಿ ದೇವೇಗೌಡರು ನೂರಾರು ನಾಯಕರನ್ನು ಬೆಳೆಸಿದ್ದಾರೆ ಅವರೆಲ್ಲರೂ ಬೇರೆ ಪಕ್ಷಕ್ಕೆ ಹೋಗಿ ನಾಯಕರಾಗಿ ಹೊರಹೊಮ್ಮಿದ್ದಾರೆ ಅಂತಹ ನಾಯಕತ್ವದ ಶಕ್ತಿ ಇದ್ದರೆ ಅದು ದೇವೇಗೌಡರಿಗೆ ಮಾತ್ರ
–ಜಿಎಸ್ ಪರಮೇಶ್ವರಪ್ಪ, ಅರಸೀಕೆರೆ ಕ್ಷೇತ್ರದ ಮಾಜಿ ಶಾಸಕ

ರಸ್ತೆ ಅಭಿವೃದ್ಧಿಗೆ ಶಾಸಕ ಶಿವಲಿಂಗೇಗೌಡ ಮತ್

ಗಾಜಾಪಟ್ಟಿಯ ಮೇಲೆ ಇಸ್ರೇಲ್ ವೈಮಾನಿಕ ದಾಳಿಯಲ್ಲಿ 100 ಮಂದಿ ಸಾವು

ಗಾಜಾ ಪಟ್ಟಿ: ಗಾಜಾ ಪಟ್ಟಿಯಾದ್ಯಂತ ಇಸ್ರೇಲಿ ಪಡೆಗಳು ರಾತ್ರಿಯಿಡೀ ನಡೆಸಿದ ದಾಳಿಯಲ್ಲಿ ಕನಿಷ್ಠ 66 ಮಂದಿ ಸಾವನ್ನಪ್ಪಿದ್ದಾರೆ. ತಾತ್ಕಾಲಿಕ ಕದನ ವಿರಾಮಕ್ಕೆ ಒಪ್ಪಿಕೊಳ್ಳಲು ಹಮಾಸ್ ಮೇಲೆ ಒತ್ತಡ ಹೆಚ್ಚಿಸುವ ಉದ್ದೇಶವನ್ನು ಈ ದಾಳಿ ನಡೆಸಲಾಗಿದೆ ಎಂದು ಹೇಳಲಾಗಿದೆ. ಘಟನೆಯ ಬಗ್ಗೆ ಇಸ್ರೇಲಿ ಮಿಲಿಟರಿ ಪಡೆ ತಕ್ಷಣದ ಪ್ರತಿಕ್ರಿಯೆ ನೀಡಿಲ್ಲ. ಮುವಾಸಿ ಪ್ರದೇಶದಲ್ಲಿ ಸ್ಥಳಾಂತರಗೊಂಡು ಡೇರೆ ಹಾಗೂ ಇತರ ಆಶ್ರಯ ತಾಣಗಳಲ್ಲಿ ತಂಗಿದ್ದವರ ಮೇಲೆ ನಿರಂತವಾಗಿ ವೈಮಾನಿಕ ದಾಳಿ ನಡೆದಿದ್ದು, 20ಕ್ಕೂ ಹೆಚ್ಚು ಶವಗಳನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ದಕ್ಷಿಣ ಗಾಜಾ ನಗರದ ಖಾನ್ ಯೂನಿಸ್‌ನಲ್ಲಿರುವ ನಾಸರ್ ಆಸ್ಪತ್ರೆ ತಿಳಿಸಿದೆ.

ಉತ್ತರ ಗಾಜಾದಲ್ಲಿ, ಆರೋಗ್ಯ ಸಚಿವಾಲಯ, ನಾಗರಿಕ ರಕ್ಷಣಾ ಇಲಾಖೆಯ ಮೊದಲ ಪ್ರತಿಕ್ರಿಯೆ ನೀಡಿ, ಬಹು ದಾಳಿಗಳಲ್ಲಿ ಕನಿಷ್ಠ 36 ಜನರು ಸಾವನ್ನಪ್ಪಿದ್ದಾರೆ ಎಂದು ತಿಳಿಸಲಾಗಿದೆ. ಆರೋಗ್ಯ ಸಚಿವಾಲಯದ ತುರ್ತು ಸೇವೆಗಳ ಪ್ರಕಾರ, ಸತ್ತವರಲ್ಲಿ ಒಂದೇ ಕುಟುಂಬದ ಒಂಬತ್ತು ಜನರು ಸೇರಿದ್ದಾರೆ, ಅವರು ಜಬಾಲಿಯಾದಲ್ಲಿ ನಿರ್ಮಿಸಲಾದ ನಿರಾಶ್ರಿತರ ಶಿಬಿರದಲ್ಲಿ ನೆಲೆಸಿದ್ದರು. ಮತ್ತೊಂದು ದಾಳಿಯು ಜಬಾಲಿಯಾದಲ್ಲಿರುವ ಬೆರಾವಿ ಕುಟುಂಬದ ಮನೆಯ ಮೇಲೆ ಸಂಭವಿಸಿದೆ. ಅಲ್ಲಿ ಏಳು ಮಕ್ಕಳು, ಒಬ್ಬ ಮಹಿಳೆ ಸೇರಿದಂತೆ 10 ಜನರು ಸಾವನ್ನಪ್ಪಿದ್ದಾರೆ ಎಂದು ಹಮಾಸ್ ನೇತೃತ್ವದ ಸರ್ಕಾರದ ಅಡಿಯಲ್ಲಿ ಕಾರ್ಯ ನಿರ್ವಹಿಸುವ ನಾಗರಿಕ ರಕ್ಷಣಾ ಇಲಾಖೆ ತಿಳಿಸಿದೆ. ಮೃತರಲ್ಲಿ ಇಬ್ಬರು ಪೋಷಕರು ಮತ್ತು ಅವರ ಮೂವರು ಮಕ್ಕಳು, ಒಬ್ಬ ತಂದೆ, ಅವರ ನಾಲ್ವರು ಮಕ್ಕಳು ಸೇರಿದ್ದಾರೆ ಎಂದು ಅದು ಹೇಳಿದೆ. ಮಧ್ಯ ಗಾಜಾದಲ್ಲಿ, ಎರಡು ಪ್ರತ್ಯೇಕ ದಾಳಿಗಳಲ್ಲಿ ಕನಿಷ್ಠ 10 ಜನರು ಸಾವನ್ನಪ್ಪಿದ್ದಾರೆ ಎಂದು ದೇರ್ ಅಲ್-ಬಲಾಹ್ ಪಟ್ಟಣದ ಅಲ್-ಅಕ್ಸಾ ಹುತಾತರ ಆಸ್ಪತ್ರೆ ತಿಳಿಸಿದೆ. ಜ್ವೈದಾ ಪಟ್ಟಣದಲ್ಲಿ ನಡೆದ ಒಂದು ದಾಳಿಯಲ್ಲಿ ಇಬ್ಬರು ಮಕ್ಕಳು ಮತ್ತು ನಾಲ್ವರು ಮಹಿಳೆಯರು ಸೇರಿದಂತೆ ಏಳು ಜನರು ಸಾವನ್ನಪ್ಪಿದ್ದಾರೆ. ಎರಡನೆಯ ದಾಳಿಯು ದೇರ್ ಅಲ್-ಬಲಾಹ್‌ನಲ್ಲಿರುವ ಅಪಾರ್ಟ್‌ಮೆಂಟ್‌ಗೆ ಅಪ್ಪಳಿಸಿ, ಇಬ್ಬರು ಪೋಷಕರು, ಅವರ ಮಗು ಹತ್ಯೆಯಾಗಿದೆ ಎಂದು ಆಸ್ಪತ್ರೆ ತಿಳಿಸಿದೆ.

ಕ್ಯಾಲಿಫೋರ್ನಿಯಾದ ಪಾಮ್ ಸ್ಪ್ರಿಂಗ್ಸ್ ಕ್ಲಿನಿಕ್ ಮುಂಭಾದಲ್ಲಿ ಬಾಂಬ್ ಸ್ಫೋಟ

ಸ್ಫೋಟವನ್ನು ಭಯೋತ್ಪಾದಕ ಕೃತ್ಯ ಎಂದ ಎಫ್‌ಬಿಐ

ಕ್ಯಾಲಿಫೋರ್ನಿಯಾ: ಇಲ್ಲಿನ ಪಾಮ್ ಸ್ಪ್ರಿಂಗ್ಸ್‌ನಲ್ಲಿ ಫಲವತ್ತತೆ ಚಿಕಿತ್ಸಾಲಯದ ಹೊರಗೆ ಬಾಂಬ್ ಸ್ಫೋಟ ಸಂಭವಿಸಿದೆ. ಈ ಘಟನೆಯಲ್ಲಿ ಒಬ್ಬ ವ್ಯಕ್ತಿ ಸಾವನ್ನಪ್ಪಿದ್ದು, ಕನಿಷ್ಠ ನಾಲ್ಕು ಜನರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಈ ಘಟನೆ ಯನ್ನು ಭಯೋತ್ಪಾದಕ ಕೃತ್ಯ ಎಂದು ಬಣ್ಣಿಸಿರುವ ಎಫ್‌ಬಿಐ, ತನಿಖೆ ನಡೆಸುತ್ತಿರುವುದಾಗಿ ಹೇಳಿದೆ. ಡೌನ್‌ಟೌನ್ ಪಾಮ್ ಸ್ಪ್ರಿಂಗ್ಸ್‌ನಲ್ಲಿ ಬಾಂಬ್ ಸ್ಫೋಟ ಸಂಭವಿಸಿದೆ. ಸುತ್ತಮುತ್ತಲಿನ ಕಟ್ಟಡಗಳಿಗೆ ಹಾನಿಯಾಗಿದೆ. ಎಫ್‌ಬಿಐ, ಇತರ ಸಂಸ್ಥೆಗಳು ತನಿಖೆ ನಡೆಸುತ್ತಿವೆ. ಬಾಂಬ್ ಸ್ಫೋಟ ಸ್ಥಳದಲ್ಲೇ ಪತ್ರಿಕಾಗೋಷ್ಠಿ ನಡೆಸಿದ ಎಫ್‌ಬಿಐ ಅಧಿಕಾರಿ ಅಕಿಲ್ ಡೇವಿಸ್, ಇದು ಉದ್ದೇಶಪೂರ್ವಕ ಭಯೋತ್ಪಾದಕ ಕೃತ್ಯ ಎಂದು ಹೇಳಿದ್ದಾರೆ. ದಕ್ಷಿಣ ಕ್ಯಾಲಿಫೋರ್ನಿಯಾದಲ್ಲಿ ಸಂಭವಿಸಿರುವ ಅತಿದೊಡ್ಡ ಬಾಂಬ್ ಸ್ಫೋಟಗಳಲ್ಲಿ ಇದೂ ಒಂದು ಎಂದು ಅಕಿಲ್ ಡೇವಿಸ್ ಹೇಳಿದ್ದಾರೆ. ಸ್ಫೋಟವು ಅಮೆರಿಕನ್ ರಿಪ್ರೊಡಕ್ಟಿವ್ ಸೆಂಟರ್ಸ್ ಕಟ್ಟಡದ ಬಳಿ ಸಂಭವಿಸಿದೆ.

ಸ್ಫೋಟದ ರಭಸಕ್ಕೆ ಕಿಟಕಿ ಗಾಜುಗಳು ಒಡೆದು ಪುಡಿ ಯಾಗಿದ್ದು, ಕಟ್ಟಡದ ಭಾಗ ಸಂಪೂರ್ಣವಾಗಿ ಕುಸಿದಿದೆ. ಸ್ಫೋಟವು ಕ್ಲಿನಿಕ್‌ನ ಪಾರ್ಕಿಂಗ್ ಸ್ಥಳದಲ್ಲಿ ಸಂಭವಿಸಿದ್ದು, ಸುಟ್ಟ ಕಾರಿನ ಆಕ್ಸಲ್ ಮಾತ್ರ ಸ್ಥಳದಲ್ಲಿ ಉಳಿದಿದೆ. ಅಮೆರಿಕದ ವರ್ಜೀನಿಯಾ ಶೂಟೌಟ್ ಪ್ರಕರಣದಲ್ಲಿ ಭಾರತೀಯ ಮೂಲದ ತಂದೆ-ಮಗಳು ಸಾವನ್ನಪ್ಪಿದ್ದನ್ನು ಇಲ್ಲಿ ಸ್ಮರಿಸಬಹುದು.

ತನಿಖೆಯ ಸುರಕ್ಷತೆಯ ದೃಷ್ಟಿಯಿಂದ ಬಾಂಬ್ ಸ್ಫೋಟದಲ್ಲಿ ಮೃತಪಟ್ಟ ವ್ಯಕ್ತಿಯ ಗುರುತನ್ನು ಎಫ್‌ಬಿಐ ಬಹಿರಂಗಪಡಿಸಿಲ್ಲ. ಸತ್ತ ವ್ಯಕ್ತಿಯೇ ಬಾಂಬ್ ಸ್ಫೋಟಕ್ಕೆ ಕಾರಣ ಎಂದು ಅಧಿಕಾರಿಗಳು ಅಂದಾಜಿಸಿದ್ದು, ಸ್ಥಳದಲ್ಲಿ ಎಕೆ-47 ಮಾದರಿಯ ರೈಫಲ್ ಕೂಡ ಪತ್ತೆಯಾಗಿದೆ.

ಸ್ಫೋಟದ ಉದ್ದೇಶ ಇನ್ನೂ ತಿಳಿದಿಲ್ಲ. ಇದು ದೇಶೀಯ ಭಯೋತ್ಪಾದನೆಯೋ, ಅಂತಾರಾಷ್ಟ್ರೀಯ ಭಯೋತ್ಪಾದನೆಯೋ ಎಂಬುದು ತನಿಖೆ ಯಿಂದ ತಿಳಿದು ಬರಲಿದೆ. ಸ್ಫೋಟವನ್ನು ಲೈವ್‌ಸ್ಟ್ರೀಮ್ ಮಾಡಲಾಗಿದೆಯೇ ಎಂದೂ ತನಿಖೆ ಮಾಡಲಾಗುತ್ತಿದೆ ಎಂದು ಎಫ್‌ಬಿಐ ಸ್ಪಷ್ಟಪಡಿಸಿದೆ.

ಕ್ಲಿನಿಕ್‌ನ ಸಿಬ್ಬಂದಿ ಸುರಕ್ಷಿತವಾಗಿದ್ದು, ಪ್ರಯೋಗಾಲಯಕ್ಕೆ ಹಾನಿಯಾಗಿಲ್ಲ ಎಂದು ದೃಢಪಡಿಸಲಾಗಿದೆ. ಈ ಕುರಿತು ಮಾತನಾಡಿರುವ ಕ್ಲಿನಿಕ್‌ನ ಡಾ. ಮಹೆರ್ ಅಬ್ದಲ್ಲಾ, ದೇವರ ದಯೆಯಿಂದ ಕ್ಲಿನಿಕ್‌ನಲ್ಲಿ ಯಾವುದೇ ರೋಗಿಗಳು ಇರಲಿಲ್ಲ ಎಂದು ಹೇಳಿದ್ದಾರೆ. ಅಮೆರಿಕದಲ್ಲಿ ಹೆಚ್ಚುತ್ತಿರುವ ಸಾಮೂಹಿಕ ಶೂಟೌಟ್ ಪ್ರಕರಣ ಒಂದೆಡೆಯಾದರೆ, ಇದೀಗ ಬಾಂಬ್ ಸ್ಫೋಟ ಪ್ರಕರಣಗಳು ಕೂಡ ಅಮೆರಿಕನ್ನರ ನಿದ್ದೆಗೆಡಿಸಿದೆ. ಸ್ಫೋಟದ ತೀವ್ರತೆಯಿಂದಾಗಿ ಐದು ಲೇನ್‌ಗಳ ರಸ್ತೆಯಲ್ಲಿ ಅವಶೇಷಗಳು ಹರಡಿಕೊಂಡಿವೆ. ಹತ್ತಿರದ ಮದ್ಯದಂಗಡಿ ಮತ್ತು ಆಸ್ಪತ್ರೆಗೂ ಹಾನಿಯಾಗಿದೆ. ಕಾರಿನ ಭಾಗಗಳು ನಾಲ್ಕು ಲೇನ್‌ಗಳವರೆಗೆ ಹಾರಿಹೋಗಿವೆ ಎಂದು ಪ್ರತ್ಯಕ್ಷ ದರ್ಶಿಯೊಬ್ಬರು ಹೇಳಿದ್ದಾರೆ.

2018ರಲ್ಲಿ ಕ್ಯಾಲಿಫೋರ್ನಿಯಾ ಮಾಸ್ ಶೂಟೌಟ್ ಪ್ರಕರಣದಲ್ಲಿ 12 ಜನ ಸಾವನ್ನಪ್ಪಿದ್ದರು. ಈ ಪ್ರಕರಣದ ತನಿಖೆಯನ್ನು ಎಫ್‌ಬಿಐ ನಡೆಸಿದ್ದನ್ನು ಇಲ್ಲಿ ಸ್ಮರಿಸಬಹುದು. ಎಫ್‌ಬಿಐ, ಎಟಿಎಫ್, ಸ್ಥಳೀಯ ಸಂಸ್ಥೆಗಳ ತನಿಖಾಧಿಕಾರಿಗಳು ಸ್ಥಳದಲ್ಲಿ ಸಾಕ್ಷ್ಯಗಳನ್ನು ಸಂಗ್ರಹಿಸುತ್ತಿದ್ದಾರೆ. ಇದು ಕ್ಯಾಲಿಫೋರ್ನಿಯಾದಲ್ಲಿ ಭಯೋತ್ಪಾದನೆಯ ದೊಡ್ಡ ಪ್ರಕರಣ ಎಂದು ಪರಿಗಣಿಸಲಾಗಿದೆ. ಈ ಭಯಾನಕ ಘಟನೆಯು ಮಹಿಳೆಯರ ಆರೋಗ್ಯ ಮತ್ತು ಸುರಕ್ಷತೆಯ ಬಗ್ಗೆ ಕಾಳಜಿ ಮೂಡಿಸಿದೆ. ಕ್ಲಿನಿಕ್‌ಗಳಿಗೆ ಹೆಚ್ಚಿನ ಭದ್ರತೆ ಒದಗಿಸುವಂತೆ ಒತ್ತಾಯ ಕೇಳಿಬಂದಿದೆ.



ಇನ್ನು ಘಟನೆಯ ಕುರಿತು ಮಾಹಿತಿ ನೀಡಿರುವ ಪಾಮ್ ಸ್ಪ್ರಿಂಗ್ಸ್ ಪೊಲೀಸ್ ಮುಖ್ಯಸ್ಥ ಆಂಡಿ ಮಿಲ್ಸ್, ಮುನ್ನೆಚ್ಚರಿಕಾ ಕ್ರಮವಾಗಿ ಸೌಥ್ ಕ್ಯಾಲಿಫೋರ್ನಿಯಾದಲ್ಲಿನ 19 ಯೋಜಿತ ಪಿತೃತ್ವ ಕೇಂದ್ರಗಳನ್ನು ಮುಚ್ಚಲಾಗಿದೆ ಎಂದು ತಿಳಿಸಿದ್ದಾರೆ. ಯುಎಸ್ ಅಟಾರ್ನಿ ಜನರಲ್ ಪ್ಯಾಮ್ ಬೊಂಡಿ ಈ ದಾಳಿಯನ್ನು ತೀವ್ರವಾಗಿ ಖಂಡಿಸಿದ್ದಾರೆ. ಇದು ಕ್ಷಮಿಸಲಾಗದ ಅಪರಾಧ ಎಂದು ಬೊಂಡಿ ಹರಿಹಾಯ್ದಿದ್ದಾರೆ.

ಒರ್ವ ವ್ಯಕ್ತಿ ಸಾವು

ಅಮೆರಿಕದ ಕ್ಯಾಲಿಫೋರ್ನಿಯಾದ ಪಾಮ್ ಸ್ಪ್ರಿಂಗ್ಸ್‌ನ ರಿಪ್ರೊಡಕ್ಟೀವ್ ಕ್ಲಿನಿಕ್‌ನ ಮುಂಭಾಗದಲ್ಲಿ ಬಾಂಬ್ ಸ್ಫೋಟ ಸಂಭವಿಸಿದೆ. ಕ್ಲಿನಿಕ್‌ನ ಪಾರ್ಕಿಂಗ್‌ನಲ್ಲಿ ನಿಂತಿದ್ದ ಕಾರು ಸ್ಫೋಟಗೊಂಡಿದ್ದು, ಒರ್ವ ವ್ಯಕ್ತಿ ಸಾವನ್ನಪ್ಪಿದ್ದಾನೆ. ಮೃತಪಟ್ಟ ವ್ಯಕ್ತಿಯೇ ಸ್ಫೋಟಕ್ಕೆ ಕಾರಣ ಎಂದು ಅಂದಾಜಿಸಲಾಗಿದೆ. ಪ್ರಕರಣದ ತನಿಖೆ ನಡೆಸುತ್ತಿರುವ ಎಫ್‌ಬಿಐ, ಇದೊಂದು ಭಯೋತ್ಪಾದಕ ಕೃತ್ಯ ಎಂದು ಕರೆದಿದೆ. ಘಟನೆಯ ಕಾರಣಕ್ಕೆ ಸೌಥ್ ಕ್ಯಾಲಿಫೋರ್ನಿಯಾದಲ್ಲಿರುವ 19 ಯೋಜಿತ ಪಿತೃತ್ವ ಕೇಂದ್ರಗಳನ್ನು ಮುನ್ನೆಚ್ಚರಿಕಾ ಕ್ರಮವಾಗಿ ಮುಚ್ಚಲಾಗಿದೆ.

ಬಿಹಾರದಲ್ಲಿ ಸಂಚಲನ ಸೃಷ್ಟಿಸಲು ಮುಂದಾದ ಜೋಡಿ ನಾಯಕರು

ಪಾಟ್ನಾ: ಒಂದು ಕಾಲದಲ್ಲಿ ಬಿಹಾರದ ಸಿಎಂ ನಿತೀಶ್ ಕುಮಾರ್ ಅವರಿಗೆ ಅತ್ಯಾಪ್ತರಾಗಿದ್ದ ಕೇಂದ್ರದ ಮಾಜಿ ಸಚಿವ ಆರ್‌ಸಿಪಿ ಸಿಂಗ್ ತಮ್ಮ ಸ್ವಂತ ಪಕ್ಷವನ್ನು ಪ್ರಶಾಂತ್ ಕಿಶೋರ್ ಅವರ ಪಕ್ಷದ ಜೊತೆ ವಿಲೀನ ಮಾಡಿದ್ದಾರೆ. ಈ ವರ್ಷದ ಕೊನೆಯಲ್ಲಿ ಬಿಹಾರ ವಿಧಾನಸಭಾ ಸಭೆಗೆ ಚುನಾವಣೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಬಿಹಾರದ ಬೆಳವಣಿಗೆಗಳು ಗಮನ ಸೆಳೆದಿವೆ. ಬಿಹಾರದಲ್ಲಿ ಪ್ರಶಾಂತ್ ಕಿಶೋರ್ ಜನ್ ಸುರಾಜ್ ಪಕ್ಷ ಸ್ಥಾಪಿಸಿ ಸಂಚಲನ ಮೂಡಿಸುತ್ತಿದ್ದಾರೆ. ಈಗ ಅವರೊಂದಿಗೆ ಮಾಜಿ ಕೇಂದ್ರ ಸಚಿವ ಆರ್‌ಸಿಪಿ ಕೈ ಜೋಡಿಸಿದ್ದಾರೆ.

ಸಿಂಗ್ ತಮ್ಮ ಆಪ್ ಸಬ್ ಕಿ ಅವಾಝ್ ಪಕ್ಷವನ್ನು ಜನ್ ಸುರಾಜ್ ಪಕ್ಷದೊಂದಿಗೆ ವಿಲೀನಗೊಳಿಸುವುದಾಗಿ ಘೋಷಿಸಿದ್ದಾರೆ. ಸಿಂಗ್ ಅಧಿಕಾರಿಯಾಗಿದ್ದರು, ರಾಜಕಾರಣಿಯಾಗಿ ಬದಲಾಗಿ 2024 ರ ನವೆಂಬರ್‌ನಲ್ಲಿ ತಮ್ಮದೇ ಆದ ಪಕ್ಷವನ್ನು ಸ್ಥಾಪಿಸಿದ್ದರು. ಬಿಹಾರವನ್ನು ಅಭಿವೃದ್ಧಿ ಹೊಂದಿದ ರಾಜ್ಯವನ್ನಾಗಿ ಮಾಡಲು ನಾವಿಬ್ಬರೂ ಒಟ್ಟಾಗಿ ಕೆಲಸ ಮಾಡುತ್ತೇವೆ ಎಂದು ಸಿಂಗ್ ಇಲ್ಲಿ ನಡೆದ ಸಮಾರಂಭದಲ್ಲಿ ಘೋಷಿಸಿದರು. 2005ರಲ್ಲಿ ಬಿಹಾರಕ್ಕೆ ನಿತೀಶ್ ಕುಮಾರ್ ಮುಖ್ಯಮಂತ್ರಿಯಾದಾಗ ಸಿಂಗ್ ಅವರ ಆಡಳಿತಾತ್ಮಕ ಕುಶಾಗ್ರಮತಿಯಿಂದ ಪ್ರಭಾವಿತರಾಗಿ ಬಿಹಾರ ರಾಜಕಾರಣಕ್ಕೆ ಬರಲು ಮನವೊಲಿಸಿದರು. ಅದರಂತೆ 2010 ರಲ್ಲಿ, ಸಿಂಗ್ ಸ್ವಯಂಪ್ರೇರಿತ ನಿವೃತ್ತಿ ಪಡೆದು ಜೆಡಿಯು ಸೇರಿದರು. ರಾಜ್ಯ ಸಭೆಯಲ್ಲಿ ಸತತ ಎರಡು ಅವಧಿಗಳಿಗೆ ಆಯ್ಕೆಯಾಗಿದ್ದರು.

ಜೆಡಿಯು ರಾಷ್ಟ್ರೀಯ ಅಧ್ಯಕ್ಷರನ್ನಾಗಿಯೂ ಕೆಲಸ ಮಾಡಿದ್ದರು. 2021 ರಲ್ಲಿ ಕೇಂದ್ರ ಸಚಿವ ಸಂಪುಟಕ್ಕೆ ಅವರ ಸೇರ್ಪಡೆ ನಿತೀಶ್ ಅವರಿಗೆ ಇಷ್ಟವಾಗಲಿಲ್ಲ. ಆದರಿಂದಾಗಿ ಜೆಡಿಯು ನ ರಾಷ್ಟ್ರೀಯ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಯಬೇಕಾಯಿತು. ಒಂದು ವರ್ಷದ ನಂತರ ಮತ್ತೊಂದು ಅವಧಿಯ ರಾಜ್ಯ ಸಭಾ ಅವಧಿಗೆ ಸಿಂಗ್‌ರನ್ನು ಆಯ್ಕೆ ಮಾಡಲಿಲ್ಲ. ನಂತರದ ಬೆಳಣಿಗೆಯಲ್ಲಿ ಜೆಡಿಯು ತೊರೆದ ಸಿಂಗ್ 2023 ರಲ್ಲಿ ಬಿಜೆಪಿ ಸೇರಿದರು. ಅಲ್ಲಿಂದಲೂ ಹೊರ ಬಂದು ಸ್ವಂತ ಪಕ್ಷ ಕಟ್ಟಿದ್ದರು.

ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ತವರೂ ನಳಂದ ಮೂಲದವರಾದ ಸಿಂಗ್, ಉತ್ತರ ಪ್ರದೇಶ ಕೇಡರ್‌ನ ಐಎಎಸ್ ಅಧಿಕಾರಿಯಾಗಿದ್ದರು. ಕೇಂದ್ರ ನಿಯೋಜನೆಯಲ್ಲಿದ್ದಾಗ, 1999ರಲ್ಲಿ ಜೆಡಿ(ಯು) ಮುಖ್ಯಸ್ಥರೂ ಆಗಿದ್ದ ಆಗಿನ ರೈಲ್ವೆ ಸಚಿವ ನಿತೀಶ್ ಕುಮಾರ್ ಅವರನ್ನು ಮೊದಲು ಸಂಪರ್ಕಿಸಿದರು.

ಮುಸ್ಲಿಮರನ್ನು ಮತ ಬ್ಯಾಂಕ್‌ನಂತೆ ನೋಡಬೇಡಿ : ಓವೈಸಿ

ಹೈದರಾಬಾದ್: ಪ್ರತಿಪಕ್ಷಗಳು ವಿಫಲವಾಗಿರುವುದರಿಂದಲೇ ಬಿಜೆಪಿಯು ಸತತವಾಗಿ ಚುನಾವಣೆಗಳನ್ನು ಗೆಲ್ಲುತ್ತಿದೆ. ಏಕೆಂದರೆ ಅದು ಹಿಂದೂ ಮತಗಳನ್ನು ಕ್ರೋಢೀಕರಿಸಿದೆ ಎಂದು ಹೈದರಾಬಾದ್ ಸಂಸದ ಅಸಾದುದ್ದೀನ್ ಓವೈಸಿ ಅವರು ಮೋದಿ ವಿರೋಧಿಗಳಿಗೆ ತಿರುಗೇಟು ಕೊಟ್ಟಿದ್ದಾರೆ. ನೀವು ನನ್ನ ಮೇಲೆ ಹೇಗೆ ಆರೋಪ ಹೊರಿಸುತ್ತೀರಿ, 2024 ರ ಸಂಸತ್ ಚುನಾವಣೆಯಲ್ಲಿ ನಾನು ಹೈದರಾಬಾದ್, ಔರಂಗಾ ಬಾದ್, ಕಿಶನ್‌ಗಂಜ್, ಇತರ ಕೆಲವು ಸ್ಥಾನಗಳಲ್ಲಿ ಸ್ಪರ್ಧಿಸಿದರೆ, ಬಿಜೆಪಿ 240 ಸ್ಥಾನಗಳನ್ನು ಪಡೆದರೆ ನಾನೇ ಹೊಣೆಯೇ ಎಂದು ಪ್ರಶ್ನೆ ಮಾಡಿದ್ದಾರೆ.

ಬಿಜೆಪಿ ಅಧಿಕಾರಕ್ಕೆ ಬರುತ್ತಿದೆ ಏಕೆಂದರೆ ಪ್ರತಿಪಕ್ಷಗಳು ವಿಫಲವಾಗಿವೆ . ಬಿಜೆಪಿಯು ಸುಮಾರು ಶೇಕಡಾ 50 ರಷ್ಟು ಹಿಂದೂ ಮತಗಳನ್ನು ಕೋಡೀಕರಿಸಿದ ಕಾರಣ ಚುನಾವಣೆಯಲ್ಲಿ ಗೆಲ್ಲುತ್ತಿದೆ, ಅವರನ್ನು ದೂಷಿಸುವ ಪ್ರಯತ್ನಗಳು, ಬಿಜೆಪಿಯ ಬಿ-ಟೀಮ್ ಎಂದು ಕರೆಯುವ ಪ್ರಯತ್ನಗಳು ತಮ್ಮ ಪಕ್ಷಕ್ಕೆ ವಿರೋಧ ಪಕ್ಷದ ದ್ವೇಷ ಹೊರತು ಬೇರೇನೂ ಅಲ್ಲ. ಏಕೆಂದರೆ ಅದು ಮುಸ್ಲಿಮರನ್ನು ಹೆಚ್ಚಾಗಿ ಪ್ರತಿನಿಧಿಸುತ್ತದೆ ಎಂದರು. ಕಾಂಗ್ರೇಸ್‌ನಂತಹ ವಿರೋಧ ಪಕ್ಷಗಳು ಓವೈಸಿಯ ಆಲ್ ಇಂಡಿಯಾ ಮಜ್ಲಿಸ್-ಎ-ಇತ್ತೆಹಾದುಲ್ ಮುಸ್ಲಿಮೀನ್ ಪಕ್ಷವನ್ನು ಹೈದರಾಬಾದ್ ಪ್ರದೇಶದ ಹೊರಗೆ ತನ್ನ ಭದ್ರಕೋಟೆಯ ಹೊರಗೆ ಬೆಳೆಸುವ ಪ್ರಯತ್ನಗಳನ್ನು ಅಪಹಾಸ್ಯ ಮಾಡಿದ್ದು, ಬಹುತೇಕ ಮುಸ್ಲಿಮರ ಮತಗಳನ್ನು ಕಸಿದುಕೊಳ್ಳುವ ಮೂಲಕ ಬಿಜೆಪಿಗೆ ಲಾಭದಾಯಕವಾಗಿದೆ ಎಂದು ಹೇಳಿದರು.

ವಿರೋಧ ಪಕ್ಷಗಳು ಮುಸ್ಲಿಂ ಮತಗಳನ್ನು ಲಘುವಾಗಿ ಪರಿಗಣಿಸುತ್ತಿವೆ ಮತ್ತು ಅವರ ನೈಜ ಕಾಳಜಿಗೆ ಸ್ವಲ್ಪವೂ ಗಮನ ಕೊಡುತ್ತಿಲ್ಲ. ಸಮಾಜದ ಪ್ರತಿಯೊಂದು ವಿಭಾಗವು ರಾಜಕೀಯ ನಾಯಕತ್ವದ ಹೋಲಿಕೆಯನ್ನು ಹೊಂದಿರುವಾಗ, ಅದು ನಿಮಗೆ ಸ್ವೀಕಾರಾರ್ಹವಾಗಿದೆ ಆದರೆ ಮುಸ್ಲಿಮರು ರಾಜಕೀಯ ಧ್ವನಿ, ರಾಜಕೀಯ ನಾಯಕತ್ವದ ಹೋಲಿಕೆಯನ್ನು ಹೊಂದಿರಬೇಕೆಂದು ನೀವು ಬಯಸುವುದಿಲ್ಲ ಎಂದು ಅವರು ಹೇಳಿದರು.

ನೀವು ಕಾಂಗ್ರೇಸ್ ಅನ್ನು ಉಲ್ಲೇಖಿಸುತ್ತಿದ್ದೀರಾ ಎಂಬ ಪ್ರಶ್ನೆಗೆ, ಅವರು ಬಿಎಸ್ಪಿ, ಎಸ್ಪಿ, ಬಿಜೆಡಿ ಸೇರಿದಂತೆ ಎಲ್ಲಾ ವಿರೋಧ ಪಕ್ಷಗಳನ್ನು ಉಲ್ಲೇಖಿಸುತ್ತಿದ್ದಾರೆ, ಯಾದವ್ ನಾಯಕನಾಗುತ್ತಾನೆ, ಮುಸಲಾನ್ ಭಿಕ್ಷುಕನಾಗುತ್ತಾನೆ, ಮೇಲ್ಜಾತಿ ನಾಯಕನಾಗುತ್ತಾನೆ, ಮುಸಲಾನ್ ಭಿಕ್ಷುಕನಾಗುತ್ತಾನೆ, ಅದು ಹೇಗೆ ನ್ಯಾಯ ಹೇಳಿ ಎಂದು ಓವೈಸಿ ಹೇಳಿದರು. ಭಾರತದ ಸ್ಥಾಪಕ ಪಿತಾಮಹರು ದೇಶವನ್ನು ಸಹಭಾಗಿತ್ವದ ಪ್ರಜಾಪ್ರಭುತ್ವವಾಗಿ ರೂಪಿಸಿದ್ದಾರೆ ಎಂದು ವಿಷಾದಿಸಿದರು.

ರಕ್ತಪಾತ ತಡೆಗೆ ಪುಟಿನ್ ಜತೆ ಚರ್ಚೆ

ವಾಷಿಂಗ್ಟನ್: ಉಕ್ರೇನ್‌ನಲ್ಲಿ 'ರಕ್ತಪಾತ' ನಿಲ್ಲಿಸುವ ಬಗ್ಗೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ಚರ್ಚೆ ನಡೆಸಲಾಗುವುದು ಎಂದು ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಹೇಳಿದ್ದಾರೆ. ಸಾಮಾಜಿಕ ಜಾಲತಾಣ ಟ್ರೂತ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ಡೊನಾಲ್ಡ್ ಟ್ರಂಪ್ ಅವರು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಮತ್ತು ಕೆಲವು ನ್ಯಾಟೋ ದೇಶಗಳ ನಾಯಕರೊಂದಿಗೆ ಮಾತನಾಡುವುದಾಗಿ ಮಾಹಿತಿ ಹಂಚಿಕೊಂಡಿದ್ದಾರೆ. ಖೈದಿಗಳ ವಿನಿಮಯಕ್ಕೆ ಒಪ್ಪಿಗೆ ನೀಡಲಾಗಿದ್ದರೂ, ಇಸ್ತಾನ್‌ಬುಲ್‌ನಲ್ಲಿ ರಷ್ಯಾ ಮತ್ತು ಉಕ್ರೇನ್ ತಮ್ಮ ಮೊದಲ ಮುಖಾಮುಖಿ ಮಾತುಕತೆ ನಡೆಸಿದಾಗ ಯಾವುದೇ ಪ್ರಗತಿಯನ್ನು ತಲುಪಲು ಸಾಧ್ಯವಾಗಲಿಲ್ಲ. ಈ ಹಿನ್ನೆಲೆಯಲ್ಲಿ ಪುಟಿನ್ ಜೊತೆ ಚರ್ಚೆ ನಡೆಸುವುದಾಗಿ ತಿಳಿಸಿದ್ದಾರೆ. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಮುಖಾಮುಖಿ ಮಾತುಕತೆ ನಡೆಸಿದರೆ ಮಾತ್ರ ಯ



ವಿಕಿನಿಯಲ್ಲಿ ಬೀಚ್ ಬಳಿ ನಟಿ ಖುಷಿ ಕಪೂರ್ ಚಿಲ್



ಬ್ಯೂಟಿ ಜೊತೆ ಪ್ರತಿಭೆ ಇದೆ

ಸಿನಿಮಾ ಫ್ಲಾಪ್ ಆದರೂ ಕ್ಯಾರೆ ಎನ್ನದೆ ಬಾಲಿವುಡ್ ನಟಿ ಖುಷಿ ಕಪೂರ್ ವೆಕೇಷನ್‌ನಲ್ಲಿ ಬ್ಯುಸಿಯಾಗಿದ್ದಾರೆ. ಬಿಕಿನಿ ಧರಿಸಿ ಬೀಚ್ ಬಳಿ ನಟಿ ಖುಷಿ ಬೋಲ್ಡ್ ಆಗಿ ಪೋಸ್ ಕೊಟ್ಟಿದ್ದಾರೆ. ಬಿಕಿನಿಯಲ್ಲಿರುವ ನಟಿಯನ್ನು ನೋಡಿ ಫ್ಯಾನ್ಸ್ ಫಿದಾ ಆಗಿದ್ದಾರೆ. ಫ್ರೆಂಡ್ಸ್ ಜೊತೆ ನಟಿ ವೆಕೇಷನ್‌ಗೆ ತೆರಳಿದ್ದಾರೆ. ಬಿಕಿನಿ ಧರಿಸಿ ಸಖತ್ ಹಾಟ್ ಆಗಿ ಖುಷಿ ಕಾಣಿಸಿಕೊಂಡಿದ್ದಾರೆ.

ನಟಿ ವಿವಿಧ ಭಂಗಿಗಳ ಫೋಟೋಗಳನ್ನು ಹಂಚಿಕೊಂಡಿದ್ದಾರೆ. ಅವರ ಫೋಟೋಗೆ ಬಗೆ ಬಗೆಯ ಕಾಮೆಂಟ್‌ಗಳು ಹರಿದು ಬರುತ್ತಿವೆ. ಹಿರಿಯ ನಟಿ ಶ್ರೀದೇವಿ ಪುತ್ರಿ ಖುಷಿಗೂ ನೆಪೋಟಿಸಂ ಕಿಡ್ ಎಂದು ಟೀಕಿಸುತ್ತಿದ್ದಾರೆ.

ಇತ್ತೀಚೆಗೆ ತೆರೆಕಂಡ 2 ಸಿನಿಮಾಗಳು ಗಲ್ಲಾಪೆಟ್ಟಿಗೆಯಲ್ಲಿ ಮಕಾಡೆ ಮಲಗಿವೆ. ಲವ್‌ಯಾಪಾ, ನಾದಾನಿಯಾ ಸಿನಿಮಾಗಳು ಸೋತಿವೆ. ಸೆಲೆಬ್ರಿಟಿ ಕಿಡ್‌ನ ಸಿನಿಮಾಗೆ ಹಾಕಿಕೊಂಡರೆ ಹೀಗೆ ಎಂದು ಟೀಕಿಸುತ್ತಿದ್ದಾರೆ. ಪ್ರತಿಭೆ ಇಲ್ಲದ ಹುಡುಗಿಗೆ ಯಾಕೆ ಚಾನ್ಸ್ ಕೊಡ್ತೀರಾ ಎಂದು ಫ್ಯಾನ್ಸ್ ಕಾಮೆಂಟ್ ಮಾಡ್ತಿದ್ದಾರೆ. ಹೀಗಿರುವಾಗ ಸಿನಿಮಾ ಸೋಲಿನ ಬಗ್ಗೆ ತಲೆ ಕೆಡಿಸಿಕೊಳ್ಳದೆ ವೆಕೇಷನ್ ಹೋಗಿರುವ ನಟಿಯನ್ನು ಫ್ಯಾನ್ಸ್ ತರಾಟೆಗೆ ತೆಗೆದುಕೊಂಡಿದ್ದಾರೆ. ಸಿನಿಮಾಗಳು ಸೋತಿದ್ರೂ ಖುಷಿಗೆ ಅವಕಾಶಗಳೇನು ಕಡಿಮೆಯಾಗಿಲ್ಲ. ಶ್ರೀದೇವಿ ಮತ್ತು ಬೋನಿ ಕಪೂರ್ ಮಗಳು ಅನ್ನೋ ಕಾರಣಕ್ಕೆ ನಟಿಗೆ ಚಾನ್ಸ್ ಸಿಕ್ತಿದೆ. ಜಾನ್ವಿ ಕಪೂರ್ ಸ್ಟಾರ್ ಕಿಡ್ ಆಗಿದ್ರೂ ಬ್ಯೂಟಿ ಜೊತೆ ಪ್ರತಿಭೆ ಇದೆ ಅನ್ನೋ ಕಾರಣಕ್ಕೆ ಫ್ಯಾನ್ಸ್ ಸುಮ್ಮನಿದ್ದಾರೆ.



ಈ ಟ್ಯಾಲೆಂಟ್‌ನ ನೋಡಿದ್ದೀರಾ

ಮಿಮಿಕ್ರಿ ಮಾಡ್ತಾರೆ ರಚಿತಾ ರಾಮ್

ರಚಿತಾ ರಾಮ್ ಅವರು ಕನ್ನಡ ಚಿತ್ರರಂಗದಲ್ಲಿ ಬರೋಬ್ಬರಿ 12 ವರ್ಷಗಳನ್ನು ಪೂರೈಸಿದ್ದಾರೆ. ಇಷ್ಟು ವರ್ಷಗಳ ಅವಧಿಯಲ್ಲಿ ರಚಿತಾ ರಾಮ್ ಅವರು ಹಲವು ಹಿಟ್ ಚಿತ್ರಗಳನ್ನು ನೀಡಿದ್ದಾರೆ. ನಿಜ ಹೇಳಬೇಕು ಎಂದರೆ ಅವರು ನಟಿಸಿದ ಮೊದಲ ಸಿನಿಮಾ 'ಬುಲ್ ಬುಲ್' ಸೂಪರ್ ಹಿಟ್ ಆಯಿತು. ದರ್ಶನ್ ಜೊತೆ ಅವರು ನಟಿಸಿ ಗಮನ ಸೆಳೆದರು. ರಚಿತಾ ರಾಮ್ ಅವರು ಕನ್ನಡದ ಬೇಡಿಕೆಯ ನಟಿ ಆಗಿದ್ದಾರೆ. ಅವರು ಸೂಪರ್ ಆಗಿ ಮಿಮಿಕ್ರಿ ಮಾಡುವ ಟ್ಯಾಲೆಂಟ್‌ನ ಕೂಡ ಹೊಂದಿದ್ದಾರೆ.

ರಚಿತಾ ರಾಮ್ ಅವರು ಮಿಮಿಕ್ರಿ ಮಾಡೋ ಟ್ಯಾಲೆಂಟ್‌ನ 'ಭರ್ಜರಿ ಬ್ಯಾಚುಲರ್ಸ್ ಸೀಸನ್ 2' ವೇದಿಕೆ ಮೇಲೆ ತೋರಿಸಿದ್ದಾರೆ. ಅಸಲಿಗೆ ಇಲ್ಲಿ ಮಿಮಿಕ್ರಿ ಮಾಡುವ ಟಾಸ್ಕ್ ಕೊಟ್ಟಿದ್ದು ರಚಿತಾ ಅವರೇ. ಎಲ್ಲಾ ಸ್ಪರ್ಧಿಗಳಿಗೆ ತಮ್ಮ ಮಹಿಳಾ ಮೆಂಟರ್‌ನ ಒಂದು ಸ್ಟೈಲ್‌ನ ಅನುಕರಿಸಿ ತೋರಿಸುವ ಟಾಸ್ಕ್ ಕೊಡಲಾಯಿತು. ಈ ಟಾಸ್ಕ್‌ನ ಎಲ್ಲರೂ ಚೆನ್ನಾಗಿ ಮಾಡಿ ತೋರಿಸಿದರು.

ಆ ಬಳಿಕ ರಚಿತಾ ರಾಮ್ ಅವರು ಕೆಲವು ಸ್ಪರ್ಧಿಗಳ ಸ್ಟೈಲ್‌ನ ಅನುಕರಿಸಿದರು. ಅವರು ಮಾಡಿದ್ದು ಎಷ್ಟು ಖಚಿತವಾಗಿತ್ತು ಎಂದರೆ ಎಲ್ಲರೂ ಚಪ್ಪಾಳೆ ಹೊಡೆದರು. ಇನ್ನೂ ಕೆಲವರು ಅವರಿಗೆ ತಲೆಬಾಗಿ ಬಿಟ್ಟರು. ರಚಿತಾ ಅವರಲ್ಲಿ ಇಷ್ಟೊಂದು ಟ್ಯಾಲೆಂಟ್ ಇದೆ ಎಂಬ ವಿಚಾರ ಅನೇಕರಿಗೆ ಗೊತ್ತೇ ಇರಲಿಲ್ಲ. ಈಗ ಅವರ ಈ ಟ್ಯಾಲೆಂಟ್‌ನ ನೋಡಿ ಅನೇಕರು ಮೆಚ್ಚಿಕೊಂಡಿದ್ದಾರೆ.

ರಚಿತಾ ರಾಮ್ ಅವರು ಹಿರಿತೆರೆ ಹಾಗೂ ಕಿರಿತೆರೆ ಎರಡರಲ್ಲೂ ಬ್ಯುಸಿ ಇದ್ದಾರೆ. ಅವರು ಹಿರಿತೆರೆಯಲ್ಲಿ 12 ವರ್ಷ ಪೂರ್ಣಗೊಳಿಸಿದ್ದಕ್ಕೆ ದರ್ಶನ್ ಅವರಿಂದ ವಿಶೇಷ ವಿಶ್ ಸಿಕ್ಕಿದೆ ಅನ್ನೋದು ವಿಶೇಷ.

ಸಿನಿಮಾ ಗೆದ್ದ ಬೆನ್ನಲ್ಲೇ ದೇವಿ ಮೊರೆ ಹೋದ ಶ್ರೀನಿಧಿ ಶೆಟ್ಟಿ



ಕನ್ನಡತಿ ಶ್ರೀನಿಧಿ ಶೆಟ್ಟಿ ಅವರು ನಾನಿ ಜೊತೆ ನಟಿಸಿದ 'ಹಿಟ್ 3' ಸಿನಿಮಾ ಸಕ್ಸಸ್ ಕಂಡಿದೆ. ಈ ಬೆನ್ನಲ್ಲೇ ಅವರು ಸದ್ಗುರು ಆಶ್ರಮಕ್ಕೆ ಭೇಟಿ ನೀಡಿ ಲಿಂಗ ಭೈರವಿ ಮೊರೆ ಹೋಗಿದ್ದಾರೆ. 'ಹಿಟ್ 3' ಚಿತ್ರ ಗೆದ್ದ ಬೆನ್ನಲ್ಲೇ ಸದ್ಗುರು ಆಶ್ರಮಕ್ಕೆ ಭೇಟಿ ನೀಡಿ ಕಾಲ ಕಳೆದಿದ್ದಾರೆ. ಅಲ್ಲಿ ಲಿಂಗ ಭೈರವಿ ದೇವಿಯ ಪೂಜೆ ಪುರಸ್ಕಾರಗಳನ್ನು ಮಾಡಿದ್ದಾರೆ. ಪೂಜೆಯ ಫೋಟೋಗಳನ್ನು ನಟಿ ಹಂಚಿಕೊಂಡಿದ್ದಾರೆ. ಯಶ್ ನಟನೆಯ 'ಕೆಜಿಎಫ್ 2' ಚಿತ್ರದ ಸಕ್ಸಸ್ ಬಳಿಕ ಒಂದೊಳ್ಳೆಯ ಸಿನಿಮಾಗಾಗಿ ನಟಿ ಕಾಯುತ್ತಿದ್ದರು. ಈಗ ಹಿಟ್ 3ಯಿಂದ ಸಿನಿಮಾ ಕೆರಿಯರ್‌ಗೆ ಬ್ರೇಕ್ ಸಿಕ್ಕಿದೆ. ತೆಲುಸು ಕದಾ ಚಿತ್ರದಲ್ಲಿ ನಟಸಿದ್ದು ಮತ್ತು ರಾಶಿ ಖನ್ನಾ ಜೊತೆ ಶ್ರೀನಿಧಿ ಕೂಡ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಈ ಸಿನಿಮಾ ರಿಲೀಸ್ ಬಗ್ಗೆ ಇನ್ನೂ ಅಪ್‌ಡೇಟ್ ಸಿಗಬೇಕಿದೆ. ಕನ್ನಡದ ನಟ ಸುದೀಪ್ ಮುಂದಿನ ಸಿನಿಮಾಗೆ ಶ್ರೀನಿಧಿ ನಾಯಕಿ ಎಂದು ಚಿತ್ರತಂಡ ಘೋಷಿಸಿತ್ತು. ಈ ಬಗ್ಗೆ ಹೆಚ್ಚಿನ ಮಾಹಿತಿ ಸಿಗಬೇಕಿದೆ.

ಸಂಭಾವನೆ ಇಳಿಸಿಕೊಂಡ್ರಾ 'ಕಿಸ್ಸಿಕ್' ಬೆಡಗಿ

ಡ್ಯಾನ್ಸಿಂಗ್ ಕ್ವೀನ್ ಎಂದೇ ಫೇಮಸ್ ಆಗಿರುವ ಶ್ರೀಲೀಲಾ ತೆಲುಗು ಚಿತ್ರಗಳ ಜೊತೆ ಬಾಲಿವುಡ್‌ನಲ್ಲೂ ಬ್ಯುಸಿಯಾಗಿದ್ದಾರೆ. ಇದೀಗ ಅವರ ಬಗ್ಗೆ ಹೊಸದೊಂದು ಗುಲ್ಲೆದ್ದಿದೆ. ಬಾಲಿವುಡ್ ಚಿತ್ರಕ್ಕಾಗಿ ತೆಲುಗು ಚಿತ್ರಕ್ಕಿಂತ ಕಮ್ಮಿ ಸಂಭಾವನೆಗೆ ಒಪ್ಪಿಕೊಂಡು ಸಿನಿಮಾ ಮಾಡ್ತಿದ್ದಾರೆ ಎನ್ನಲಾದ ಸುದ್ದಿಯೊಂದು ಹರಿದಾಡುತ್ತಿದೆ. ಶ್ರೀಲೀಲಾ ನಟನೆಯ ಸಿನಿಮಾಗಳು ಹಿಟ್ ಆಗಿಲ್ಲದಿದ್ರೂ ಅವರಿಗಿರುವ ಕ್ರೇಜ್ ಕಮ್ಮಿಯಾಗುತ್ತಿಲ್ಲ. ಅದರಲ್ಲೂ 'ಪುಷ್ಪ 2' ಬಳಿಕ ಕಿಸ್ಸಿಕ್ ಬೆಡಗಿಗೆ ಬೇಡಿಕೆ ಹೆಚ್ಚಾಗಿದೆ ಎಂದರೆ ತಪ್ಪಿಲ್ಲ. ಇದರ ನಡುವೆ ಬಾಲಿವುಡ್ ಚಿತ್ರಕ್ಕಾಗಿ ನಟಿ ಒಂದು ಕೋಟಿ ಸಂಭಾವನೆ ಕಮ್ಮಿ ಪಡೆದಿದ್ದಾರೆ ಎನ್ನಲಾದ ಸುದ್ದಿ ಚರ್ಚೆಗೆ ಗ್ರಾಸವಾಗಿದೆ. ತೆಲುಗಿನ ಒಂದು ಸಿನಿಮಾಗೆನೇ 3 ಕೋಟಿ ರೂ. ಸಂಭಾವನೆ ಪಡೆಯುತ್ತಿದ್ದರು ಎನ್ನಲಾಗಿದ್ದು, ಈಗ ಬಾಲಿವುಡ್ 'ಆಶಿಕಿ 3'ಗೆ 2 ಕೋಟಿ ರೂ. ಸಂಭಾವನೆಗೆ ಒಪ್ಪಿಕೊಂಡಿದ್ದಾರೆ. ತಮಗೆ ಬೇಡಿಕೆ ಇದ್ರೂ ಬಾಲಿವುಡ್ ಸಿನಿಮಾಗಳ ಆಸೆಗೆ 1 ಕೋಟಿ ರೂ. ಸಂಭಾವನೆ ಇಳಿಸಿಕೊಂಡ್ರಾ ಎಂಬ ಪ್ರಶ್ನೆ ಅನೇಕರಲ್ಲಿ ಮೂಡಿದೆ. ಇಷ್ಟಕ್ಕೂ ಈ ವಿಚಾರನಾ ಶ್ರೀಲೀಲಾ ಅವರೇ ಸ್ಪಷ್ಟನೆ ನೀಡಬೇಕಿದೆ.

ಹಸೆಮಣೆ ಏರಿದ ಶಮಂತ್ ಗೌಡ

ಎರಡು ರೀತಿಯ ಪದ್ಧತಿಯಂತೆ ಮದುವೆ

ಲಕ್ಷ್ಮಿ ಬಾರಮ್ಮ ನಟ ಶಮಂತ್ ಬ್ರೋ ಗೌಡ ಅವರು ಇಂದು (ಮೇ 18) ಹಸೆಮಣೆ ಏರಿದ್ದಾರೆ. ಬಹುಕಾಲದ ಗೆಳತಿ ಮೇಘನಾ ಜೊತೆ ಅದ್ಧೂರಿಯಾಗಿ ಮದುವೆಯಾಗಿದ್ದಾರೆ. ಮದುವೆಯ ಸಂಭ್ರಮದ ಫೋಟೋಗಳು ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗ್ತಿದೆ. ಪ್ರೀತಿಸಿದ ಹುಡುಗಿ ಮೇಘನಾಗೆ ಖುಷಿ ಖುಷಿಯಾಗಿ ಶಮಂತ್ ತಾಳಿ ಕಟ್ಟುತ್ತಿರುವ ಫೋಟೋ ಸದ್ದು ಮಾಡುತ್ತಿದೆ. ಹೊಸ ಬಾಳಿಗೆ ಕಾಲಿಟ್ಟಿರುವ ನವಜೋಡಿಗೆ ಫ್ಯಾನ್ಸ್ ಶುಭಕೋರಿದ್ದಾರೆ. ನಿನ್ನೆ ರಾತ್ರಿ ನಡೆದ ಆರತಕ್ಷತೆಗೆ ದಿಯಾ ಖ್ಯಾತಿಯ ಪೃಥ್ವಿ ಅಂಬರ್, ಬಿಗ್ ಬಾಸ್ ನವಾಜ್, ರಯಾಪರ್ ಆಲ್ ಓಕೆ, ನಟಿ ಮೌನ ಗುಡ್ಡೆಮನೆ, 'ಭಾಗ್ಯಲಕ್ಷ್ಮಿ' ಸೀರಿಯಲ್ ಬಾಲನಟ ಗುಂಡಣ್ಣ ಅಲಿಯಾಸ್ ನಿಹಾರ್, ತನ್ವಿ ಅಲಿಯಾಸ್ ಅಮೃತಾ ಸೇರಿದಂತೆ ಅನೇಕರು ಭಾಗಿಯಾಗಿದ್ದಾರೆ.

ಕಾಲೇಜ್ ಕಾರ್ಯಕ್ರಮವೊಂದರಲ್ಲಿ ಶಮಂತ್ ಗೆಸ್ಟ್ ಆಗಿ ಆಗಮಿಸಿದ್ದರು. ಅಲ್ಲಿ ಮೇಘನಾ ಪರಿಚಯ ಆಗಿತ್ತು. ಅಲ್ಲಿಂದ ಶುರುವಾದ ಸ್ನೇಹ ಮದುವೆಗೆ ಮುನ್ನುಡಿ ಬರೆದಿದೆ. ಮನೆಯವರ ಸಮ್ಮತಿ ಪಡೆದು ಇತ್ತೀಚೆಗೆ ಅದ್ಧೂರಿಯಾಗಿ ನಿಶ್ಚಿತಾರ್ಥ ಮಾಡಿಕೊಂಡಿದ್ದರು. ಶಮಂತ್ ಮೂಲತಃ ಉತ್ತರ ಕರ್ನಾಟಕದವರು. ಶಮಂತ್ ಹಿರೇಮಠ ಅವರ ಪೂರ್ಣ ಹೆಸರು. ಇನ್ನೂ ಮೇಘನಾ ಮರಾಠಿಗರು. ಹೀಗಾಗಿ ಎರಡು ರೀತಿಯ ಪದ್ಧತಿಯಂತೆ ಮದುವೆ ಶಾಸ್ತ್ರಗಳು ನಡೆಯಲಿದೆ. 'ಬಿಗ್ ಬಾಸ್ ಕನ್ನಡ 8'ರಲ್ಲಿ ಶಮಂತ್ ಸ್ಪರ್ಧಿಯಾಗಿದ್ದರು. ಈ ಶೋನಲ್ಲಿ ಮಂಜು ಪಾವಗಡ ಗೆದ್ದಿದ್ದರು. ಈ ಕಾರ್ಯಕ್ರಮ ಬಳಿಕ 'ಲಕ್ಷ್ಮಿ ಬಾರಮ್ಮ' ಸೀರಿಯಲ್‌ನಲ್ಲಿ ಶಮಂತ್ ಲೀಡ್ ಹೀರೋ ಆಗಿ ನಟಿಸಿದ್ದರು.

ಟ್ರಾವಿಸ್ ಹೆಡ್‌ಗೆ ಕೊರೊನಾ ಪಾಸಿಟಿವ್



ಸನ್‌ರೈಸರ್ಸ್ ಹೈದರಾಬಾದ್ ತಂಡದ ಆಟಗಾರ ಟ್ರಾವಿಸ್ ಹೆಡ್ ಗೆ ಕೋವಿಡ್-19 ಸೋಂಕು ತಗುಲಿರುವುದು ದೃಢಪಟ್ಟಿದೆ. ಇದರಿಂದಾಗಿ ಅವರು ಲಕ್ನೋ ವಿರುದ್ಧದ ಪಂದ್ಯವನ್ನು ತಪ್ಪಿಸಿಕೊಳ್ಳುವರು. ತಂಡದ ಕೋಚ್ ಡೇನಿಯಲ್ ವೆಟ್ಟೋರಿ ಈ ಸುದ್ದಿಯನ್ನು ಬಹಿರಂಗಪಡಿಸಿದ್ದಾರೆ. ಹೆಡ್ ಆಸ್ಟ್ರೇಲಿಯಾದಲ್ಲಿದ್ದಾಗ ಸೋಂಕಿಗೆ ಒಳಗಾಗಿದ್ದು, ಭಾರತಕ್ಕೆ ತಡವಾಗಿ ಆಗಮಿಸುತ್ತಾರೆ. ಈ ಘಟನೆ ಐಪಿಎಲ್ ನಲ್ಲಿ ನಾಲ್ಕು ವರ್ಷಗಳ ನಂತರ ಮೊದಲ ಕೋವಿಡ್ ಪ್ರಕರಣವಾಗಿದೆ.

ಅರ್ಧಕ್ಕೆ ನಿಂತಿದ್ದ 2025 ರ ಐಪಿಎಲ್ ಸೀಸನ್ ಮತ್ತೆ ಪ್ರಾರಂಭವಾಗಿದೆ. ಆದರೆ ಅಷ್ಟರಲ್ಲಿ ಒಂದು ಆಘಾತಕಾರಿ ಸುದ್ದಿ ಹೊರಬಿದ್ದಿದೆ. ಐಪಿಎಲ್‌ನಲ್ಲಿ ಆಡುತ್ತಿರುವ ಸನ್‌ರೈಸರ್ಸ್ ಹೈದರಾಬಾದ್ ತಂಡದ ಸ್ಟಾರ್ ವಿದೇಶಿ ಆಟಗಾರ ಟ್ರಾವಿಸ್ ಹೆಡ್‌ಗೆ ಕೊರೊನಾ ಸೋಂಕು ತಗುಲಿದೆ. ಇದರಿಂದಾಗಿ ಅವರು ಸಮಯಕ್ಕೆ ಸರಿಯಾಗಿ ಭಾರತಕ್ಕೆ ಬರಲು ಸಾಧ್ಯವಾಗಿಲ್ಲ. ಹೀಗಾಗಿ ಹೆಡ್ ತಂಡದ ಮುಂದಿನ ಪಂದ್ಯದಲ್ಲಿ ಆಡಲು ಸಾಧ್ಯವಾಗುವುದಿಲ್ಲ. ಸನ್‌ರೈಸರ್ಸ್ ಹೈದರಾಬಾದ್ ತಂಡದ ಆಸ್ಟ್ರೇಲಿಯಾದ ಆರಂಭಿಕ ಆಟಗಾರ ಟ್ರಾವಿಸ್ ಹೆಡ್‌ಗೆ ಕೊರೊನಾ ವೈರಸ್ ಸೋಂಕು ತಗುಲಿರುವುದು ದೃಢಪಟ್ಟಿದೆ ಎಂದು ತಂಡದ ಮುಖ್ಯ ಕೋಚ್ ಡೇನಿಯಲ್ ವೆಟ್ಟೋರಿ ಭಾನುವಾರ ಬಹಿರಂಗಪಡಿಸಿದ್ದಾರೆ.

ಆಸ್ಟ್ರೇಲಿಯಾದಲ್ಲಿರುವ ಟ್ರಾವಿಸ್ ಹೆಡ್: ಭಾರತ-ಪಾಕಿಸ್ತಾನ ಉದ್ವಿಗ್ನತೆಯಿಂದಾಗಿ ಐಪಿಎಲ್ 2025 ಅನ್ನು ಅರ್ಧಕ್ಕೆ ನಿಲ್ಲಿಸಲಾಯಿತು. ಇದರಿಂದಾಗಿ ಎಲ್ಲಾ ವಿದೇಶಿ ಆಟಗಾರರು ತಮ್ಮ ಮನೆಗಳಿಗೆ ಮರಳಿದ್ದರು. ಎಲ್ಲರಂತೆ ಟ್ರಾವಿಸ್ ಹೆಡ್ ಕೂಡ ತನ್ನ ದೇಶ ಆಸ್ಟ್ರೇಲಿಯಾಕ್ಕೆ ಮರಳಿದ್ದರು. ಆದರೆ ಹೈದರಾಬಾದ್ ತಂಡದ ನಾಯಕ ಪ್ಯಾಟ್ ಕಮ್ಮಿನ್ಸ್ ಭಾರತಕ್ಕೆ ಮರಳಿದಾಗ, ಟ್ರಾವಿಸ್ ಹೆಡ್ ಅವರೊಂದಿಗೆ ಭಾರತಕ್ಕೆ ಬಂದಿರಲಿಲ್ಲ. ಇದೀಗ ಇದರ ಹಿಂದಿನ ಕಾರಣ ಬಹಿರಂಗಗೊಂಡಿದ್ದು, ಹೆಡ್ ಕೊರೊನಾ ಸೋಂಕಿಗೆ ತುತ್ತಾಗಿದ್ದಾರೆ. ಸನ್‌ರೈಸರ್ಸ್ ತನ್ನ ಮುಂದಿನ ಪಂದ್ಯದಲ್ಲಿ ಮೇ 19, ಸೋಮವಾರ ಲಕ್ನೋ ಸೂಪರ್ ಜೈಂಟ್ಸ್ ತಂಡವನ್ನು ಎದುರಿಸಲಿದೆ ಆದರೆ ಹೆಡ್ ಆ ಪಂದ್ಯದಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲ.

ಮುಂದಿನ ಪಂದ್ಯಕ್ಕೆ ಅಲಭ್ಯ: ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಸನ್‌ರೈಸರ್ಸ್ ಕೋಚ್ ವೆಟ್ಟೋರಿ, 'ಹೆಡ್ ಆಸ್ಟ್ರೇಲಿಯಾದಲ್ಲಿದ್ದಾಗ ಕೊರೊನಾ ವೈರಸ್ ಸೋಂಕಿಗೆ ತುತ್ತಾಗಿದ್ದಾರೆ. ಇದರಿಂದಾಗಿ ಅವರು ತಕ್ಷಣ ಭಾರತಕ್ಕೆ ಮರಳಲು ಸಾಧ್ಯವಾಗಲಿಲ್ಲ. ಇದೀಗ ಅವರು ಸೋಮವಾರ ಬೆಳಿಗ್ಗೆ ಇಲ್ಲಿಗೆ ತಲುಪುತ್ತಾರೆ. ಈ ಕಾರಣದಿಂದಾಗಿ ಅವರು ಲಕ್ನೋ ವಿರುದ್ಧ ಆಡಲು ಸಾಧ್ಯವಾಗುವುದಿಲ್ಲ, ಆದರೆ ಮುಂದಿನ ಪಂದ್ಯದಲ್ಲಿ ಆಡುತ್ತಾರೋ ಇಲ್ಲವೋ ಎಂಬುದು ಅವರು ಬಂದ ನಂತರವೇ ನಿರ್ಧರಿಸಲಾಗುವುದು ಎಂದು ವೆಟ್ಟೋರಿ ಹೇಳಿದ್ದಾರೆ. ಆದಾಗ್ಯೂ, ಹೆಡ್ ಅನುಪಸ್ಥಿತಿಯು ಹೈದರಾಬಾದ್ ಮೇಲೆ ಹೆಚ್ಚಿನ ಪರಿಣಾಮ ಬೀರುವುದಿಲ್ಲ

4 ವರ್ಷಗಳ ನಂತರ ಕೊರೊನಾ ಸದ್ದು!

ಅಚ್ಚರಿಯ ವಿಷಯವೆಂದರೆ ಕಳೆದ 4 ವರ್ಷಗಳಲ್ಲಿ ಐಪಿಎಲ್‌ನಲ್ಲಿ ಕೊರೊನಾ ವೈರಸ್ ಸೋಂಕಿನ ಮೊದಲ ಪ್ರಕರಣ ಇದಾಗಿರಬಹುದು. ಇದಕ್ಕೂ ಮೊದಲು, ಐಪಿಎಲ್ 2021 ರ ಸೀಸನ್‌ನಲ್ಲಿ ಕೊರೊನಾ ವೈರಸ್ ಪ್ರಕರಣಗಳು ವರದಿಯಾಗಿದ್ದವು. ಇದರಿಂದಾಗಿ ಪಂದ್ಯಾವಳಿಯನ್ನು ಅರ್ಧಕ್ಕೆ ನಿಲ್ಲಿಸಬೇಕಾಯಿತು ಮತ್ತು ಕೆಲವು ತಿಂಗಳುಗಳ ನಂತರ ಉಳಿದ ಪಂದ್ಯಾವಳಿಯನ್ನು ಯುಎಇಯಲ್ಲಿ ಆಯೋಜಿಸಲಾಯಿತು. ಅಂದಿನಿಂದ, ಮುಂದಿನ ಮೂರು ಸೀಸನ್ ಯಾವುದೇ ಸಮಸ್ಯೆಗಳಿಲ್ಲದೆ ನಡೆದಿದ್ದವು.

ಕೊಹ್ಲಿ ಬಳಿ ತುಂಬಿ ಹರಿಯಲಿದೆ ಕಣ್ಣೀರ ಧಾರೆ



ಆರ್‌ಸಿಬಿ ಡ್ರೆಸ್ಸಿಂಗ್ ರೂಮ್‌ಗೆ ಎಂಟ್ರಿ

ಮೇ 17 ರ ಶನಿವಾರ ಎಂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದ ಕೋಲ್ಕತ್ತಾ ನೈಟ್ ರೈಡರ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರಿನ ನಡುವಿನ 59ನೇ ಪಂದ್ಯ ಮಳೆಯಿಂದಾಗಿ ಒಂದು ಎಸೆತವೂ ಬೌಲ್ ಆಗದೆ ರದ್ದಾಯಿತು. ಹೀಗಾಗಿ ಅಭಿಮಾನಿಗಳು ನಿರಾಶೆಯಿಂದ ಪೆವಿಲಿಯನ್ ತೊರೆದರಾದರೂ, ಆರ್‌ಸಿಬಿ ಡ್ರೆಸ್ಸಿಂಗ್ ರೂಮ್‌ಗೆ ಎಂಟ್ರಿಕೊಟ್ಟಿದ್ದ ಯೂನಿವರ್ಸ್ ಬಾಸ್ ಕ್ರಿಸ್ ಗೇಲ್ ಇಡೀ ತಂಡಕ್ಕೆ ಹೊಸ ಚೈತನ್ಯ ತುಂಬುವ ಕೆಲಸ ಮಾಡಿದರು. ಇದೀಗ ಅದರ ವಿಡಿಯೋವನ್ನು ಆರ್‌ಸಿಬಿ ತನ್ನ ಸೋಶಿಯಲ್ ಮೀಡಿಯಾ ಖಾತೆಯಲ್ಲಿ ಹಂಚಿಕೊಂಡಿದೆ.

ಆರ್‌ಸಿಬಿ ಪರ ಬಹಳಷ್ಟು ವರ್ಷ ಆಡಿದ್ದ ಕ್ರಿಸ್ ಗೇಲ್ ಆರ್‌ಸಿಬಿ ಪಂದ್ಯ ನೋಡಲು ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಆಗಮಿಸಿದ್ದರು. ಆದರೆ ಮಳೆಯಿಂದಾಗಿ ಪಂದ್ಯದ ಟಾಸ್ ಕೂಡ ನಡೆಯಲಿಲ್ಲ. ಆದಾಗ್ಯೂ ಆಟಗಾರರನ್ನು ಭೇಟಿಯಾಗಲು ಡ್ರೆಸ್ಸಿಂಗ್ ರೂಮ್‌ಗೆ ಬಂದ ಗೇಲ್‌ರನ್ನು ಫಿಲ್ ಸಾಲ್ಟ್ ಸೇರಿದಂತೆ ಆರ್‌ಸಿಬಿಯ ಎಲ್ಲಾ ಆಟಗಾರರು ಆತ್ಮೀಯವಾಗಿ ಸ್ವಾಗತಿಸಿದರು. ಗೇಲ್‌ರನ್ನು ನೋಡಿದ ಎಲ್ಲಾ ಆಟಗಾರರ ಮೊಗದಲ್ಲಿ ಸಂತೋಷ ತುಂಬಿ ತುಳುಕಿತು.

ವಾಸ್ತವವಾಗಿ ಐಪಿಎಲ್‌ನಲ್ಲಿ ಕೆಕೆಆರ್ ಪರ ಮೊದಲ ಮೂರು ಸೀಸನ್‌ಗಳನ್ನು ಆಡಿದ ನಂತರ, ಗೇಲ್ 2011 ರಲ್ಲಿ ಆರ್‌ಸಿಬಿ ಸೇರಿದರು. ಅಲ್ಲಿಂದ ಹಿಂತಿರುಗಿ ನೋಡದ ಗೇಲ್, 2018 ರಲ್ಲಿ ಪಂಜಾಬ್ ಕಿಂಗ್ಸ್ ಸೇರುವ ಮೊದಲು ಏಳು ಸೀಸನ್‌ಗಳ ಕಾಲ ಚಾಲೆಂಜರ್ಸ್‌ನೊಂದಿಗೆ ಇದ್ದರು. 2021 ರ ಆವೃತ್ತಿಯು ಐಪಿಎಲ್‌ನಲ್ಲಿ ಅವರ ಕೊನೆಯ ಆವೃತ್ತಿಯಾಗಿತ್ತು. 142 ಐಪಿಎಲ್ ಪಂದ್ಯಗಳಲ್ಲಿ, ಗೇಲ್ 39.72 ಸರಾಸರಿಯಲ್ಲಿ 4965 ರನ್ ಗಳಿಸಿದ್ದಾರೆ. ಇದರಲ್ಲಿ ಆರು ಶತಕ ಮತ್ತು 31 ಅರ್ಧಶತಕಗಳು ಸೇರಿವೆ. 2022 ರಲ್ಲಿ, ಗೇಲ್ ಅವರನ್ನು ಎಬಿ ಡಿವಿಲಿಯರ್ಸ್ ಜೊತೆಗೆ ಆರ್‌ಸಿಬಿ ಹಾಲ